# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 859(994) |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15/12/2025 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಗಡಿನಾಡು ಪ್ರದೇಶದಲ್ಲಿ ಎಷ್ಟು ಹಳ್ಳಿಗಳನ್ನು ಗುರುತಿಸಿದೆ ಹಾಗೂ ಗಡಿನಾಡು ಕನ್ನಡರಿಗೆ ನೀಡುವ ಸೌಲಭ್ಯಗಳು ಯಾವುವು: (ಸಂಪೂರ್ಣ ವಿವರ ನೀಡುವುದು) | ರಾಜ್ಯದ 19 ಗಡಿ ಜಿಲ್ಲೆಗಳ 63 ತಾಲ್ಲೂಕುಗಳನ್ನು ಗಡಿ ತಾಲ್ಲೂಕುಗಳೆಂದು ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2010ರಲ್ಲಿ ಗುರುತಿಸಲಾಗಿದೆ. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪತ್ರ ಸಂಖ್ಯೆ:ನದಾವಿವಿವಿ/ನಕಾಶೆ-08/2020-21, ದಿನಾಂಕ:07.07.2020ರಂತೆ 861 ಹಳ್ಳಿಗಳನ್ನು ಗಡಿ ಹಳ್ಳಿಗಳೆಂದು ಗುರುತಿಸಿರುತ್ತಾರೆ.<br><br>ರಾಜ್ಯದ 19 ಗಡಿ ಜಿಲ್ಲೆಗಳ 63 ಗಡಿ ತಾಲ್ಲೂಕುಗಳಲ್ಲಿ ಹಾಗೂ 06 ಹೊರರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರ, ತೆಲಂಗಾಣ, ಕೇರಳ ಮತ್ತು ಗೋವಾ ರಾಜ್ಯಗಳ ಕನ್ನಡ ಮಾಧ್ಯಮ ಶಾಲೆಗಳಲ್ಲಿ, ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ಹಾಗೂ ಅನ್ಯ ಭಾಷಾ ಪ್ರಭಾವ ಹೆಚ್ಚಿರುವ ಪ್ರದೇಶಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಶಾಲಾ ಕೊಠಡಿ ನಿರ್ಮಾಣ .<br>• ಸಾಂಸ್ಕೃತಿಕ ಭವನ ನಿರ್ಮಾಣ.<br>• ಶಾಲಾ ಆವರಣ ಗೋಡೆ/ಶೌಚಾಲಯ/ ಗ್ರಂಥಾಲಯ ಕೊಠಡಿಗಳ ನಿರ್ಮಾಣ.<br>• ಸ್ಮಾರ್ಟ್ ಕ್ಲಾಸ್.<br>• ಕನ್ನಡ ಪುಸ್ತಕಗಳನ್ನು ಒದಗಿಸುವುದು.<br>• ಬಯಲು ರಂಗಮಂದಿರ ನಿರ್ಮಾಣ.<br>• ಸಾಂಸ್ಕೃತಿಕ ಕಾರ್ಯಕ್ರಮ. |
| ಆ) | ಗಡಿನಾಡು ಮತ್ತು ಹೊರನಾಡು ಕನ್ನಡರಿಗೆ ಸೌಲಭ್ಯಕ್ಕೆ ಸಂಬಂಧಿಸಿದಂತೆ ರಚಿಸಿದ ಸಮಿತಿಗಳಾವುವು : ಸದರಿ ಸಮಿತಿಗಳ ವರದಿಗಳ ಪ್ರಮುಖ ಅಂಶಗಳಾವುವು: ಅವುಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಮಿತಿವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು.) | 1. **ಶ್ರೀ ವಾಟಾಳ್ ನಾಗರಾಜ ರವರ ಏಕ ಸದಸ್ಯ ಪೀಠದ ವರದಿ-2000, ಅನುಬಂಧ-1ರಲ್ಲಿ** ಸದರಿ ವರದಿಯ ಪ್ರಮುಖ ಅಂಶಗಳನ್ನು ನೀಡಲಾಗಿದೆ<br>2. **ಗಡಿನಾಡು ಮತ್ತು ಹೊರನಾಡು ಕನ್ನಡಿಗರ ಹಿತ ರಕ್ಷಣೆಗಾಗಿ ಕನ್ನಡದ ಹಿರಿಯ ಸಾಹಿತಿಗಳಾದ ಡಾ. ಬರಗೂರು ರಾಮಚಂದ್ರಪ್ಪ ರವರ ಗಡಿನಾಡು ಅಧ್ಯಯನ ವರದಿ-2002.** ಸದರಿ ವರದಿಯ ಪ್ರಮುಖ ಅಂಶಗಳನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ.<br>3. ಡಾ\|\| ಸರೋಜಿನಿ ಮಹಿಷಿ ರವರ ವರದಿ-2006ರ ಮೇಲೆ ಡಾ. ಎಸ್.ಜಿ. ಸಿದ್ಧರಾಮಯ್ಯ ಹಿಂದಿನ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇವರು ಸರ್ಕಾರಕ್ಕೆ ನೀಡಿದ ಅಂತಿಮ ಶಿಫಾರಸ್ಸು-2017ರಲ್ಲಿ ಹೊರನಾಡ ಕನ್ನಡಿಗರಿಗೆ ಸಂಬಂಧಿಸಿದಂತೆ ಮಾಡಿದ ಪ್ರಮುಖ ಶಿಫಾರಸ್ಸು ಈ ಕೆಳಕಂಡಂತಿರುತ್ತದೆ.<br>**"ಕ್ರ.ಸಂ: 10 (ಆ) ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ೧೦ನೇ ತರಗತಿಯವರೆಗೆ ಒದಿದ ವಿದ್ಯಾರ್ಥಿಗಳಿಗೂ ರಾಜ್ಯದಲ್ಲಿ ಒದಿರುವ ವಿದ್ಯಾರ್ಥಿಗಳಿಗೆ ಸಿಗುವ ಎಲ್ಲಾ ಸವಲತ್ತುಗಳೂ ಸಿಗಬೇಕು. ಅವರಿಗೆ ಉನ್ನತ ಶಿಕ್ಷಣಕ್ಕೆ ಹಾಗೂ ಉದ್ಯೋಗಕ್ಕೆ ತೆರೆದ ಅವಕಾಶವಿರಬೇಕು"-ಅನುಬಂಧ'-3**ರಲ್ಲಿ ಲಗತ್ತಿಸಿದೆ. |

| | | |
|---|---|---|
| | | 4. ಶ್ರೀ ಹೆಚ್ ಕೆ ಪಾಟೀಲ್ ಅಂದಿನ ಸಚಿವರು ಇವರ ಸಚಿವ ಸಂಪುಟ ಉಪ ಸಮಿತಿಯ ಸಾಂಸ್ಕೃತಿಕ ನೀತಿಯ ಜಾರಿಗೆ ಮಾಡಿರುವ ಪ್ರಮುಖ ಶಿಫಾರಸ್ಸುಗಳನ್ವಯ ಮತ್ತು ಪೂರಕ ಆದೇಶ-2017ಅನ್ನು **ಅನುಬಂಧ-4** ರಲ್ಲಿ ಲಗತ್ತಿಸಿದೆ.<br>5. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಿಂದಿನ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ವರದಿ-2023ಅನ್ನು **ಅನುಬಂಧ-5**ರಲ್ಲಿ ಲಗತ್ತಿಸಿದೆ.<br>ಮೇಲ್ಕಂಡ ಕ್ರ.ಸ:1,2,3 ಮತ್ತು 5ರಲ್ಲಿನ ಪ್ರಮುಖ ವರದಿಗಳನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗಿದೆ. ಒಪ್ಪಿಗೆ ನೀಡಿರುವ ಬಗ್ಗೆ ಯಾವುದೇ ಕ್ರಮ ವಿರುವುದಿಲ್ಲ.<br><br>ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಲಭ್ಯವಿರುವ ಅನುದಾನದಲ್ಲಿ ಪ್ರಾಧಿಕಾರದ ಕಾಯ್ದೆ-2010ರನ್ವಯ ಮತ್ತು ಶ್ರೀ ಹೆಚ್ ಕೆ ಪಾಟೀಲ್ ಹಿಂದಿನ ಸಚಿವರು ಇವರ ಸಚಿವ ಸಂಪುಟ ಉಪ ಸಮಿತಿಯ ಸಾಂಸ್ಕೃತಿಕ ನೀತಿಯ ಜಾರಿಗೆ ಮಾಡಿರುವ ಪ್ರಮುಖ ಶಿಫಾರಸ್ಸುಗಳನ್ವಯ ಮತ್ತು ಪೂರಕ ಸರ್ಕಾರಿ ಆದೇಶ-2017ರನ್ವಯ ಗಡಿ ಭಾಗದ/ಹೊರ ರಾಜ್ಯಗಳ ಕನ್ನಡ ಶಾಲೆಗಳಲ್ಲಿ ಶಾಲಾ ಕೊಠಡಿ ನಿರ್ಮಾಣ, ಸಾಂಸ್ಕೃತಿಕ ಭವನ ನಿರ್ಮಾಣ, ಶಾಲಾ ಆವರಣ ಗೋಡೆ/ಶೌಚಾಲಯ/ ಗ್ರಂಥಾಲಯ ಕೊಠಡಿಗಳ ನಿರ್ಮಾಣ, ಸ್ಮಾರ್ಟ್ ಕ್ಲಾಸ್, ಕನ್ನಡ ಪುಸ್ತಕಗಳನ್ನು ಒದಗಿಸುವುದು, ಬಯಲು ರಂಗಮಂದಿರ ನಿರ್ಮಾಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಅನುದಾನ ನೀಡಿ ಅನುಷ್ಠಾನ ಮಾಡಲಾಗುತ್ತಿದೆ. |
| ಇ) | ಹೊರ ರಾಜ್ಯದಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವಸತಿ ಶಾಲೆ ಮತ್ತು ವಸತಿ ನಿಲಯಗಳಲ್ಲಿ (ಕಿತ್ತೂರ ರಾಣಿ ಚನ್ನಮ್ಮ, ನವೋದಯ ಹಾಗೂ ಸಮಾಜ ಕಲ್ಯಾಣ ವಸತಿ ನಿಲಯ, ಪರಿಶಿಷ್ಟ ಪಂಗಡ ಇಲಾಖೆ ವಸತಿ ನಿಲಯ ಮತ್ತು ಹಿಂದುಳಿದ ವರ್ಗಗಳ ವಸತಿ ನಿಲಯ) ಪ್ರವೇಶಾವಕಾಶ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಪ್ರವೇಶಾವಕಾಶ ನೀಡದಿರಲು ಕಾರಣಗಳೇನು: | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಲ್ಲಿ ಗಡಿನಾಡು/ಹೊರನಾಡು ಕನ್ನಡಿಗರ ವಿದ್ಯಾರ್ಥಿಗಳಿಗೆ ಪ್ರಸ್ತುತ ಮೀಸಲಾತಿಯನ್ನು ನಿಗಧಿಪಡಿಸಿರುವುದಿಲ್ಲ.<br>ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಸ್ತಾಪಿಸಿರುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಗಡಿನಾಡು/ಹೊರನಾಡು ಕನ್ನಡಿಗ ವಿದ್ಯಾರ್ಥಿಗಳಿಗೆ ಶೇ.5% ರಷ್ಟು ಮೀಸಲಾತಿಯನ್ನು ಕಲ್ಪಿಸುವಂತೆ ಈ ಕಛೇರಿ ಕಡತ ಸಂಖ್ಯೆ: BCWD-12037/43/2025-BCWD_HOSTEL-BCWD, ದಿನಾಂಕ: 21.07.2025ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತುತ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ ಹಾಗೂ<br>ಸಮಾಜ ಕಲ್ಯಾಣ ಇಲಾಖೆಯ, ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಪ್ರವೇಶಾವಕಾಶ ಪಡೆಯಲು ಪ್ರತಿ ಅಭ್ಯರ್ಥಿಯು ಕರ್ನಾಟಕ **ರಾಜ್ಯದ ಖಾಯಂ ನಿವಾಸಿಯಾಗಿರಬೇಕೆಂಬ ನಿಯಮವಿರುತ್ತದೆ.** |
| ಈ) | ಈ) ಸದರಿ ವಿದ್ಯಾರ್ಥಿಗಳಿಗೆ ಈ ಮೇಲ್ಕಂಡ ಸಂಸ್ಥೆಗಳಲ್ಲಿ ಪ್ರವೇಶಾವಕಾಶ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? | |

(ಡಿ.ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು



2

ಅನುಬಂಧ - 1

**ಶ್ರೀ ವಾಟಾಳ್ ನಾಗರಾಜ್, ಮಾನ್ಯ ಮಾಜಿ ಶಾಸಕರು ಇವರು ದಿನಾಂಕ: 18-08-2000 ರಂದು**

**ಸರ್ಕಾರಕ್ಕೆ ಸಲ್ಲಿಸಿದ ಮಧ್ಯಂತರ ವರದಿಯ 30 ಶಿಫಾರಸ್ಸುಗಳು**

| ಕ್ರ.ಸಂ | ಪ್ರಮುಖ ಶಿಫಾರಸ್ಸುಗಳು |
|---|---|
| 1 | ರಾಜ್ಯದ ಗಡಿ ಪ್ರದೇಶಗಳ/ ಹೊರರಾಜ್ಯದ ಗಡಿ ಪ್ರದೇಶಗಳ ಶಿಕ್ಷಣ/ಸಂಸ್ಕೃತಿ, ಉದ್ಯೋಗ– ಸಮಗ್ರ ಅಭಿವೃದ್ಧಿ ಬಗ್ಗೆ ಕೆಲಸ ಮಾಡಲು ಗಡಿ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸುವುದು.<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 2 | ಗಡಿನಾಡ ಸಂಘ ಸಂಸ್ಥೆಗಳಿಗೆ ಸಂಸ್ಕೃತಿ/ಸಾಹಿತ್ಯ ಕಾರ್ಯಕ್ರಗಳಿಗೆ ವಿಶೇಷ ಅನುದಾನ ನೀಡುವುದು.<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 3 | ಹೊರನಾಡಿನಲ್ಲಿ ಕನ್ನಡ ಶಾಲೆಗಳು ಮುಚ್ಚದಂತೆ ಪ್ರೋತ್ಸಾಹ/ ಕನ್ನಡ ಭವನ ನಿರ್ಮಾಣ/ ಆಟದ ಬಯಲು ನಿರ್ಮಾಣಕ್ಕೆ ಧಾರಾಳವಾಗಿ ಪ್ರಾಮುಖ್ಯತೆ.<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 4 | ಗಡಿನಾಡ ಸಂಘ ಸಂಸ್ಥೆಗಳು ಕನ್ನಡ ಭವನ ಕಟ್ಟಲು ಆಸಕ್ತಿ ವಹಿಸಿದ್ದರೆ ಸಂಪೂರ್ಣ ಅನುದಾನ ಸರ್ಕಾರ ನೀಡಬೇಕು<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 5 | ಹೊರನಾಡು ಉತ್ಸವ ನಡೆಸುವುದು<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 6 | ಗಡಿನಾಡು/ಹೊರನಾಡು ಕನ್ನಡ ಪ್ರದೇಶಗಳಲ್ಲಿ ಕನ್ನಡ ನಾಮಫಲಕ ಹಾಕುವುದು<br>**(ಲೋಕೋಪಯೋಗಿ ಇಲಾಖೆ)** |
| 7 | ಮುಖ್ಯಮಂತ್ರಿಗಳು ವರ್ಷಕ್ಕೆ ಎರಡು ಬಾರಿ ಹೊರನಾಡು ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಸಮಸ್ಯೆಗೆ ಸ್ಪಂದಿಸುವುದು ಹಾಗೂ ಹೊರನಾಡಿಗೆ ಭೇಟಿ ನೀಡುವುದು.<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 8 | ಬೆಂಗಳೂರಿನಲ್ಲಿ ಕನಿಷ್ಠ ಪಕ್ಷ 5 ಲಕ್ಷ ಜನ ಸೇರುವ ಗಡಿನಾಡ ಸಮ್ಮೇಳನ ಆಯೋಜನೆ<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 9 | ಬೆಂಗಳೂರು ನಗರದಲ್ಲಿ ಹೊರನಾಡು ಕನ್ನಡಿಗರ ಸಮಸ್ಯೆ ಪರಿಹಾರಕ್ಕಾಗಿ ಗಡಿನಾಡು ಕನ್ನಡ ಭವನ ನಿರ್ಮಿಸುವುದು. ಹಾಗೂ ಎಲ್ಲಾ ಗಡಿನಾಡು ಜಿಲ್ಲೆಗಳಲ್ಲಿ ಕನ್ನಡ ಭವನ ನಿರ್ಮಾಣ ಮತ್ತು ಎಲ್ಲಾ ಗಡಿ ತಾಲೂಕುಗಳಲ್ಲಿ ಗಡಿ ಭವನ ನಿರ್ಮಾಣ.<br>**(ಕನ್ನಡ ಅಭಿವೃದ್ಧಿ ಪ್ರಾಧಿಕಾರ,<br>ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ)** |
| 10 | ವಿವಿಧ ಅಕಾಡೆಮಿ/ಪ್ರಾಧಿಕಾರದಲ್ಲಿ ಹೊರನಾಡು ಕನ್ನಡಿಗರನ್ನು ಸದಸ್ಯರನ್ನಾಗಿ ನೇಮಿಸುವುದು.<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಮುಖ್ಯಮಂತ್ರಿಗಳ ಸಚಿವಾಲಯ)** |
| 11 | ಲೋಕಸಭಾ ಸದಸ್ಯರುಗಳಿಗೆ ಹೊರರಾಜ್ಯದ ಕನ್ನಡ ಪ್ರದೇಶಗಳ ಸ್ಥಿತಿಯ ಬಗ್ಗೆ ಮಾಹಿತಿ ನೀಡಿ ಕೇಂದ್ರ ಸರ್ಕಾರದ ಗಮನ ಸೆಳೆಯುವುದು.<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 12 | ಹೊರನಾಡು ಕನ್ನಡ ಪ್ರದೇಶಗಳಲ್ಲಿ ಅಲ್ಲಿನ ಸರ್ಕಾರಗಳು ಕನ್ನಡ ಸಾಹಿತ್ಯಸಂಸ್ಕೃತಿ ನಾಶ ಮಾಡಲು ಹೊರಟಿರುವ ವಿಷಯವನ್ನು ಪಟ್ಟಿ ಮಾಡುವುದು.<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 13 | ನೆರೆ ರಾಜ್ಯದ ಕನ್ನಡಿಗರ ಸಮಗ್ರ ಸಮೀಕ್ಷೆ<br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |

| | |
|---|---|
| 14 | ಗಡಿನಾಡು/ಹೊರನಾಡು ಅಂಚಿನಲ್ಲಿರುವ ಪ್ರದೇಶಗಳಲ್ಲಿ ನಡಿದಿರುವ ಅಭಿವೃದ್ಧಿ ಕಾರ್ಯಗಳ ಪರಿಶೀಲನೆ.<br><br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 15 | ಕನ್ನಡ ಶಾಲೆಗಳು/ ಸಂಘ ಸಂಸ್ಥೆಗಳ ಸಮಗ್ರ ಪರಿಶೀಲನೆ.<br><br>**(ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ)** |
| 16 | ಹೊರನಾಡು ಕನ್ನಡಿಗರಿಗೆ ವಿವಿಧ ಅಕಾಡೆಮಿಗಳಲ್ಲಿ ಹಾಗೂ ಲೋಕಸೇವಾ ಆಯೋಗದಲ್ಲಿ ಸೂಕ್ತ ಪ್ರಾತಿನಿಧ್ಯ<br><br>**(ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ).** |
| 17 | ನೆರೆ ರಾಜ್ಯದಲ್ಲಿ ಕನ್ನಡ ಮಾಧ್ಯಮ ಕಲಿತವರಿಗೆ ಶಿಕ್ಷಣ/ಉದ್ಯೋಗದಲ್ಲಿ ಮೀಸಲಾತಿ.<br>**(ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ).** |
| 18 | ಗಡಿ ಜಿಲ್ಲೆಗಳಲ್ಲಿ ಕನ್ನಡ ಅಭಿಮಾನವಿರುವ ಅಧಿಕಾರಿಗಳ ನೇಮಕ.<br>**(ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,** |
| 19 | ಹೊರನಾಡಿನ ಸಾಹಿತಿ/ ಕಲಾವಿದರು/ ಪತ್ರಕರ್ತರಿಗೆ ಗೌರವಧನ ನೀಡುವುದು.<br><br>**(ಕನ್ನಡ ಮತ್ತು ಸಂಸ್ಕೃತಿ,<br>ಹಾಗೂ ವಾರ್ತಾ ಇಲಾಖೆ)** |
| 20 | ಏಕೀಕರಣದಲ್ಲಿ ಪಾಲ್ಗೊಂಡವರಿಗೆ ಮಾಶಾಸನ.<br><br>**(ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ)** |
| 21 | ಮಂಜೇಶ್ವರದ ಗೋವಿಂದ ಪೈ ಸ್ಮಾರಕಕ್ಕೆ ಪ್ರತಿ ವರ್ಷ ಎರಡು ಲಕ್ಷ ಶಾಶ್ವತ ಅನುದಾನ ನೀಡುವುದು.<br><br>**(ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ)** |
| 22 | ಗಡಿನಾಡು ಭಾಗದ ಸಮಗ್ರ ಹೋರಾಟಗಾರರ ವಿವರ ಪಡೆಯುವುದು.<br><br>**(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)** |
| 23 | ಗಡಿನಾಡ ಜಿಲ್ಲೆಗಳಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆ ಬಲಪಡಿಸುವಿಕೆ.<br><br>**(ವಾರ್ತಾ ಮತ್ತು ಪ್ರಚಾರ ಇಲಾಖೆ)** |
| 24 | ಹೊರನಾಡು ಕನ್ನಡಿಗರು ರಚಿಸಿದ ಕೃತಿ ರಚಿಸಲು /ಖರೀದಿಸಲು ಅನುದಾನ.<br><br>**(ಕನ್ನಡ ಪುಸ್ತಕ ಪ್ರಾಧಿಕಾರ)** |
| 25 | ಗಡಿನಾಡು ಗ್ರಂಥಾಲಯಗಳಿಗೆ ಪುಸ್ತಕ ಒದಗಿಸುವುದು.<br><br>**(ಕನ್ನಡ ಪುಸ್ತಕ ಪ್ರಾಧಿಕಾರ)** |
| 26 | ಹೊರನಾಡು/ಗಡಿನಾಡು ಶಾಲಾ ಪ್ರವಾಸಿಗಳಿಗೆ ರಸ್ತೆ ತೆರಿಗೆ ವಸೂಲು ವಿನಾಯ್ತಿ.<br>**(ಸಾರಿಗೆ ಇಲಾಖೆ)** |
| 27 | ಗಡಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ರೂ 500-00 ಕೋಟಿ ಅನುದಾನ ಮೀಸಲು ಇಡುವುದು.<br><br>**(ಆರ್ಥಿಕ ಇಲಾಖೆ/ಯೋಜನಾ ಇಲಾಖೆ)** |
| 28 | ಗಡಿನಾಡ ಪ್ರದೇಶಗಳಲ್ಲಿ ಹೆಚ್ಚಿನ ಕೈಗಾರಿಕೆ ಸ್ಥಾಪನೆ / ಕನ್ನಡಿಗರಿಗೆ ಉದ್ಯೋಗ.<br>**(ಕೈಗಾರಿಕಾ ಇಲಾಖೆ)** |
| 29 | ಆಯಾ ರಾಜ್ಯದ ಕನ್ನಡ ಪ್ರದೇಶದ ಮುಖಂಡರುಗಳಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ದೊರಕಿರುವ ಸ್ಥಾನಮಾನದ ವಿವರಗಳು.<br><br>**(ವಿಧಾನ ಸಭೆ ಸಚಿವಾಲಯ/ವಿಧಾನ ಪರಿಷತ್ ಸಚಿವಾಲಯ)** |
| 30 | ಮಹಾಜನ್ ವರದಿಯ ಬಗ್ಗೆ.<br><br>**(ಗಡಿ ರಕ್ಷಣಾ ಆಯೋಗ)** |

# ಡಾ||ಬರಗೂರು ರಾಮಚಂದ್ರಪ್ಪರವರ ಗಡಿ ಅಧ್ಯಯನ ವರದಿ-2002 ರ 33 ಪ್ರಮುಖ ಶಿಫಾರಸ್ಸುಗಳು

**ಡಾ: ಬರಗೂರು ರಾಮಚಂದ್ರಪ್ಪ ರವರ ಪ್ರಮುಖ ಶಿಫಾರಸುಗಳು**

**ಶಿಫಾರಸ್ಸು–1**

ಗಡಿ ತಾಲ್ಲೂಕುಗಳಲ್ಲಿ ಕನಿಷ್ಠ ಹೋಬಳಿಗೊಂದರಂತೆ 'ಕನ್ನಡ ಮಾಧ್ಯಮ ವಸತಿ ಶಾಲೆ'ಗಳನ್ನು ಸ್ಥಾಪಿಸಬೇಕು.

**ಕ್ರಮ: ಸಾರ್ವಜನಿಕ ಶಿಕ್ಷಣ ಇಲಾಖೆ**
**ಸಮಾಜ ಕಲ್ಯಾಣ ಇಲಾಖೆ**
**ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ**

**ಶಿಫಾರಸು–2**

ಗಡಿನಾಡಿನಲ್ಲಿ ಕನ್ನಡ ಮಾಧ್ಯಮ ಮತ್ತು ಶಿಕ್ಷಣವನ್ನು ವಿಸ್ತರಿಸುವ ದೃಷ್ಟಿಯಿಂದ ಪ್ರತ್ಯೇಕವಾದ 'ಗಡಿನಾಡು ಶಿಕ್ಷಣ ನಿರ್ದೇಶನಾಲಯ' ವನ್ನು ಸ್ಥಾಪಿಸಬೇಕು. ಬೆಳಗಾವಿಯು ಈ ನಿರ್ದೇಶನಾಲಯದ ಕೇಂದ್ರ ಸ್ಥಾನವಾಗಬೇಕು.

**ಕ್ರಮ: ಸಾರ್ವಜನಿಕ ಶಿಕ್ಷಣ ಇಲಾಖೆ.**

**ಶಿಫಾರಸ್ಸು –3**

ಶಿಕ್ಷಣ ಕ್ಷೇತ್ರದಲ್ಲಿ ಸಾಮಾಜಿಕ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶದಿಂದ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಲ್ಪಸಂಖ್ಯಾತರಿಗಾಗಿ ಗಡಿಭಾಗಗಳಲ್ಲಿ ಉಚಿತ ವಿದ್ಯಾರ್ಥಿ ನಿಲಯಗಳನ್ನು ಗರಿಷ್ಠ ಪ್ರಮಾಣದಲ್ಲಿ ಪ್ರಾರಂಭಿಸಬೇಕು.

**ಕ್ರಮ: ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.**

**ಶಿಫಾರಸ್ಸು –4**

ಅ) ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಎಲ್ಲ ಗಡಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಹಣವನ್ನು ಒದಗಿಸಬೇಕು.

**ಕ್ರಮ: ಆರ್ಥಿಕ ಇಲಾಖೆ**

ಆ) ಗಡಿ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ಗಳು ತಮ್ಮ ತಮ್ಮ ಜಿಲ್ಲೆಗಳ ಗಡಿ ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗಾಗಿ ಪ್ರತ್ಯೇಕ ಹಣವನ್ನು ಜಿಲ್ಲಾ ಪಂಚಾಯತ್ ಬಜೆಟ್‌ನಲ್ಲಿ ಮೀಸಲಿಡಬೇಕು.

**ಕ್ರಮ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ**

**ಶಿಫಾರಸ್ಸು –5**

ಸಂಸದರು ಮತ್ತು ಶಾಸಕರು ತಮ್ಮ ನಿಧಿಯಿಂದ ಗಡಿನಾಡಿನ ಅಭಿವೃದ್ಧಿಗೆ ನಿರ್ದಿಷ್ಟ ಮೊತ್ತದ ಹಣವನ್ನು ಕಡ್ಡಾಯವಾಗಿ ಕೊಡಲು ಅನುಕೂಲವಾಗುವಂತೆ ನಿಯಮಾವಳಿಯನ್ನು ರೂಪಿಸಬೇಕು. ಸಂಸದರು ಮತ್ತು ಶಾಸಕರು ತಮ್ಮ ನಿಧಿಯಲ್ಲಿ ನಿರ್ದಿಷ್ಟ ಮೊತ್ತವನ್ನು ಗಡಿ ತಾಲ್ಲೂಕುಗಳಿಗಾಗಿ ವಿನಿಯೋಗಿಸಬೇಕು.

**ಕ್ರಮ: ಯೋಜನಾ ಇಲಾಖೆ.**

**ಶಿಫಾರಸ್ಸು –6**

ಗಡಿನಾಡು ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಮತ್ತು ವಿವಿಧ ಇಲಾಖೆಗಳ ಸಮನ್ವಯತೆಗಾಗಿ 'ಗಡಿನಾಡು ಅಭಿವೃದ್ಧಿ ಮಂಡಳಿ' ಯನ್ನು ರಚಿಸಬೇಕು. ಈ ಮಂಡಳಿಯ ಕೇಂದ್ರ ಸ್ಥಾನವು ಬೆಂಗಳೂರಾಗಿರಬೇಕು.

**ಕ್ರಮ:ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ.**

**ಶಿಫಾರಸ್ಸು –7**

ಗಡಿನಾಡಿನ ಸಮಾನ ಸಮಸ್ಯೆಗಳ ಚರ್ಚೆ ಹಾಗೂ ಪರಿಹಾರಕ್ಕಾಗಿ ಗಡಿ ರಾಜ್ಯಗಳ ಮುಖ್ಯಮಂತ್ರಿಗಳು, ಶಿಕ್ಷಣ ಖಾತೆ ಸಚಿವರು, ಸಂಸ್ಕೃತಿ ಖಾತೆ ಸಚಿವರು, ಸಂಬಂಧಪಟ್ಟ ಅಧಿಕಾರಿಗಳನ್ನು ಒಳಗೊಂಡ "ಅಂತರರಾಜ್ಯ ಗಡಿನಾಡು ವೇದಿಕೆ"ಯೊಂದನ್ನು ರಚಿಸಿಕೊಳ್ಳಬೇಕು. ಕರ್ನಾಟಕ ಸರ್ಕಾರವೇ ಈ ಪ್ರಯತ್ನಕ್ಕೆ ಮುಂದಾಗಬೇಕು. ವರ್ಷಕ್ಕೊಬ್ಬರಂತೆ, ಸರದಿಯ ಮೇಲೆ, ಗಡಿ ರಾಜ್ಯಗಳ ಮುಖ್ಯಮಂತ್ರಿಗಳು ಈ ವೇದಿಕೆಯ ಅಧ್ಯಕ್ಷರಾಗಬಹುದು.

**ಕ್ರಮ: ಮುಖ್ಯಮಂತ್ರಿಗಳ ಸಚಿವಾಲಯ.**

**ಶಿಫಾರಸ್ಸು –8**

ಗಡಿಭಾಗದಲ್ಲಿ ಮುಖ್ಯ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಕ ಮಾಡುವಾಗ ಅಥವಾ ವರ್ಗಾವಣೆ ಮಾಡುವಾಗ ಕನ್ನಡ ಪರ ಆಸಕ್ತಿಯನ್ನು ಆಧಾರವಾಗಿಟ್ಟುಕೊಂಡು ಆದ್ಯತೆ ಕೊಡಬೇಕು.

**ಕ್ರಮ: ಸಿ.ಆ.ಸು.ಇಲಾಖೆ**

| ಶಿಫಾರಸ್ಸು –9 |
| --- |
| ಕರ್ನಾಟಕ ಸರ್ಕಾರದ ನೌಕರರು, ಅಧಿಕಾರಿಗಳು, ಶಿಕ್ಷಕರು ಕನಿಷ್ಠ ಮೂರು ವರ್ಷಗಳ ಕಾಲ, ಗಡಿಭಾಗದಲ್ಲಿ ಕೆಲಸ ಮಾಡವುದನ್ನು ಕಡ್ಡಾಯಗೊಳಿಸಬೇಕು.<br>**ಕ್ರಮ: ಸಿ.ಆ.ಸು.ಇಲಾಖೆ** |
| **ಶಿಫಾರಸ್ಸು–10** |
| ಗಡಿ ಭಾಗದಲ್ಲಿರುವ ನೈಸರ್ಗಿಕ ಸಂಪನ್ಮೂಲ ಮತ್ತು ಅಗತ್ಯತೆಗಳನ್ನು ಗಮನಿಸಿ, ಸೂಕ್ತ ಸ್ಥಳಗಳನ್ನು ಗುರುತಿಸಿ ವಿವಿಧ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳುವುದಲ್ಲದೆ ಕೆಲವು ರಿಯಾಯತಿಗಳನ್ನೊಳಗೊಂಡ ವಿಶೇಷ ಕೈಗಾರಿಕಾ ನೀತಿಯನ್ನು ರೂಪಿಸಬೇಕು. ಗಡಿಭಾಗಗಳಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಬೇಕು.<br><br>**ಕ್ರಮ: ಕೈಗಾರಿಕಾ ಇಲಾಖೆ.** |
| **ಶಿಫಾರಸ್ಸು–11** |
| ಸಿರಾ ಮಧುಗಿರಿಗಳನ್ನು ಒಳಗೊಂಡಂತೆ ಅಗತ್ಯ ಗಡಿ ತಾಲ್ಲೂಕುಗಳಲ್ಲಿ ಸಹಜ ಜಲಸಂಪನ್ಮೂಲದ ಕ್ರೋಢೀಕರಣ ಹಾಗೂ ಬಳಕೆಗಾಗಿ ಫೀಡರ್ ಕಾಲುವೆ ಹಾಗೂ ಕೆರೆಗಳ ನಿರ್ಮಾಣ ಮಾಡಬೇಕು. ನೀರು ತಡೆಗೆ ತಕ್ಕ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು.<br>**ಕ್ರಮ: ಜಲ ಸಂಪನ್ಮೂಲ ಇಲಾಖೆ.**<br>**ಸಣ್ಣ ನೀರಾವರಿ ಇಲಾಖೆ** |
| **ಶಿಫಾರಸ್ಸು–12** |
| ಅ) 'ಗಡಿಮಾರ್ಗ' ಎಂಬ ಹೆಸರಿನಲ್ಲಿ ಯೋಜನೆಯನ್ನು ರೂಪಿಸಿ ಗಡಿಭಾಗದ ಎಲ್ಲಾ ರಸ್ತೆಗಳ ರಿಪೇರಿ ಮತ್ತು ಹೊಸ ರಸ್ತೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ದೊಡ್ಡ ಪ್ರಮಾಣದ ರಸ್ತೆಗಳಲ್ಲದೆ ಊರಿಂದ ಊರಿಗೆ ಕೂಡುರಸ್ತೆಗಳನ್ನು ಆದ್ಯತೆಯ ಮೇಲೆ ನಿರ್ಮಿಸಬೇಕು.<br><br>ಆ) ರಾಜ್ಯದ ಗಡಿ ಪ್ರವೇಶದ ಸ್ಥಳಗಳಲ್ಲಿ ಕಲಾತ್ಮಕ ಕಮಾನುಗಳನ್ನು ನಿರ್ಮಿಸಬೇಕು.<br><br>ಕ್ರಮ: **ಲೋಕೋಪಯೋಗಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.** |
| **ಶಿಫಾರಸ್ಸು–13** |
| ಗಡಿಭಾಗದಲ್ಲಿ ಸಾಮಾನ್ಯ ಹಾಗೂ ವಿಶೇಷ ಆಸ್ಪತ್ರೆಗಳನ್ನು ಆರಂಭಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.<br>**ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.** |
| **ಶಿಫಾರಸ್ಸು–14** |
| **ಜೋಯಿಡಾ(ಉತ್ತರ ಕನ್ನಡ ಜಿಲ್ಲೆ) ಪಾವಗಡ (ತುಮಕೂರು ಜಿಲ್ಲೆ), ಮೊಳಕಾಲ್ಮೂರು (ಚಿತ್ರದುರ್ಗ ಜಿಲ್ಲೆ), ಅಫಜಲಪುರ, ಆಳಂದ, ಚಿಂಚೋಳಿ(ಗುಲ್ಬರ್ಗ ಜಿಲ್ಲೆ), ಔರದ್, ಭಾಲ್ಕಿ, ಬಸವಕಲ್ಯಾಣ, (ಬೀದರ್ ಜಿಲ್ಲೆ), ಗುಡಿಬಂಡೆ, ಬಾಗೇಪಲ್ಲಿ, ಬಂಗಾರುಪೇಟೆಯ ಕೆ. ಜಿ. ಎಫ್. ಪ್ರದೇಶ(ಕೋಲಾರ ಜಿಲ್ಲೆ) ರಾಯಚೂರು, ಮಾನ್ವಿ (ರಾಯಚೂರು ಜಿಲ್ಲೆ), ಅಥಣಿ, ಖಾನಾಪುರ, ಚಿಕ್ಕೋಡಿ(ಬೆಳಗಾವಿ ಜಿಲ್ಲೆ)– ಇವೇ ಮಂತಾದ ತೀರಾ ಹಿಂದುಳಿದ ಹಾಗೂ ಸಂಕೀರ್ಣ ತಾಲ್ಲೂಕು ಪ್ರದೇಶಗಳನ್ನು ಜಿಲ್ಲಾಡಳಿತದ ಮೂಲಕ ಆಯ್ಕೆ ಮಾಡಿ ಅವುಗಳ ಅಭಿವೃದ್ಧಿಗೆ ಪ್ರತ್ಯೇಕ ಪೂರ್ಣ ಪ್ಯಾಕೇಜನ್ನು ಹೊಂದಿದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಬೇಕು.**<br>**ಕ್ರಮ: ಯೋಜನಾ ಇಲಾಖೆ.** |
| **ಶಿಫಾರಸ್ಸು–15** |
| ಗಿರಿಜನರು ಅಪಾರ ಪ್ರಮಾಣದಲ್ಲಿರುವ ಚಾಮರಾಜನಗರ ಜಿಲ್ಲೆಯಲ್ಲಿ ಗಿರಿಜನರ ಸಾಮಾಜಿಕ, ಆರ್ಥಿಕ ಹಾಗೂ ಕ್ರೀಡಾಭಿವೃದ್ಧಿಗಾಗಿ ಮತ್ತು ಸಾಂಸ್ಕೃತಿಕ ಸಂಶೋಧನೆಗಾಗಿ "ಗಿರಿಜನರ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರ"ವನ್ನು ಸರ್ಕಾರವು ಸ್ಥಾಪಿಸಬೇಕು.<br>**ಕ್ರಮ: ಸಮಾಜ ಕಲ್ಯಾಣ ಇಲಾಖೆ.**<br>**ಪರಿಶಿಷ್ಟ ಪಂಗಡಗಳ ನಿರ್ದೇಶಕರು** |
| **ಶಿಫಾರಸ್ಸು–16** |
| ಗಡಿನಾಡಿನಲ್ಲಿ ಸಾಂಸ್ಕೃತಿಕ ಕ್ರಿಯೆಯನ್ನು ನಿಗದಿತ ಪ್ರಮಾಣದಲ್ಲಿ ನಿರಂತರಗೊಳಿಸುವ ದೃಷ್ಟಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯವ್ಯಯದಲ್ಲಿ ಪ್ರತ್ಯೇಕ ನಿಧಿಯನ್ನು ಒದಗಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗಡಿ ಅಭಿವೃದ್ಧಿ ಪ್ರಾಧಿಕಾರ.** |

| ಡಾ: ಬರಗೂರು ರಾಮಚಂದ್ರಪ್ಪ ರವರ ಪ್ರಮುಖ ಶಿಫಾರಸುಗಳು |
|---|
| **ಶಿಫಾರಸ್ಸು-17** |
| ಗಡಿನಾಡು ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿಗೆ ಒಂದರಂತೆ ಬಹು ಉಪಯೋಗಿಯಾಗುವ ಚಿಕ್ಕ ಪ್ರಮಾಣದ 'ಕನ್ನಡ ಸಂಸ್ಕೃತಿ ಭವನ' ಗಳನ್ನು ನಿರ್ಮಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.** |
| **ಶಿಫಾರಸ್ಸು-18** |
| ಕನ್ನಡಕ್ಕೆ ಮತ್ತು ಕರ್ನಾಟಕ ಸಂಸ್ಕೃತಿಗೆ ದುಡಿದ ಗಡಿನಾಡು ಪ್ರತಿಭೆಗಳಿಗೆ ಸೂಕ್ತ ಪ್ರಶಸ್ತಿ ಹಾಗೂ ಅಕಾಡೆಮಿ, ಪ್ರಾಧಿಕಾರ ಇತ್ಯಾದಿ ಸಂಸ್ಥೆಗಳಲ್ಲಿ ಅಗತ್ಯ ಅವಕಾಶವನ್ನು ನಿಯಮಿತವಾಗಿ ಕಲ್ಪಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮುಖ್ಯಮಂತ್ರಿಯವರ ಸಚಿವಾಲಯ.** |
| **ಶಿಫಾರಸ್ಸು-19** |
| ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ಕಾರದ ಅಂಗಸಂಸ್ಥೆಗಳು ಮತ್ತು ಸ್ಥಳೀಯ ಸಾಂಸ್ಕೃತಿಕ ಸಂಸ್ಥೆಗಳಿಂದ ಗಡಿಭಾಗದ ಪ್ರತಿ ತಾಲ್ಲೂಕಿನಲ್ಲೂ ಪ್ರತಿ ತಿಂಗಳು ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಬೇಕು. ಅಂಥ ಕಾರ್ಯಸೂಚಿಯ ಸಿದ್ಧತೆ ಮತ್ತು ಸಮನ್ವತೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಬ್ಬ ಅಧಿಕಾರಿಯನ್ನು ನಿಯೋಜಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.** |
| **ಶಿಫಾರಸ್ಸು-20** |
| ಗಡಿಭಾಗದ ಸಾಂಸ್ಕೃತಿಕ ಸ್ಮಾರಕಗಳ ಸಮೀಕ್ಷೆ ನಡೆಸಿ ಆದ್ಯತೆಯ ಮೇಲೆ ಸಂರಕ್ಷಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಾರ್ಯ ಯೋಜನೆಯನ್ನು ಸಿದ್ಧಗೊಳಿಸಿ ಅನುಷ್ಠಾನಗೊಳಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ, ಮೈಸೂರು.** |
| **ಶಿಫಾರಸ್ಸು-21** |
| ಗಡಿ ಜಿಲ್ಲೆಗಳಲ್ಲಿ ನಿಯತವಾಗಿ 'ಕನ್ನಡ ಚಲನ ಚಿತ್ರೋತ್ಸವ'ಗಳನ್ನೂ ಅದರೊಂದಿಗೆ ಕನ್ನಡ ಪರ ಹಾಗೂ ಅಭಿವೃದ್ಧಿ ಪರ ಚಿಂತನಾ ಕಾರ್ಯಕ್ರಮಗಳನ್ನೂ ಏರ್ಪಡಿಸಬೇಕು.<br>**ಕ್ರಮ: ವಾರ್ತಾ ಇಲಾಖೆ.** |
| **ಶಿಫಾರಸ್ಸು-22** |
| ಗಡಿಭಾಗದಲ್ಲಿ ಪ್ರವಾಸೋದ್ಯಮವನ್ನು ವೃದ್ಧಿಗೊಳಿಸಲು ಸಮೀಕ್ಷೆ ನಡೆಸಿ, ಯೋಜನೆ ರೂಪಿಸಿ, ಅನುಷ್ಠಾನಗೊಳಿಸಬೇಕು. ಇದು ಕರ್ನಾಟಕ ಸಂಸ್ಕೃತಿಗೆ ಪೂರಕವಾದ ಕೆಲಸವೆಂದು ಭಾವಿಸಬೇಕು.<br>**ಕ್ರಮ: ಪ್ರವಾಸೋದ್ಯಮ ಇಲಾಖೆ** |
| **ಶಿಫಾರಸ್ಸು-23** |
| ಕರ್ನಾಟಕದ ಹೊರಸಮೀಪದ ಗಡಿಭಾಗಗಳಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳ ಅಂದರೆ ಪ್ರೌಢಶಾಲೆಯವರೆಗಿನ ಶಾಲೆಗಳ ಅಭಿವೃದ್ಧಿಗಾಗಿ ನಿರ್ದಿಷ್ಟ ಮೊತ್ತದ ವಿಶೇಷ ಧನ ಸಹಾಯವನ್ನು ನೀಡಬೇಕು. **ಕ್ರಮ: 1)ಸಾರ್ವಜನಿಕ ಶಿಕ್ಷಣ ಇಲಾಖೆ.**<br>**2)ಗಡಿ ಪ್ರಾಧಿಕಾರ** |
| **ಶಿಫಾರಸ್ಸು-24** |
| ಕೊಡಗು ಜಿಲ್ಲೆಯಲ್ಲಿ ಜನಪದೀಯ ಸಂಸ್ಕೃತಿಯನ್ನು ಬಿಂಬಿಸುವ ಒಂದು 'ಕರ್ನಾಟಕ ಜನಪದ ಗ್ರಾಮ'ವನ್ನು ಸ್ಥಾಪಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.** |
| **ಶಿಫಾರಸ್ಸು-25** |
| ಬಿಜಾಪುರ ಜಿಲ್ಲೆಯ ಗಡಿ ಭಾಗಗಳಿಗೆ ಭೀಮಾ ನದಿಯ ನೀರನ್ನು ನಿಗದಿತ ಪ್ರಮಾಣದಲ್ಲಿ ಒದಗಿಸಲು ಕ್ರಮ ಕೈಗೊಳ್ಳಬೇಕು. ಮಹಾರಾಷ್ಟ್ರ ಸರ್ಕಾರವನ್ನು ಮಣಿಸಿ ನಿರ್ದಿಷ್ಟ ಹಾಗೂ ಅಗತ್ಯ ಪ್ರಮಾಣದ ನೀರನ್ನು ಬಿಡಿಸಬೇಕು.<br>**ಕ್ರಮ: ಜಲ ಸಂಪನ್ಮೂಲ ಇಲಾಖೆ.** |
| **ಶಿಫಾರಸ್ಸು-26** |
| ತುಮಕೂರು ಜಿಲ್ಲೆಯ ಸಿರಾ ಮತ್ತು ಮಧುಗಿರಿ ತಾಲ್ಲೂಕುಗಳಿಗೆ ಹೇಮಾವತಿ ನದಿ ನೀರನ್ನು ಒದಗಿಸುವ ಯೋಜನೆಗೆ ತುರ್ತು ಚಾಲನೆ ನೀಡಬೇಕು. ಪಾವಗಡ ತಾಲ್ಲೂಕುಗಳಿಗೆ ಅಗತ್ಯ ನೀರಾವರಿ ಸೌಲಭ್ಯ ನೀಡಬೇಕು.<br>**ಕ್ರಮ: ಜಲ ಸಂಪನ್ಮೂಲ ಇಲಾಖೆ**<br>ಏಗಿಘಾಖಃ |
| **ಶಿಫಾರಸ್ಸು-27** |
| ಗಡಿನಾಡಿನ ಕಲಾ ಪರಂಪರೆಯ ಪುರೋಭಿವೃದ್ಧಿ ಹಾಗೂ ಸಾಂಸ್ಕೃತಿಕ ಸಾಮರಸ್ಯದ ಕಾರಣಕ್ಕಾಗಿ ಗುಲ್ಬರ್ಗದಲ್ಲಿ 'ಕರ್ನಾಟಕ ಗಡಿನಾಡು ಕಲಾ ಕೇಂದ್ರ' ವನ್ನು ಸ್ಥಾಪಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ** |

| ಶಿಫಾರಸ್ಸು-28 |
|---|
| ಬಳ್ಳಾರಿಯಲ್ಲಿರುವ 'ಕಲಾ ಸಮುಚ್ಚಯ' ವನ್ನು ಅಗತ್ಯಕ್ಕನುಗುಣವಾಗಿ ಅಭಿವೃದ್ಧಿಗೊಳಿಸಿ ಸಂಸ್ಕೃತಿಯ ಕೇಂದ್ರ ಸ್ಥಳವನ್ನಾಗಿ ರೂಪಿಸಬೇಕು.<br>**ಕ್ರಮ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.** |
| **ಶಿಫಾರಸ್ಸು-29** |
| ಚಿತ್ರದುರ್ಗ ಜಿಲ್ಲೆ ಹಾಗೂ ಗಡಿ ಭಾಗಗಳಿಗೆ ಉಪಯುಕ್ತವಾಗುವಂತೆ ಭದ್ರಾ ಮೇಲ್ದಂಡೆ ಯೋಜನೆಯನ್ನು ವಿಸ್ತರಿಸಿ ಜಿಲ್ಲೆಯ 'ಸಮಗ್ರ ನೀರಾವರಿ ಯೋಜನೆ'ಗೆ ಮನ್ನಣೆ ನೀಡಬೇಕು. ಪಾವಗಡ ಮತ್ತ ಸಿರಾ ತಾಲ್ಲೂಕುಗಳಿಗೂ ಈ ಸೌಲಭ್ಯ ದೊರಕುವಂತಾಗಬೇಕು.<br>**ಕ್ರಮ: ಜಲ ಸಂಪನ್ಮೂಲ ಇಲಾಖೆ.** |
| **ಶಿಫಾರಸ್ಸು-30** |
| ಕೋಲಾರದಲ್ಲಿ 'ಸಾಮಾಜಿಕ ಅಭಿವೃದ್ಧಿ ಮತ್ತು ಸಂಶೋಧನಾ ಕನ್ನಡ ಕೇಂದ್ರ' ವೊಂದನ್ನು ಸ್ಥಾಪಿಸಬೇಕು. ದೇಶೀಯ ಹಾಗೂ ಜಾಗತಿಕ ನೆಲೆಯ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಸಂಶೋಧನೆ ಹಾಗೂ ದಾಖಲೀಕರಣವನ್ನು ಕನ್ನಡದಲ್ಲಿ ನಡೆಸಬೇಕು. ಗಡಿನಾಡಿನ ಭಾಷಿಕ ಸಾಮಾಜಿಕ ಸಂಶೋಧನೆಯನ್ನು ಈ ಸಂಸ್ಥೆಯು ನಿರ್ವಹಿಸಬೇಕು. **ಕ್ರಮ: ಸಮಾಜ ಕಲ್ಯಾಣ ಇಲಾಖೆ**<br>**ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು** |
| **ಶಿಫಾರಸ್ಸು-31** |
| ಕಾಸರಗೋಡು, ತಾಳವಾಡಿ, ಫಿರ್ಕಾ, ಹೊಸದುರ್ಗ, ಸೋಲಾಪುರ ಜಿಲ್ಲೆ ಮುಂತಾದ ಪ್ರದೇಶಗಳ ಕನ್ನಡಿಗರ ಬೇಡಿಕೆಗಳನ್ನು ವಿಶೇಷ ಆದ್ಯತೆಯ ಮೇಲೆ ಪರಿಹರಿಸಬೇಕು.<br>**ಕ್ರಮ: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ.** |
| **ಶಿಫಾರಸ್ಸು-32** |
| ರಾಯಚೂರು ಜಿಲ್ಲೆಗೆ ಹೊಂದಿಕೊಂಡಿರುವ ಆಂಧ್ರದ ಮೆಹಬೂಬನಗರ ಜಿಲ್ಲೆಯಲ್ಲಿರುವ ಹದಿಮೂರು ಹಳ್ಳಿಗಳನ್ನು ಕರ್ನಾಟಕ ಸರ್ಕಾರವು 'ಗಡಿಗ್ರಾಮ'ಗಳೆಂದು ಪರಿಗಣಿಸಿ ಕಾಸರಗೋಡು, ಆದೋನಿಗಳ ಗಡಿಗ್ರಾಮದ ಅಭ್ಯರ್ಥಿಗಳಿಗೆ ಕೊಟ್ಟಂತೆ ಎಲ್ಲ ವಿಶೇಷ ಸೌಲಭ್ಯಗಳನ್ನು ಕೊಡಬೇಕು. ಹದಿಮೂರು ಹಳ್ಳಿಗಳು ಹೀಗಿವೆ: 1) ಕೃಷ್ಣಾ, 2) ಗುರ್ಜಾಲೆ, 3)ತಂಗಡಗಿ, 4) ಕುಸಮುರ್ತಿ 5) ಹೈನಾಪುರ, 6)ಚೆಗೊಂಟಾ 7)ಶುಕ್ರಲಿಣದಹಳ್ಳಿ 8)ಖಾನಾಪುರು 9)ಕುನಸಿ 10) ಹಾಲಂಪಲ್ಲಿ 11)ಕೊತ್ತಪಲ್ಲಿ 12)ಗುಡೆಬಲ್ಲೂರ 13)ಇಂದಪೂರ<br>**ಕ್ರಮ: ಕಂದಾಯ ಇಲಾಖೆ ಹಾಗೂ ಗಡಿ ಪ್ರಾಧಿಕಾರ** |
| **ಶಿಫಾರಸ್ಸು-33** |
| ಕರ್ನಾಟಕ ಸರ್ಕಾರವು ಹೊರನಾಡ ಕನ್ನಡಿಗರಿಗೆ ಪ್ರೋತ್ಸಾಹಕವಾದ ಪ್ರತ್ಯೇಕ ನೀತಿ ರೂಪಿಸಿ, ನಿಧಿ ಒದಗಿಸಿ ಅನುಷ್ಠಾನಗೊಳಿಸಬೇಕು.<br>**ಕ್ರಮ:ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರದ ಮಟ್ಟದಲ್ಲಿ ತೀರ್ಮಾನ ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಶಿಕ್ಷಣ ಇಲಾಖೆ, ಗಡಿ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರ.** |

ಅನುಬಂಧ -3



ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ, ಬೆಂಗಳೂರು

# ಡಾ. ಸರೋಜಿನಿ ಮಹಿಷಿ ವರದಿಯ
# ಪರಿಷ್ಕೃತ ವರದಿ

ಭಾಗ - ೩
ವರದಿಯ ವರ್ಗೀಕರಣ ವಿಭಾಗ

## ೨೦೧೩

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಮಹಿಷಿ ವರದಿಯಲ್ಲಿರುವ ಸಲಹೆ (ಅಂಶ ೫೭) ಅದು ಇಂದಿಗೂ ಪ್ರಸ್ತುತ.

೧೦. (ಅ) ಸ್ಥಳೀಯರು ಎಂದು ಪರಿಗಣಿಸಲು ರಾಜ್ಯದಲ್ಲಿ ೧೫ ವರ್ಷಗಳ ಕಾಲ ವಾಸವಾಗಿರಬೇಕಲ್ಲದೆ, ಕನ್ನಡ ಭಾಷಾ ಜ್ಞಾನವೂ ಇರಬೇಕು. ಅದಕ್ಕೆ ಕೆಳಗಿನ ದಾಖಲೆಗಳಲ್ಲಿ ಒಂದನ್ನು ಅವರು ಹೊಂದಿರಲೇಬೇಕು:

೧. ಶಾಲೆಯ ಸರ್ಟಿಫಿಕೇಟ್ (ಎಸ್.ಎಸ್.ಎಲ್.ಸಿ.ವರೆಗೆ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಅಭ್ಯಸಿಸಿರಬೇಕು)

೨. ಪಡಿತರ ಚೀಟಿ (ರೇಷನ್ ಕಾರ್ಡ್)

೩. ಜನ್ಮ ದಾಖಲೆ (ಬರ್ಥ್ ಸರ್ಟಿಫಿಕೇಟ್)

೪. ಆಧಾರ್ ಕಾರ್ಡ್

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೯)*

(ಆ) ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ೧೦ನೇ ತರಗತಿಯವರೆಗೆ ಓದಿದ ವಿದ್ಯಾರ್ಥಿಗಳಿಗೂ ರಾಜ್ಯದಲ್ಲಿ ಓದಿರುವ ವಿದ್ಯಾರ್ಥಿಗಳಿಗೆ ಸಿಗುವ ಎಲ್ಲಾ ಸವಲತ್ತುಗಳೂ ಸಿಗಬೇಕು. ಅವರಿಗೆ ಉನ್ನತ ಶಿಕ್ಷಣಕ್ಕೆ ಹಾಗೂ ಉದ್ಯೋಗಕ್ಕೆ ತೆರೆದ ಅವಕಾಶವಿರಬೇಕು.

*(ಹೊಸ ಸಲಹೆ)*

೧೧. ರಾಜ್ಯದಲ್ಲಿರುವ ಕೇಂದ್ರ/ರಾಜ್ಯ ಸರ್ಕಾರಿ ಕಚೇರಿಗಳು, ಉದ್ಯಮಗಳು ಹಾಗೂ ಖಾಸಗಿ ವಲಯಗಳಲ್ಲಿ ನಾಮಫಲಕ, ಜಾಹಿರಾತು ಫಲಕ ಹೆದ್ದಾರಿ ಫಲಕಗಳನ್ನು ಹಾಕುವಾಗ ಕಡ್ಡಾಯವಾಗಿ ರಾಜ್ಯ ಭಾಷೆಯಾದ ಕನ್ನಡವನ್ನು ಮೊದಲ ಆದ್ಯತೆಯಾಗಿ ಪ್ರದರ್ಶಿಸಬೇಕು.

*(ಹೊಸ ಸಲಹೆ)*

ತ್ರಿಭಾಷಾ ಸೂತ್ರದ ಅನುಷ್ಠಾನ, ಭಾರತ ಸರ್ಕಾರ, ಆದೇಶ ಸಂಖ್ಯೆ
No.12019/10/91-OL(Int) dated 28.1.1992

The committee has recommended that all the offices of the Government of India, located in India or abroad, and the institutions receving grants from the Central Government

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಸಾಂಸ್ಕೃತಿಕ ನೀತಿ ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 560 ಕಸಧ 2013. ದಿನಾಂಕ.08-08-2013.

2) ಶ್ರೀ ಎಚ್.ಕೆ.ಪಾಟೀಲ್, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು, ಇವರ ಅಧ್ಯಕ್ಷತೆಯಲ್ಲಿನ ಸಚಿವ ಸಂಪುಟದ ಉಪಸಮಿತಿಯು ದಿನಾಂಕ.5-5-2017ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ ವರದಿ.

3) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪತ್ರ ಸಂ:ಕಸನಿ/01/ನಿ.ಆ.ಶಾ/2017-18, ದಿನಾಂಕ:11.7.2017.

**ಪ್ರಸ್ತಾವನೆ:-**

1) ರಾಜ್ಯದಲ್ಲಿ ಸಮಗ್ರ ಸಾಂಸ್ಕೃತಿಕ ನೀತಿ ರೂಪಿಸುವ ಕುರಿತು ನಿಯಮಾವಳಿಗಳನ್ನು ರಚಿಸಲು ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪ ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ಅದರಂತೆ ಸದರಿ ಸಮಿತಿಯು ರಾಜ್ಯದಾದ್ಯಂತ ಎಲ್ಲಾ ಕ್ಷೇತ್ರದ ತಜ್ಞರ ಜೊತೆ ಸಭೆಗಳನ್ನು ನಡೆಸಿ, ಅಕಾಡೆಮಿಗಳ/ ಪ್ರಾಧಿಕಾರಗಳ ಅಧ್ಯಕ್ಷರ ಜೊತೆ ಚರ್ಚಿಸಿ ತಾತ್ವಿಕತೆ ಮತ್ತು ಶಿಫಾರಸ್ಸುಗಳನ್ನು ಒಳಗೊಂಡ ವರದಿಯನ್ನು ದಿನಾಂಕ:25-06-2014ರಲ್ಲಿ ಸರ್ಕಾರಕ್ಕೆ ಸಲ್ಲಿಸಿದೆ.

2) ಸಚಿವ ಸಂಪುಟ ಸಭೆಯ ನಿರ್ಣಯದಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ರಚಿಸಿ, ರಾಜ್ಯದಲ್ಲಿ ಸಾಂಸ್ಕೃತಿಕ ನೀತಿಯನ್ನು ಜಾರಿಗೊಳಿಸುವ ಕುರಿತಂತೆ ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಒಂದು ತಿಂಗಳ ಅವಧಿಯೊಳಗೆ ನೀಡಲು ತಿಳಿಸಲಾಗಿತ್ತು. ಅದರಂತೆ ಸದರಿ ಸಚಿವ ಸಂಪುಟ ಉಪ ಸಮಿತಿಯು ದಿನಾಂಕ:5-5-2017ರಲ್ಲಿ ರಾಜ್ಯದಲ್ಲಿ ಸಾಂಸ್ಕೃತಿಕ ನೀತಿ ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಸಲ್ಲಿಸಿದ್ದು, ಸದರಿ ಶಿಫಾರಸ್ಸುಗಳು ಈ ಕೆಳಕಂಡಂತಿವೆ:-

### ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸುಗಳು

3) (1) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ ಮತ್ತು ಆಡಳಿತ ವಿಕೇಂದ್ರೀಕರಣ:-

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಾಡಿನ ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂರಕ್ಷಣೆ ಮತ್ತು ಸಂವರ್ಧನೆಯ ಜವಾಬ್ದಾರಿ ಹೊತ್ತಿರುವ ಅತ್ಯಂತ ಸಂಕೀರ್ಣವೂ ನಾಡಿನ ಬಹುಸಂಸ್ಕೃತಿಯ ಸಾಮಾಜಿಕ ನೆಲೆಯಲ್ಲಿ ಅತ್ಯಂತ ವಿಶಿಷ್ಟವೂ ಆದ ಇಲಾಖೆಯಾಗಿದೆ. ಈ ಇಲಾಖೆಯು ಹೆಚ್ಚು ದಕ್ಷತೆಯಿಂದ ಕಾರ್ಯನಿರ್ವಹಿಸಲು ಜನರ ಬಳಿ ಆಡಳಿತ ತೆಗೆದುಕೊಂಡು ಹೋಗುವ ಸಲುವಾಗಿ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರಾದೇಶಿಕ ಕಚೇರಿಗಳನ್ನು ಸ್ಥಾಪಿಸಬೇಕು. ಆ ನಾಲ್ಕು ಪ್ರಾದೇಶಿಕ ಕಚೇರಿಗಳಲ್ಲಿ ಪ್ರಸಕ್ತ ಕೇಂದ್ರ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಂಟಿ ನಿರ್ದೇಶಕರನ್ನು ಪ್ರಾದೇಶಿಕ ನಿರ್ದೇಶಕರಾಗಿ ನೇಮಿಸುವುದು. ಕಚೇರಿಯ ನಿರ್ವಹಣೆಗೆ ಅಗತ್ಯ ಸಹಾಯಕ ನಿರ್ದೇಶಕರು-1, ಅಧೀಕ್ಷಕರು-1, ಪ್ರಥಮ ದರ್ಜೆ ಸಹಾಯಕರು-1, ಕಂಪ್ಯೂಟರ್ ಆಪರೇಟರ್/ ಬೆರಳಚ್ಚುಗಾರರು-2, ದ್ವಿತೀಯ ದರ್ಜೆ ಸಹಾಯಕರು-1, ದಲಾಯತರು-1, ವಾಹನ ಚಾಲಕರು-1 ಸೇರಿದಂತೆ ಒಟ್ಟಾರೆ ಎಂಟು ಮಂದಿ ಅಧಿಕಾರಿ ಸಿಬ್ಬಂದಿ ವ್ಯವಸ್ಥೆಯುಳ್ಳ ಪ್ರಾದೇಶಿಕ ಕಚೇರಿಗಳನ್ನು ಪರಿಣಾಮಕಾರಿ ಆಡಳಿತ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಿ ಅನುಷ್ಠಾನ ಮಾಡುವುದು. ಈ ವಿಭಾಗೀಯ ಕಚೇರಿಗಳು ಈಗಾಗಲೇ ಆಯಾ ಕಂದಾಯ ವಿಭಾಗದಲ್ಲಿ ಬರುವ ಜಿಲ್ಲೆಗಳ ಕನ್ನಡ ಸಂಸ್ಕೃತಿ ಇಲಾಖೆಗಳ ವಿಭಾಗೀಯ ಕಚೇರಿಯಾಗಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಜವಾಬ್ದಾರಿಯಾಗಿರುವುದು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಇಬ್ಬರು ಅಪರ ನಿರ್ದೇಶಕರ ಸಂಪೂರ್ಣ ಇಲಾಖೆಯ ಆಡಳಿತ ಮತ್ತು ಕಾರ್ಯಕ್ರಮಗಳ ಉಸ್ತುವಾರಿಗಾಗಿ ಇಬ್ಬರು ಉಪನಿರ್ದೇಶಕರ ಮಟ್ಟದ ಅಧಿಕಾರಿಗಳು ಮತ್ತು ಇಬ್ಬರು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಕೇಂದ್ರ ಕಚೇರಿಯಲ್ಲಿ ಸೃಜಿಸುವುದು.

ಜಿಲ್ಲಾ ಕೇಂದ್ರಗಳಲ್ಲಿ ಇರುವ ಸಿಬ್ಬಂದಿ ಕೊರತೆಯನ್ನು ನೀಗಿಸಲು ಪ್ರತಿ ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕರ ಹಂತದ ಅಧಿಕಾರಿಯ ನೇತೃತ್ವದಲ್ಲಿ, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಬೆರಳಚ್ಚುಗಾರರು/ಕಂಪ್ಯೂಟರ್ ಆಪರೇಟರ್ ಮತ್ತು ದಲಾಯತ ಸೇರಿ ಪ್ರತಿ ಜಿಲ್ಲೆಗೆ ಒಟ್ಟಾರೆ ಐದು ಹುದ್ದೆಗಳು ಹಾಗೂ ಜಿಲ್ಲಾ ರಂಗಮಂದಿರಗಳು ಕಾರ್ಯ ನಿರ್ವಹಿಸುತ್ತಿರುವ ಕಡೆಗಳಲ್ಲಿ ಸೌಂಡ್ ಎಂಜಿನಿಯರ್ ಮತ್ತು ದ್ವಿತೀಯ ದರ್ಜೆ ಸಹಾಯಕರು/ಕಂಪ್ಯೂಟರ್ ಆಪರೇಟರ್, ಕ್ಲೀನರ್/ದಲಾಯತರು ಹುದ್ದೆಗಳಿರುವಂತೆ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವುದು. ಹುದ್ದೆಗಳು ಸೃಜನೆಯಾಗಿಲ್ಲದ ಜಿಲ್ಲೆಗಳಲ್ಲಿ ಇಲ್ಲಿ ಪ್ರಸ್ತಾಪಿಸಿರುವಂತೆ ಹುದ್ದೆಗಳ ಸೃಜನೆಗೆ ಕ್ರಮವಹಿಸಿ ಜಿಲ್ಲಾ ಹಂತದ ಕಚೇರಿಗಳನ್ನು ಸಬಲೀಕರಣಗೊಳಿಸಿ ಸರ್ಕಾರದ ಆಶಯಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸಲು ಕ್ರಮ ವಹಿಸುವುದು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಸಾಹಿತ್ಯ ಮತ್ತು ಸಂಸ್ಕೃತಿ ಕಲಾ ಪರಂಪರೆಗಳ ನಿಕಟ ಪರಿಚಯ ದೊರಕಿಸಿ ಕೊಡುವ ಸಲುವಾಗಿ ನಿಯತಕಾಲಿಕವಾಗಿ ಸಾಂಸ್ಕೃತಿಕ ಮಾಹಿತಿ ಶಿಬಿರಗಳನ್ನು ಮತ್ತು ಆಡಳಿತಾತ್ಮಕ ತರಬೇತಿ ಶಿಬಿರಗಳನ್ನು ಆಯೋಜಿಸುವುದು.

(2) ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ

ಕರ್ನಾಟಕ ರಾಜ್ಯದಲ್ಲಿರುವ ಐತಿಹಾಸಿಕ ಸ್ಮಾರಕಗಳು, ನಿರ್ಮಾಣಗಳು ಮತ್ತು ವಸ್ತುಗಳನ್ನು ಪ್ರಾಚ್ಯ ಪರಂಪರೆಯ ಅಡಿಯಲ್ಲಿ ಗುರುತಿಸಿ ಘೋಷಿಸುವ ಮತ್ತು ಮುಂದಿನ ಪೀಳಿಗೆಗೆ ಇತಿಹಾಸದ ಕುರುಹಾಗಿ ಸಂರಕ್ಷಿಸುವ ಮಹತ್ವದ ಕಾರ್ಯ ಜವಾಬ್ದಾರಿಯನ್ನು ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆಯು ನಿರ್ವಹಿಸುತ್ತಿದೆ. ಇಂತಹ ಮಹತ್ವ ಪೂರ್ಣ ಇಲಾಖೆಯು ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆಯ ಸಹಯೋಗದಲ್ಲಿ ಸಹ ಕಾರ್ಯ ನಿರ್ವಹಿಸುತ್ತಿದ್ದು, ಸುಮಾರು 800 ಸಂರಕ್ಷಿತ ಸ್ಮಾರಕಗಳು ಮತ್ತು 20,000 ಅಘೋಷಿತ ಸ್ಮಾರಕಗಳ ಘೋಷಣೆ ಮತ್ತು ಸಂರಕ್ಷಣೆಯ ನಿರೀಕ್ಷೆಯಲ್ಲಿವೆ.

30 ಜಿಲ್ಲಾ ಕೇಂದ್ರಗಳಿಗೆ ಒಬ್ಬರಂತೆ ಪ್ರಾಚ್ಯವಸ್ತು ಪಾಲಕರು, ಕಚೇರಿಗೆ ಪ್ರಥಮ ದರ್ಜೆ ಸಹಾಯಕರು, ಕಂಪ್ಯೂಟರ್ ಆಪರೇಟರ್ ಮತ್ತು ದಲಾಯತ ಹುದ್ದೆಗಳು ಸೇರಿದಂತೆ ತಲಾ ಜಿಲ್ಲೆಗೆ ಒಟ್ಟು ನಾಲ್ಕು ಹುದ್ದೆಗಳನ್ನು ಸೃಜಿಸುವ ಮೂಲಕ ಇಲಾಖೆಯ ಪ್ರಾಚ್ಯವಸ್ತು ಸಂರಕ್ಷಣೆಯ ಕೆಲಸವನ್ನು ಬಲಪಡಿಸುವುದು.

(3) ಪ್ರಶಸ್ತಿಗಳ ವಿತರಣೆ ಕಾಲಬದ್ಧತೆ ಮತ್ತು ಏಕರೂಪತೆ

ಕರ್ನಾಟಕ ರಾಜ್ಯ ಸರ್ಕಾರವು ವಿವಿಧ ವಿಷಯ ಕ್ಷೇತ್ರಗಳಲ್ಲಿ ಸಾಧಕರಿಗೆ ಕೊಡಮಾಡುವ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳ ಮೊತ್ತದಲ್ಲಿ ಏಕರೂಪತೆ ಕಾಯ್ದುಕೊಳ್ಳುವ ಮೂಲಕ ಪ್ರಶಸ್ತಿಗಳಲ್ಲಿ ತಾರತಮ್ಯ ತೊಲಗಿಸಲು ರಾಷ್ಟ್ರ ಮಟ್ಟದ ಪ್ರಶಸ್ತಿಗಳಿಗೆ ತಲಾ ಹತ್ತು ಲಕ್ಷ ರೂಪಾಯಿ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಳಿಗೆ ತಲಾ ಐದು ಲಕ್ಷ ರೂಪಾಯಿ ಗೌರವಧನ ನೀಡಲು ಶಿಫಾರಸ್ಸು ಮಾಡುತ್ತದೆ ಮತ್ತು ಎಲ್ಲ ಪ್ರಶಸ್ತಿಗಳನ್ನು ಆಯಾ ವರ್ಷದಲ್ಲಿಯೇ ಆಯ್ಕೆ ಮಾಡಿ ಸಕಾಲದಲ್ಲಿ ಪ್ರಧಾನ ಮಾಡಲು ಕ್ರಮ ವಹಿಸುವುದು.

(4) ಸಾಹಿತಿ-ಕಲಾವಿದರಿಗೆ ಮಾಸಾಶನ:

ಜೀವನ ಸಂಧ್ಯಾ ಕಾಲದಲ್ಲಿ ಕಲಾವಿದರು ಮತ್ತು ಸಾಹಿತಿಗಳು ಗೌರವಪೂರ್ಣ ಬದುಕನ್ನು ಬದುಕಲನುವಾಗುವಂತೆ ಮಾಸಾಶನವನ್ನು ನೀಡಲಾಗುತ್ತಿದೆ. ಮಾಸಾಶನ ಕೋರಿ ಸಲ್ಲಿಕೆಯಾಗುವ ಅರ್ಜಿಗಳನ್ನು ಕಾಲಬದ್ಧವಾಗಿ ವಿಲೇವಾರಿ ಮಾಡಿ ಆದ್ಯತೆಯ ಮೇರೆಗೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾಸಾಶನ ವಿತರಿಸುವುದು. ಮಾಸಾಶನವನ್ನು ರೂ.2,000/-ಗಳಿಗೆ ಏರಿಸಿ ಮಂಜೂರು ಮಾಡಿ ಕಲಾವಿದರಿಗೆ ಪಾವತಿಸುವುದು.

ಮಾಸಾಶನ ಮಂಜೂರಾತಿ ಸಂದರ್ಭದಲ್ಲಿ ಸಾಮಾನ್ಯ ಕನಿಷ್ಠ ವಯೋಮಿತಿ 58 ವರ್ಷಗಳು. ವಿಶೇಷ ಸಂದರ್ಭದಲ್ಲಿ ಕಲಾವಿದರ ಆರ್ಥಿಕ ಮತ್ತು ಆರೋಗ್ಯ ಪರಿಸ್ಥಿತಿಗಳನ್ನು, 50 ವರ್ಷ ಮೀರಿದ ಕಲಾವಿದರನ್ನು ಪರಿಗಣಿಸುವುದು.

(5) ಇಲಾಖೆಯ ಅಡಿಯಲ್ಲಿ ರಚಿತವಾಗಿರುವ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳ ಸಬಲೀಕರಣ

ಅಕಾಡೆಮಿಗಳು ಯೋಜಿತವಾಗಿ ರೂಪಿಸಿಕೊಂಡಿರುವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ನಿಗದಿತ ಅವಧಿಯವರೆಗೆ ನಿಯೋಜಿತರಾದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಅವಧಿ ಮುಗಿದ ನಂತರವೂ ಹೊಸ ನೇಮಕಾತಿ ಆಗುವವರೆಗೆ ಮುಂದುವರೆಸುವುದು. ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕಾತಿ ಮಾಡುವಾಗ ಸಾಧ್ಯವಾದಷ್ಟು ಸಾಮಾಜಿಕ ನ್ಯಾಯ, ಲಿಂಗಾಧಾರಿತ ಪ್ರಾತಿನಿಧ್ಯ, ಪ್ರಾದೇಶಿಕ ನ್ಯಾಯಗಳಿಗೆ ಚ್ಯುತಿ ಬಾರದಂತೆ ಯುವ ಪ್ರತಿಭೆಗಳೂ ಸೇರಿದಂತೆ ಎಲ್ಲ ವರ್ಗಗಳ ವಿಷಯಕ್ಷೇತ್ರ ಪರಿಣತರನ್ನೂ ಪರಿಗಣಿಸಿ ಅವಕಾಶ ಕಲ್ಪಿಸುವುದು. ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಮುಂದಿನ ಅವಧಿಗೆ ಮಾತ್ರ ಮರುನೇಮಕ ಮಾಡುವಂತಿಲ್ಲ. ಅಕಾಡೆಮಿ ಮತ್ತು ಪ್ರಾಧಿಕಾರಗಳು ಅಗತ್ಯಾನುಸಾರವಾಗಿ ಕಾರ್ಯಕ್ರಮ ಅನುಷ್ಠಾನಕ್ಕೆ ಸ್ಥಳೀಯ ತಜ್ಞ ಸಂಪನ್ಮೂಲ ಕ್ರೋಢೀಕರಿಸಲು ಅವಕಾಶ ಒದಗಿಸುವುದು.

ಕರ್ನಾಟಕ ಉರ್ದು ಅಕಾಡೆಮಿಯು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಭಾಗವಾಗಿ ರಚನೆಯಾಗಿದ್ದು, ಕನ್ನಡ ನಾಡಿನಲ್ಲಿ ಉರ್ದು ಮಾತನಾಡುವ ಬಹುದೊಡ್ಡ ಸಾಂಸ್ಕೃತಿಕ ಜನವರ್ಗವನ್ನು ಸಾಂಸ್ಕೃತಿಕವಾಗಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಅಲ್ಪಸಂಖ್ಯಾತ ಇಲಾಖೆಗೆ ಹಸ್ತಾಂತರವಾಗಿರುವ ಉರ್ದು ಅಕಾಡೆಮಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಮರಳಿ ತರುವುದು.

ತುಳು, ಕೊಡವ, ಕೊಂಕಣಿ, ಅರೆಭಾಷೆ ಬ್ಯಾರಿ ಮತ್ತು ಉರ್ದು ಭಾಷಾ ಅಕಾಡೆಮಿಗಳು ಭೌಗೋಳಿಕ ಮತ್ತು ಸಾಮಾಜಿಕ ಪರಿಮಿತಿಗಳನ್ನು ಮೀರಿ ಸರ್ವರನ್ನೂ ತಲುಪುವ ನಿಟ್ಟಿನಲ್ಲಿ ಭಾಷಾಭಿವೃದ್ಧಿ ಕೈಗೊಳ್ಳಲು ಶ್ರಮಿಸುವುದು. ವಿವಿಧ ಅಕಾಡೆಮಿಗಳ ನಡುವೆ ಸಮನ್ವಯ ಸಾಧಿಸಿ ಸಮಗ್ರವಾಗಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸೌಹಾರ್ದ ವೃದ್ಧಿಸುವ ನಿಟ್ಟಿನಲ್ಲಿ ಕ್ರಮ ವಹಿಸುವುದು. ಅಕಾಡೆಮಿಗಳ ಕಾರ್ಯಯೋಜನೆಗಳನ್ನು ಆರ್ಥಿಕವಾಗಿ ಬಲಪಡಿಸಲು ಆಯಾ ಅಕಾಡೆಮಿಗಳ ಕಾರ್ಯವ್ಯಾಪ್ತಿ ಪರಿಗಣಿಸಿ ಅಗತ್ಯಾನುಸಾರವಾಗಿ ಅನುದಾನವನ್ನು ಇಲಾಖೆಯ ವತಿಯಿಂದ ಒದಗಿಸಿಕೊಳ್ಳುವುದು.

ಅಕಾಡೆಮಿಯ ಅಂಗರಚನೆ/ನಿಯಮಾವಳಿ ಮತ್ತು ಹಣಕಾಸಿನ ನಿರ್ವಹಣೆಯಲ್ಲಿ ನಿಯಮಾನುಸಾರ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನ ಮಾಡುವ ಸ್ವಾಯತ್ತತೆಯನ್ನು ಅಕಾಡೆಮಿಗಳಿಗೆ ಒದಗಿಸುವುದು. ಅಕಾಡೆಮಿಯ ಅಧ್ಯಕ್ಷ/ಸದಸ್ಯರಾಗುವವರು ಉದ್ಯೋಗಿಯಾಗಿರ ಬಾರದು ಎಂಬ ನಿಯಮವನ್ನು ಕೈಬಿಡಬಹುದು ಮತ್ತು ಅಕಾಡೆಮಿಯ ಪದಾಧಿಕಾರಿಗಳನ್ನು ಸರ್ಕಾರವು ನೇಮಿಸುವಾಗ ವೃತ್ತಿನಿರತರಿಗೆ ಮೊದಲ ಆದ್ಯತೆ ನೀಡಬೇಕಾದ ನಿಯಮವನ್ನು ಪಾಲಿಸಲು ಶಿಫಾರಸ್ಸು ಮಾಡುತ್ತದೆ. ಅಕಾಡೆಮಿಗಳು ತಂತಮ್ಮ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಯನ್ನು ಅಗತ್ಯಾನುಸಾರ ಕೈಗೊಳ್ಳಬಹುದು. ಅಕಾಡೆಮಿಗಳು ಉತ್ಸವಗಳ ಆಯೋಜನೆಗೆ ಹೊರತಾಗಿ ಕ್ಷೇತ್ರದ ಮೌಲ್ಯವರ್ಧನೆ ಮಾಡುವ ಕಮ್ಮಟ-ಕಾರ್ಯಾಗಾರಗಳು, ತರಬೇತಿ ಶಿಬಿರಗಳು ಮತ್ತು ಕಾರ್ಯಕ್ಷೇತ್ರ ಸಬಲೀಕರಣದ ಕಾರ್ಯಗಳನ್ನು ರೂಪಿಸಿ ಕ್ರಿಯಾಯೋಜನೆ ರೂಪಿಸುವುದು.

(6) ಅಕಾಡೆಮಿಗಳ ವಿಭಾಗೀಕರಣ ಮತ್ತು ಹೆಸರು ಬದಲಾವಣೆ:

ಕರ್ನಾಟಕ ಯಕ್ಷಗಾನ ಮತ್ತು ಬಯಲಾಟಗಳು ಪ್ರತ್ಯೇಕ ಪ್ರದೇಶಗಳಲ್ಲಿ ಅತ್ಯಂತ ವ್ಯಾಪಕವಾಗಿ ಮತ್ತು ಜನಪ್ರಿಯ ಕಲಾಪ್ರಕಾರಗಳಾಗಿ ರೂಪುಗೊಂಡಿದ್ದು ಇವುಗಳನ್ನು ಪ್ರಸಕ್ತ ಕರ್ನಾಟಕ ಯಕ್ಷಗಾನ-ಬಯಲಾಟ ಅಕಾಡೆಮಿಯ ಅಡಿಯಲ್ಲಿ ನಿರ್ವಹಿಸಲಾಗುತ್ತಿದೆ. ಅದರಂತೆ ಕರ್ನಾಟಕ ಯಕ್ಷಗಾನ ಪ್ರಕಾರಗಳ ಸಂಬಂಧಿ ಚಟುವಟಿಕೆಗಳನ್ನು ನಿರ್ವಹಿಸುವ ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತದಂತಹ ಬಯಲಾಟ ಪ್ರಕಾರಗಳನ್ನು ಪೋಷಿಸುವ ಸಲುವಾಗಿ ಈಗಿನ ಅಕಾಡೆಮಿಯಿಂದ ಬೇರ್ಪಡಿಸಿ ಕರ್ನಾಟಕ ಬಯಲಾಟ ಅಕಾಡೆಮಿಯನ್ನು ರಚಿಸುವುದು.

ಕರ್ನಾಟಕ ಸಂಗೀತ – ನೃತ್ಯ ಅಕಾಡೆಮಿಗಳು ಅತ್ಯಂತ ವಿಸ್ತಾರವಾದ ಕಾರ್ಯಕ್ಷೇತ್ರವನ್ನು ನಿರ್ವಹಿಸಬೇಕಾಗಿದ್ದು, ಕರ್ನಾಟಕದ ನೃತ್ಯ ಶೈಲಿಗಳಲ್ಲಿ ಹಲವು ನೃತ್ಯ ಪ್ರಕಾರಗಳು ಇಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದು, ನೃತ್ಯ ಪ್ರಕಾರಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿಯಿಂದ ನೃತ್ಯ ಅಕಾಡೆಮಿಯನ್ನು ಬೇರ್ಪಡಿಸಿ ಕರ್ನಾಟಕ ನೃತ್ಯ ಅಕಾಡೆಮಿಯನ್ನು ರಚಿಸುವುದು.

(7) ಸಾಂಸ್ಕೃತಿಕ ಸಂಸ್ಥೆಗಳಿಗೆ ಧನಸಹಾಯ ಮಂಜೂರಾತಿ – ತಜ್ಞರ ಸಮಿತಿ ರಚನೆ

ರಾಜ್ಯಾದ್ಯಂತ ಮತ್ತು ಹೊರನಾಡಿನಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಭ್ಯುದಯಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಸಾಂಸ್ಕೃತಿಕ ಸಂಘಟನೆಗಳನ್ನು ಬಲಪಡಿಸಲು ಅರ್ಜಿಗಳನ್ನು ಆಹ್ವಾನಿಸಿ, ಕಾಲಬದ್ಧವಾಗಿ ಅವುಗಳನ್ನು ಪರಿಶೀಲಿಸಿ ಅರ್ಹತೆಯ ಆಧಾರದಲ್ಲಿ ಅನುದಾನ ಮಂಜೂರಾತಿ ಸಮಿತಿಯ ಮೂಲಕ ಮಾತ್ರ ಅನುದಾನ ಮಂಜೂರು ಮಾಡಬೇಕು. ಪ್ರಾತಿನಿಧಿಕ ತಜ್ಞರ ಸಮಿತಿಯು ಈ ಅರ್ಜಿಗಳನ್ನು ಸವಿವರ ಪರಿಶೀಲನೆಗೊಳಪಡಿಸಿ ತನ್ನ ಶಿಫಾರಸ್ಸನ್ನು ಅನುದಾನ ಮಂಜೂರಾತಿ ಸಮಿತಿಗೆ ಶಿಫಾರಸ್ಸು ಮಾಡಬೇಕು. ಈ ಅಂಶಗಳನ್ನು ಸಹ ಪರಿಗಣಿಸಿ ಸಮಿತಿಯು ಅನುದಾನ ಮಂಜೂರು ಮಾಡಬೇಕು. ಸಾಂಸ್ಕೃತಿಕ ಸ್ವರೂಪವಿಲ್ಲದ ಸಂಸ್ಥೆಗಳಿಗೆ ಇಲಾಖೆಯಿಂದ ಅನುದಾನ ನೀಡಬಾರದು. ಸಾಮಾನ್ಯ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಗಳಡಿಯಲ್ಲಿ ಆಯಾ ಜನವರ್ಗದ ನಿಯಮಗಳಿಗನುಸಾರವಾಗಿ ಕ್ರಮ ವಹಿಸಬೇಕು. ಈ ನಿಟ್ಟಿನಲ್ಲಿ ಈಗಾಗಲೇ ಸರ್ಕಾರವು ಹೊರಡಿಸಿರುವ ಅಧಿನಿಯಮಗಳ ಪಾಲನೆ ಮಾಡಬೇಕು.

ಅನುದಾನ ಪಡೆಯುವ ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯಾನುಷ್ಠಾನದ ಅಧ್ಯಯನ ಕೈಗೊಳ್ಳಲು ಸಾಮಾಜಿಕ ತಪಾಸಣೆ ಕೈಗೊಳ್ಳಬೇಕು. ಮಂಜೂರಾದ ಅನುದಾನ ಮತ್ತು ಫಲಾನುಭವಿ ಸಂಸ್ಥೆಗಳ ವಿವರಗಳು ಅತ್ಯಂತ ಪಾರದರ್ಶಕವಾಗಿ ಇಲಾಖೆಯ ವೆಬ್‌ಸೈಟ್ ಮತ್ತು ಸೂಚನಾ ಫಲಕಗಳಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸುವುದು.

(8) ಸ್ಕಾಲರ್ ಶಿಪ್ ಮತ್ತು ಫೆಲೋಶಿಪ್ ನೀಡಿಕೆ

ಕಲೆಯ ವಿವಿಧ ಕ್ಷೇತ್ರಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವ ಯೋಜನೆ ಕೈಗೊಂಡು ವಿದ್ಯಾಭ್ಯಾಸಕ್ಕೆ ಆರ್ಥಿಕ ತೊಡಕುಂಟಾಗದಂತೆ ಕ್ರಮ ವಹಿಸುವುದು ಮತ್ತು ಪ್ರತಿ ವಿಷಯ ಕ್ಷೇತ್ರದ ವಿವಿಧ ಆಯಾಮಗಳ ಅಧ್ಯಯನ ಮತ್ತು ಸಂಶೋಧನೆಗೆ ಹೆಚ್ಚಿನ ಒತ್ತು ಕೊಡುವ ಮೂಲಕ ಸಮಗ್ರ ಅಧ್ಯಯನಕ್ಕೆ ಪೂರಕ ವಾತಾವರಣ ನಿರ್ಮಿಸುವುದು. ಸಾಂಸ್ಕೃತಿಕ ಮತ್ತು ಸಾಹಿತ್ಯ ಅಧ್ಯಯನಗಳಲ್ಲಿ ತೊಡಗುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಸಂಶೋಧನೆಯಲ್ಲಿ ತೊಡಗುವ ತಜ್ಞರಿಗೆ ಫೆಲೋಶಿಪ್ ನೀಡುವ ಯೋಜನೆ ಜಾರಿ ಮಾಡಲು ಅಗತ್ಯ ಯೋಜನೆಗಳನ್ನು ರೂಪಿಸಿ ನಿರಂತರವಾಗಿ ಇಂತಹ ಅಧ್ಯಯನ ಕಾರ್ಯಗಳಿಗೆ ಪೂರಕ ಪ್ರೋತ್ಸಾಹಕ ವಾತಾವರಣವನ್ನು ರೂಪಿಸುವುದು.

(9) ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನೆಗೆ ಒತ್ತು

ಕನ್ನಡ ಭಾಷೆಯ ಶಾಸ್ತ್ರೀಯ ಭಾಷಾ ಸ್ಥಾನಮಾನವು ಲಭಿಸಿದ್ದು, ಇದಕ್ಕೆ ಇತರೆ ಕಾನೂನಿನ ತೊಡಕುಗಳು ಸಹ ಪರಿಹಾರವಾಗಿರುತ್ತದೆ. ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಮೈಸೂರು ಭಾರತೀಯ ಭಾಷಾ ಸಂಸ್ಥಾನದಲ್ಲಿ ಸ್ಥಾಪಿಸಿರುವ ಕಾರಣ, ಸಂಸ್ಥಾನ ಕಾರ್ಯಭಾರದ ಹೊರೆಯಿಂದಾಗಿ ಸಂಪೂರ್ಣ ಕ್ಷಮತೆಯಿಂದ ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನಾ ಕಾರ್ಯ ನಡೆಯುತ್ತಿಲ್ಲ. ಆದ್ದರಿಂದ ಈ ಬಗ್ಗೆ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ಜೊತೆ ಸಮನ್ವಯ ಸಾಧಿಸಿ, ಅವರ ಸಹಮತಿಯೊಂದಿಗೆ ಸಮಕಾಲೀನ ವಿವೇಕದೊಂದಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಇತಿಹಾಸದ ಸಂಶೋಧನೆ ಮತ್ತು ಭವಿಷ್ಯದ ನೆಲೆಗಳನ್ನು ರೂಪಿಸುವ ಅಧ್ಯಯನ ಕೇಂದ್ರವಾಗಿ ಶಾಸ್ತ್ರೀಯ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ವತಂತ್ರವಾಗಿ ರಚಿಸುವುದು ಮತ್ತು ಅಭಿವೃದ್ಧಿಪಡಿಸುವುದು.

(10) ಗಡಿನಾಡು ಪ್ರಾಧಿಕಾರದ ವ್ಯಾಪ್ತಿಗೆ ಹೊರನಾಡು

ಕರ್ನಾಟಕ ರಾಜ್ಯದಲ್ಲಿ ಪಕ್ಕದ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿರುವ 52 ತಾಲ್ಲೂಕುಗಳನ್ನು ಗುರುತಿಸಲಾಗಿದ್ದು, ಪರರಾಜ್ಯಗಳಲ್ಲಿಯೂ ಕನ್ನಡ ಭಾಷಿಕರಿರುವ ಸ್ಥಳಗಳಿವೆ. ಈ ಸ್ಥಳಗಳಲ್ಲಿ ಕನ್ನಡಪರ ವಾತಾವರಣ ಕಾಪಾಡುವ ನಿಟ್ಟಿನಲ್ಲಿ ಗಡಿನಾಡು ಪ್ರಾಧಿಕಾರವು ಹೊರನಾಡು ಪ್ರದೇಶಗಳಲ್ಲಿ ಸಹ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಹೊರನಾಡಿನ ಮತ್ತು ಗಡಿನಾಡಿನ ಶಾಲೆಗಳಲ್ಲಿ ಕನ್ನಡಿಗರ ಬಾಹುಳ್ಯದ ಪ್ರದೇಶಗಳಲ್ಲಿ ಕನ್ನಡ ಶಿಕ್ಷಣಕ್ಕೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲು ಪ್ರದೇಶಕ್ಕೆ ಸಮೀಪವಿರುವ ಜಿಲ್ಲೆಗಳಿಗೆ ಸಂಲಗ್ನಗೊಳಿಸಿ ಅಲ್ಲಿಯ ಕನ್ನಡಿಗರ ಆಗುಹೋಗುಗಳ ಮತ್ತು ಅಪೇಕ್ಷೆ-ನಿರೀಕ್ಷೆಗಳಿಗೆ ಅನುಕೂಲವಾಗುವಂತಹ ವಾತಾವರಣವನ್ನು ಸೃಷ್ಟಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಗಡಿನಾಡು ಮತ್ತು ಹೊರನಾಡು ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುವ ಕನ್ನಡಿಗರ ಸಾಂಸ್ಕೃತಿಕ ಅಗತ್ಯಗಳನ್ನು ಒದಗಿಸಿಕೊಡಲು ಇಲಾಖೆ ವ್ಯವಸ್ಥೆ ರೂಪಿಸುವುದು. ಗಡಿ ಪ್ರದೇಶದಲ್ಲಿ ಮತ್ತು ಕನ್ನಡಿಗರ ಸಾಂಸ್ಕೃತಿಕ ಪ್ರತಿಭಾ ಪ್ರದರ್ಶನಕ್ಕೆ ಅಗತ್ಯ ಕ್ರಮ ವಹಿಸುವುದು. ಗಡಿ ರಾಜ್ಯಗಳ ಸಂಕೀರ್ಣ ಸ್ಥಿತಿಯಲ್ಲಿ ದ್ವಿಭಾಷಿಕ ಮತ್ತು ಬಹುಭಾಷಿಕ ಭಾಷಾ ಸಾಮರಸ್ಯವನ್ನು ನೆಲೆಗೊಳಿಸಬೇಕು. ಹೊರನಾಡಿನಲ್ಲಿ ಕನ್ನಡ ವ್ಯಾಸಂಗ ಮಾಡುವವರಿಗೆ ವಿಶೇಷ ಪ್ರೋತ್ಸಾಹ ಕ್ರಮಗಳನ್ನು ಕೈಗೊಳ್ಳುವುದು, ಹೊರನಾಡ ಕನ್ನಡಿಗರಿಗೆ ಒಳನಾಡಿನ ಕನ್ನಡಿಗರೊಂದಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಕನ್ನಡಿಗರ ಬಾಹುಳ್ಯವಿರುವ ಹೊರನಾಡಿನ ಮತ್ತು ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಭವನಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ಮತ್ತು ಅನುದಾನ ನೀಡುವುದು.

(11) ಅನ್ವಯಿಕ ಕನ್ನಡ ತಂತ್ರಾಂಶಗಳ ಅಭಿವೃದ್ಧಿ ಮತ್ತು ಆಧುನಿಕ ತಂತ್ರಜ್ಞಾನ ಮಾಧ್ಯಮ ಸದ್ಬಳಕೆ

ಕನ್ನಡ ಭಾಷೆಯನ್ನು ಆಧುನಿಕ ತಂತ್ರಜ್ಞಾನ ಮಾಧ್ಯಮದಲ್ಲಿ ಮುಖ್ಯನೆಲೆಯಲ್ಲಿ ಬೆಳೆಸಲು ಮತ್ತು ದೂರಗಾಮಿ ನೆಲೆಯಲ್ಲಿ ಕ್ರಿಯಾ ಯೋಜನೆಗಳನ್ನು ರೂಪಿಸಲು ಕ್ರಮ ವಹಿಸುವುದು. ಯೂನಿಕೋಡ್ ಶಿಷ್ಟತೆ ಅನುಷ್ಠಾನ ಮತ್ತು ಕನ್ನಡ ಭಾಷೆಯ ಒಟ್ಟಾರೆ ಬೆಳವಣಿಗೆಗೆ ಅಗತ್ಯವಾದ ತಂತ್ರಾಂಶಗಳ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ನಿರ್ಮಿಸಲು ಯೋಜನೆ ರೂಪಿಸಿ ಅನುಷ್ಠಾನ ಮಾಡಲು ಮತ್ತು ನಾಡಿನ ಸಾಹಿತ್ಯ, ಸಂಸ್ಕೃತಿ, ಇತಿಹಾಸ. ಪರಂಪರೆಗಳ ಸಾಹಿತ್ಯ ಹಾಗೂ ಇತರೆ ಕಲೆಗಳನ್ನು ಆಧುನಿಕ ತಂತ್ರಜ್ಞಾನ ಮಾಧ್ಯಮಗಳ ಮೂಲಕ ಕನ್ನಡ ಭಾಷೆಯಲ್ಲಿ ಸಾರ್ವಜನಿಕರಿಗೆ ತಲುಪಿಸಲು ಅಗತ್ಯ ಕ್ರಮವಹಿಸುವುದು.

ಅನ್ವಯಿಕ ತಂತ್ರಾಂಶಗಳ ಅಭಿವೃದ್ಧಿ ಮತ್ತು ಆಧುನಿಕ ತಂತ್ರಜ್ಞಾನ ಮಾಧ್ಯಮ ಸದ್ಬಳಕೆ ಕುರಿತು ಕನ್ನಡದ ಪೂರ್ಣ ಪ್ರಮಾಣದ ಎಲ್ಲ ಆಪರೇಟಿಂಗ್ ಸಿಸ್ಟಂಗಳಿಗೆ ಹೊಂದಾಣಿಕೆಯಾಗುವ ತಂತ್ರಜ್ಞಾನ ರೂಪಿಸಲು ಮತ್ತು ಇಲಾಖೆಯ ಮಟ್ಟದಲ್ಲಿ ತಂತ್ರಜ್ಞಾನ ತಂಡವನ್ನು ರಚಿಸುವುದು.

(12) ರಂಗಮಂದಿರಗಳ ನಿರ್ಮಾಣ ಮತ್ತು ಏಕರೂಪ ನಿರ್ವಹಣೆ

ಸರ್ಕಾರದ ಮತ್ತು ಅರೆ ಸರ್ಕಾರಿ ವ್ಯಾಪ್ತಿಯಲ್ಲಿ ಬರುವ ರಂಗಮಂದಿರಗಳ ನಿರ್ವಹಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ತರುವುದು ಮತ್ತು ಈ ಎಲ್ಲ ರಂಗಮಂದಿರಗಳನ್ನು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಾಮಾನ್ಯರಿಗೆ ಎಟುಕುವ ದರಗಳಲ್ಲಿ ಏಕರೂಪ ರಿಯಾಯಿತಿ ಬಾಡಿಗೆ ದರಗಳನ್ನು ನಿಗದಿಪಡಿಸುವುದು. ರಂಗಮಂದಿರಗಳು ದುರ್ಬಳಕೆಯಾಗದಂತೆ ಕಟ್ಟುನಿಟ್ಟಿನ ಬಳಕೆ ನಿಯಮಗಳನ್ನು ಅನುಷ್ಠಾನ ಮಾಡುವುದು.

(13) ರಂಗಾಯಣಗಳ ರಚನೆ ಮತ್ತು ನಿರ್ವಹಣೆ

ಮೈಸೂರು, ಧಾರವಾಡ, ಶಿವಮೊಗ್ಗ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಬಿಂಬಿಸುವ ಮತ್ತು ಅಲ್ಲಿನ ರಂಗಭೂಮಿಯ ಸಾಧ್ಯತೆಗಳನ್ನು ಸಬಲಗೊಳಿಸುವ ಆಶಯದಿಂದ ಕಾರ್ಯ ನಿರ್ವಹಿಸುತ್ತಿದೆ. ಕರಾವಳಿ ಪ್ರದೇಶ ಮತ್ತು ಬೆಂಗಳೂರು ನಗರ ಪ್ರದೇಶಗಳು ತಮ್ಮದೇ ಆದ ವಿಶೇಷತೆಗಳಿಂದಾಗಿ ವಿಶಿಷ್ಟವಾಗಿ ಹೊರಹೊಮ್ಮಿವೆ. ಇಲ್ಲಿನ ರಂಗವೈಶಿಷ್ಟ್ಯ ಮತ್ತು ಸಾಧ್ಯತೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕರಾವಳಿ ಮತ್ತು ಬೆಂಗಳೂರು ರಂಗಾಯಣಗಳನ್ನು ಹೊಸದಾಗಿ ಸ್ಥಾಪಿಸುವುದು.

(14) ಕಾಲೇಜು ರಂಗೋತ್ಸವ:

ಪಠ್ಯೇತರ ಚಟುವಟಿಕೆಯಾಗಿ ನಾಡಿನ ಸಾಂಸ್ಕೃತಿಕ ವಲಯದಲ್ಲಿ ಪ್ರಮುಖವಾಗಿ ಗುರುತಿಸಲ್ಪಡುವಂತೆ ಯುವಜನತೆ ಸಕ್ರಿಯವಾಗಿ ತೊಡಗಿರುವ ಕಾಲೇಜು ರಂಗಭೂಮಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಜಿಲ್ಲೆ, ವಿಭಾಗಗಳು ಮತ್ತು ರಾಜ್ಯ ಹೀಗೆ ವಿವಿಧ ಹಂತಗಳಲ್ಲಿ ವಿಕೇಂದ್ರೀಕರಿಸಿ ನಾಟಕೋತ್ಸವ ಮತ್ತು ಸ್ಪರ್ಧೆಗಳನ್ನು ನಿಯತಕಾಲಿಕವಾಗಿ ಆಯೋಜಿಸುವುದು.

(15) ಉತ್ಸವಗಳಲ್ಲಿ ಸ್ಥಳೀಯರಿಗೆ ಆದ್ಯತೆ

ಸರ್ಕಾರವು ನಾಡಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಬಿಂಬಿಸುವ ಉತ್ಸವಗಳನ್ನು ಆಚರಿಸುತ್ತ ಬಂದಿದೆ. ಇಂತಹ ಉತ್ಸವಗಳಲ್ಲಿ ಸ್ಥಳೀಯ ಕಲಾಪ್ರತಿಭೆಗಳ ಮತ್ತು ಸ್ಥಳೀಯ ಕಲಾ ವೈಶಿಷ್ಟ್ಯಗಳ ಪರಿಚಯ ಈ ಉತ್ಸವದಲ್ಲಿ ಭಾಗವಹಿಸುವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರಿಗೆ ದೊರೆಯಬೇಕು. ಈ ನಿಟ್ಟಿನಲ್ಲಿ ಉತ್ಸವಗಳಲ್ಲಿ ಸಂಭಾವನೆ ಮತ್ತು ಸಂಖ್ಯೆ ದೃಷ್ಟಿಯಿಂದ ಪ್ರದರ್ಶನ ನೀಡುವ ಕಲಾವಿದರಲ್ಲಿ ಶೇಕಡಾ 75ರಷ್ಟು ಸ್ಥಳೀಯ ಅಂದರೆ ರಾಜ್ಯದ ಕಲಾವಿದರು ಮತ್ತು ಅವಶ್ಯವಿದ್ದಲ್ಲಿ ಶೇಕಡಾ 25ರ ಮಿತಿಯಲ್ಲಿ ಕಲಾವಿದರನ್ನು ತೊಡಗಿಸುವ ನಿಯಮವನ್ನು ರಚಿಸಿ ಜಾರಿಗೊಳಿಸುವುದು.

(16) ಜನಪದ ರೆಪರ್ಟರಿ ಸ್ಥಾಪನೆ

ನಾಡಿನ ಮೌಖಿಕ ಪರಂಪರೆಯ ಜನಪದ ಕಲಾವಿದರು ಅವಕಾಶ ಮತ್ತು ಸಂಭಾವನೆಯ ವಿಷಯಗಳಲ್ಲಿ ಬಹಳ ಕಾಲದಿಂದ ತಮ್ಮ ಅಕ್ಷರ ತಿಳಿವಳಿಕೆಯ ಕೊರತೆಯಿಂದ ಅನ್ಯಾಯಕ್ಕೊಳಗಾಗಿ ಅಗತ್ಯ ಗೌರವ ಸ್ಥಾನಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ನಾಡಿನ ಸಾಂಸ್ಕೃತಿಕ ಮಹತ್ವದ ಜನಪದ ಪರಂಪರೆಯನ್ನು ಕಾಪಿಟ್ಟು ಕಲಾವಿದರಿಗೆ ಸೂಕ್ತ ಆರ್ಥಿಕ ಭದ್ರತೆ ಮತ್ತು ಗೌರವ ಒದಗಿಸಿಕೊಡುವ ಸಲುವಾಗಿ ಗೌರವಪೂರ್ಣ ಸಂಭಾವನೆಯು ಮಧ್ಯವರ್ತಿಗಳ ಹಾವಳಿ ಇಲ್ಲದೇ ಕಲಾವಿದರಿಗೇ ನೇರವಾಗಿ ತಲುಪಿಸುವಲ್ಲಿ ಕ್ರಮಗಳನ್ನು ವಹಿಸುವುದು. ಜನಪದರಲ್ಲಿ ಹಿಂದಿನಿಂದಲೂ ಅತ್ಯಂತ ವಿಶಿಷ್ಟ ಕ್ರೀಡಾ ಪ್ರಕಾರಗಳಾಗಿದ್ದ ಕತ್ತಿವರಸೆ, ದೊಣ್ಣೆವರಸೆ, ಮಲ್ಲಕಂಭ, ಮಲ್ಲಯುದ್ಧ ಮುಂತಾದ ಗ್ರಾಮೀಣ ಕ್ರೀಡೆಗಳು ಮತ್ತು ಪ್ರಾಚೀನ ಸಮರ ಕಲಾಪ್ರಕಾರಗಳು ಕ್ರೀಡಾ ಪ್ರಕಾರ, ಜನಪದ ಪ್ರಕಾರಗಳೆರಡರಲ್ಲಿಯೂ ಪರಿಗಣಿಸಲ್ಪಡದೇ ಕಡೆಗಣಿಸಲ್ಪಟ್ಟಿದೆ. ಆದ್ದರಿಂದ ಇಂತಹ ಪ್ರಾಚೀನ ಜನಪದೀಯ ಕಲೆಗಳನ್ನು ಜನಪದ ಪ್ರಕಾರಗಳಲ್ಲಿ ಪರಿಗಣಿಸಿ ಅಗತ್ಯ ತರಬೇತಿ ಮತ್ತು ಪ್ರೋತ್ಸಾಹ ನೀಡುವುದು.

ಜನಪದ ಕಲಾಪ್ರಕಾರಗಳಲ್ಲಿ ಕಲಾವಿದರಿಗೆ ತರಬೇತಿ ಕೊಡಲು ಜನಪದ ರೆಪರ್ಟರಿಗಳನ್ನು ಸ್ಥಾಪಿಸುವುದು ಮತ್ತು ತನ್ಮೂಲಕ ಕುಲಕಸುಬಿನಾಚೆಗೂ ಈ ಪ್ರದರ್ಶನ ಕಲೆಗಳನ್ನು ಕಲಾಪ್ರಕಾರವಾಗಿ ಆಸಕ್ತರಿಗೆ ಈ ಪ್ರದರ್ಶನ ಕಲಾ ಪ್ರಕಾರಗಳಲ್ಲಿ ತರಬೇತಿ ನೀಡುವುದು. ತನ್ಮೂಲಕ ಕಲೆಯ ವಿಸ್ತಾರ ಮತ್ತು ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವುದು.

(17) ಪ್ರವಾಸಿ ಕೇಂದ್ರಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ :

ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗರು ಆಗಮಿಸುವ ಪ್ರಮುಖ ಕೇಂದ್ರಗಳಲ್ಲಿ ನಾಡಿನ ಸಾಂಸ್ಕೃತಿಕ ಸಿರಿಯನ್ನು ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಪ್ರವಾಸಿಗರು ಮತ್ತು ಸಾರ್ವಜನಿಕರಿಗೆ ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತ ಕಲೆಯ ಅನಾವರಣ ಮತ್ತು ಕಲಾವಿದರಿಗೆ ವೇದಿಕೆ ಮತ್ತು ಆರ್ಥಿಕ ಅವಕಾಶಗಳನ್ನು ಒದಗಿಸುವ ಯೋಜನೆಗಳನ್ನು ರೂಪಿಸುವುದು.

(18) ಕಲಾಕೃತಿಗಳ ಮಾರಾಟ ಕೇಂದ್ರಗಳ ಸ್ಥಾಪನೆ ಮತ್ತು ಕಲಾಕೃತಿಗಳ ಪ್ರದರ್ಶನ:

ಕರ್ನಾಟಕ ರಾಜ್ಯದ ವಿಶಿಷ್ಟ ಕಲಾ ಪ್ರಕಾರಗಳಲ್ಲಿ ಸಾಕಷ್ಟು ಸಂಖ್ಯೆಯ ಕಲಾವಿದರು ಸಕ್ರಿಯರಾಗಿ ತೊಡಗಿಕೊಂಡು ಚಿತ್ರಕಲೆಯ ಪರಂಪರೆ ಪ್ರಯೋಗಗಳಿಗೆ ಕಾರಣರಾಗಿದ್ದಾರೆ. ಇಂತಹ ಕಲಾಕೃತಿಗಳ ಮಾರಾಟ ಮತ್ತು ವಿತರಣೆ ಜಾಲವನ್ನು ಸುಸ್ಥಿರಗೊಳಿಸುವ ಸಲುವಾಗಿ ಜಿಲ್ಲಾ ಪುಸ್ತಕ ಮಾರಾಟ ಮಳಿಗೆಗಳಂತೆ ಪ್ರತಿ ಜಿಲ್ಲೆಯಲ್ಲಿಯೂ ಗ್ಯಾಲರಿಗಳು ಮತ್ತು ಪುಸ್ತಕಗಳು, ಚಿತ್ರ ಮತ್ತು ಶಿಲ್ಪ ಕಲಾಕೃತಿಗಳು ಮತ್ತು ಕುಶಲಕರ್ಮಿಗಳು ತಯಾರಿಸುವ ವಿವಿಧ ಪ್ರಕಾರಗಳ ಕಲಾ ಸಾಮಗ್ರಿಗಳ ಮಾರಾಟ ಕೇಂದ್ರ ಒದಗಿಸುವ ಮೂಲಕ ಕಲೆಗಳ ಪ್ರಸಾರ ಮತ್ತು ಪ್ರಚಾರಕ್ಕೆ ನೆರವು ಹಾಗೂ ಮಾರುಕಟ್ಟೆ ಒದಗಿಸಿದಂತಾಗುತ್ತದೆ.

ಇಲಾಖೆಯು ಆಯೋಜಿಸುವ ಚಿತ್ರಕಲಾ ಶಿಬಿರಗಳಲ್ಲಿ ಸಿದ್ಧವಾಗುವ ಚಿತ್ರ ಮತ್ತು ಶಿಲ್ಪ ಕಲಾಕೃತಿಗಳನ್ನು ಶಾಲಾ–ಕಾಲೇಜುಗಳ ಆವರಣದಲ್ಲಿ ಶಾಶ್ವತ ಪ್ರದರ್ಶನಕ್ಕೆ ಒದಗಿಸಿಕೊಡುವುದು, ತನ್ಮೂಲಕ ವಿದ್ಯಾರ್ಥಿಗಳಲ್ಲಿ ಕಲಾಭಿರುಚಿಯ ವರ್ಧನೆಗೆ ನೆರವಾಗುವುದು. ಸರ್ಕಾರಿ ಕಚೇರಿಗಳಲ್ಲಿ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ಒದಗಿಸಿಕೊಡುವ ನಿಟ್ಟಿನಲ್ಲಿ ಕಚೇರಿಯ ಕಲಾತ್ಮಕ ಸೌಂದರ್ಯ ಮತ್ತು ಪ್ರಾದೇಶಿಕ ಸೊಗಡನ್ನು ಬಿಂಬಿಸುವ ಚಿತ್ರ ಮತ್ತು ಶಿಲ್ಪ ಕಲಾಕೃತಿಗಳನ್ನು ಖರೀದಿಸಲು ಮತ್ತು ಅವುಗಳ ನಿರ್ವಹಣೆಗೆ ಕ್ರಮ ವಹಿಸುವುದು.

(19) ಕರ್ನಾಟಕ ಕಲಾಗ್ರಾಮ:

ಕರ್ನಾಟಕ ಏಕೀಕರಣದ ಸಂಭ್ರಮದ ಕುರುಹಾಗಿ ಕರ್ನಾಟಕ ರಾಜ್ಯದ ವಿವಿಧ ಕಲಾಪ್ರಕಾರಗಳನ್ನು, ತರಬೇತಿ ನೀಡುವ, ಪ್ರದರ್ಶನಕ್ಕೆ ವೇದಿಕೆ ಒದಗಿಸುವ ಮತ್ತು ಸಾಹಿತಿ ಕಲಾವಿದರ ಸಾಹಿತ್ಯ–ಕಲಾ ಸೃಜನೆಗೆ ನೆಲೆಯಾಗಿ ವಸತಿ ಒದಗಿಸುವ, ವಿವಿಧ ಕಲಾಪ್ರಕಾರಗಳ ತರಬೇತಿಗಳಿಗೆ ನೆಲೆ ಒದಗಿಸುವ ತರಬೇತಿ–ಕಾರ್ಯಾಗಾರ, ಕಮ್ಮಟಗಳಿಗೆ ನೆಲೆ, ಹೀಗೆ ಕರ್ನಾಟಕ ಕಲಾದರ್ಶನದ ಆಧುನಿಕ ವ್ಯವಸ್ಥೆಯುಳ್ಳ 'ಕಲಾಗ್ರಾಮ' ಸಮಗ್ರ ಯೋಜನೆ ರೂಪಿಸಲಾಗಿದೆ, ವಿವಿಧ ಹಂತಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯ ಅಡಿಯಲ್ಲಿ ವಸ್ತು ಸಂಗ್ರಹಾಲಯಗಳೂ ಸೇರಿದಂತೆ ಪ್ರತಿ ಜಿಲ್ಲೆಗೆ ಒಂದು ಕಲಾಗ್ರಾಮವನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ. ಇದನ್ನು ವಿದ್ಯಾರ್ಥಿ–ಯುವಜನರ ಕಲಿಕೆಯ ಕೇಂದ್ರವಾಗಿ ಮತ್ತು ಪ್ರವಾಸಿಗರಿಗೆ ಸ್ಥಳೀಯ ವೈಶಿಷ್ಟ್ಯ ಮತ್ತು ವೈವಿಧ್ಯಗಳನ್ನು ತೋರಿಸಿಕೊಡುವ ಜಿಲ್ಲಾ ಕಲಾಗ್ರಾಮಗಳನ್ನು ಆದ್ಯತೆಯ ಮೇರೆಗೆ ಸ್ಥಾಪಿಸುವುದು.

(20) ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ

ಇಡಿಯ ರಾಷ್ಟ್ರದಲ್ಲಿ ಮಧ್ಯಪ್ರದೇಶದ ಅಮರಕಂಟಕದಲ್ಲಿ ಮಾತ್ರ ಒಂದು ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯವಿದೆ. ಇತರೆ ಯಾವುದೇ ರಾಜ್ಯದಲ್ಲೂ ಇಲ್ಲ. ಕರ್ನಾಟಕದ ವಿವಿಧ ಭಾಗಗಳಲ್ಲಿ ಬುಡಕಟ್ಟು ಜನಾಂಗಗಳು ಮತ್ತು ಸಂಸ್ಕೃತಿಗಳು ವಿಸ್ತಾರವಾಗಿದ್ದು ಅವುಗಳ ಅಧ್ಯಯನ ಮತ್ತು ಸಂಶೋಧನೆಗೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯದ ಅಗತ್ಯವಿದೆ. ಈ ವಿಶ್ವವಿದ್ಯಾಲಯ

೭೭

ಸ್ಥಾಪನೆಯಾದರೆ ಕರ್ನಾಟಕವು ಬುಡಕಟ್ಟು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ ಮೊದಲನೆಯ ರಾಜ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪಿಸುವುದು.

**(21) ಸೂಫಿ ಸಂಸ್ಕೃತಿ ಮತ್ತು ತತ್ವಪದ ಅಧ್ಯಯನ ಕೇಂದ್ರ ಸ್ಥಾಪನೆ**

ಜೀವನ ದರ್ಶನಗಳನ್ನು ಕಟ್ಟುಪದಗಳಾಗಿ, ಹಾಡುಗಳಾಗಿ ರೂಪಿಸುವ ಮೂಲಕ ಸಮಾಜದಲ್ಲಿ ಸಾಮರಸ್ಯ ಮತ್ತು ಸೌಹಾರ್ದತೆಯನ್ನು ಸಾರುವ ಸಾರ್ವಕಾಲಿಕ ಪರಂಪರೆಯಾಗಿ ತತ್ವಪದಕಾರರು ಮತ್ತು ಸೂಫಿಗಳು ಕರ್ನಾಟಕದಲ್ಲಿ ವಿಶೇಷವಾಗಿ ಶ್ರಮಿಸಿದ್ದಾರೆ. ಇವರುಗಳ ಬದುಕು ಮತ್ತು ಸಂದೇಶಗಳನ್ನು ಅಧ್ಯಯನ ಮಾಡಿ ಸಂದೇಶಗಳನ್ನು ಒಟ್ಟುಗೂಡಿಸಿ, ಅವುಗಳ ಸಂರಕ್ಷಣೆ ಮತ್ತು ಪ್ರಸಾರ ಹಾಗೂ ಪ್ರಚಾರಕ್ಕೆ ಅಗತ್ಯ ವ್ಯವಸ್ಥೆಗಳನ್ನು ರೂಪಿಸಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವುದು.

**(22) ಯುವಜನ ಸಂಸ್ಕೃತಿ ಶಿಬಿರ :**

ಜಾಗತೀಕರಣದ ಫಲವಾಗಿ ವಿಭಿನ್ನ ಸಂಸ್ಕೃತಿ ಮತ್ತು ಭಾಷೆಗಳ ನಡುವೆ ನಾಡಿನ ಯುವಜನರಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಸ್ಮಿತೆಯ ಬಗ್ಗೆ ಜಾಗೃತಿ ಮತ್ತು ಅಭಿಮಾನ ಮೂಡಿಸುವ ನಿರಂತರ ಚಟುವಟಿಕೆಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಇಂತಹ ಸಂಸ್ಕೃತಿ ಶಿಬಿರಗಳ ಮೂಲಕ ನಿರಂತರವಾಗಿ ಸಾಮಾಜಿಕ-ಸಾಂಸ್ಕೃತಿಕ ವಾತಾವರಣವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಚಟುವಟಿಕೆಗಳನ್ನು ಕೈಗೊಳ್ಳುವುದು.

**(23) ತುಳು ಭಾಷೆಗೆ ಸಂವಿಧಾನದ ಎಂಟನೆಯ ಪರಿಚ್ಛೇಧದಲ್ಲಿ ಸಾಂವಿಧಾನಿಕ ಮಾನ್ಯತೆ ಪಡೆಯಲು ಪ್ರಯತ್ನ**

ತುಳು ಭಾಷೆಗೆ ಸಂವಿಧಾನದ ಎಂಟನೆಯ ಪರಿಚ್ಛೇಧದಲ್ಲಿ ಸೇರ್ಪಡೆ ಮಾಡಲು ಬಹಳ ಕಾಲದಿಂದಲೂ ಬೇಡಿಕೆ ಇದ್ದು, ಈಡೇರಬೇಕಾಗಿದೆ. ಈ ದಿಕ್ಕಿನಲ್ಲಿ ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವುದು.

**(24) ವಿವಿಧ ಟ್ರಸ್ಟ್/ ಪ್ರತಿಷ್ಠಾನಗಳ ಅವಧಿ ನಿಗದಿ:**

ಸರ್ಕಾರವು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳ ಹಿರಿಯರ ಹೆಸರಿನಲ್ಲಿ ವಿವಿಧ ಟ್ರಸ್ಟ್ ಮತ್ತು ಪ್ರತಿಷ್ಠಾನಗಳನ್ನು ರಚಿಸಲಾಗಿದೆ. ಈ ಸಂಸ್ಥೆಗಳು ನಿರಂತರವಾಗಿ ವಿನೂತನ ಯೋಜನೆಗಳೊಂದಿಗೆ ಉದ್ದೇಶಿತ ಕಾರ್ಯಸಾಧನೆಗಾಗಿ ಕಾಲಬದ್ಧವಾಗಿ ಟ್ರಸ್ಟ್ ಮತ್ತು ಪ್ರತಿಷ್ಠಾನಗಳಿಗೆ ಸದಸ್ಯರನ್ನು ನೇಮಿಸುವುದು.

ವಿವಿಧ ಟ್ರಸ್ಟ್ ಮತ್ತು ಪ್ರತಿಷ್ಠಾನಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಯನ್ನು ಕಾಲಾವಧಿ ನಿಗದಿಪಡಿಸಿ ಮಾಡಲಾಗುತ್ತಿದ್ದರೂ ಸರ್ಕಾರದ ಅಪೇಕ್ಷೆ ಇರುವವರೆಗೂ ಅವರು ತಮ್ಮ ಪದಾವಧಿಯಲ್ಲಿ ಮುಂದುವರೆಯಲು ಅಗತ್ಯ ವ್ಯವಸ್ಥೆಗಳನ್ನು ರೂಪಿಸುವುದು.

**(25) ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪನೆ**

ಕರ್ನಾಟಕದಲ್ಲಿ ವಿಸ್ತಾರವಾಗಿ ಬೆಳೆದ ಪ್ರಾಕೃತ ಮತ್ತು ಪಾಲಿ ಭಾಷೆಗಳಲ್ಲಿ ಜೈನ ಮತ್ತು ಬೌದ್ಧ ಧರ್ಮಗ್ರಂಥಗಳು ಮತ್ತು ಶಾಸನಗಳು ಲಭಿಸಿವೆ. ಈ ಬಗ್ಗೆ ನಿರಂತರವಾಗಿ ಸಂಬಂಧಿತ ವಿಶ್ವವಿದ್ಯಾಲಯಗಳ ಮೂಲಕ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಅನುವಾಗುವಂತೆ ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪಿಸುವುದು.

**(26) ಆರ್ಥಿಕ ಸಂಕಷ್ಟದಲ್ಲಿರುವ ಸಾಂಸ್ಕೃತಿಕ ವ್ಯಕ್ತಿಗಳಿಗೆ ಸಹಾಯ ಯೋಜನೆ**

ರಂಗಭೂಮಿ, ಸಾಹಿತ್ಯ, ಜನಪದ, ಸಂಗೀತ, ಚಿತ್ರಕಲೆ, ಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಜೀವನೋಪಾಯಕ್ಕಾಗಿ ಶ್ರಮಿಸುತ್ತ ಬಂದಿರುವ ಕಲಾವಿದರು ತಮ್ಮ ಜೀವನ ಸಂಧ್ಯಾ ಕಾಲದಲ್ಲಿ ಆಸರೆ ಇಲ್ಲದೆ ಕಷ್ಟಕರ ಜೀವನ ನಡೆಸುವ ಪರಿಸ್ಥಿತಿ ಇದೆ. ಇಂತಹವರ ನೆರವಿಗಾಗಿ 'ಸಾಂಸ್ಕೃತಿಕ ಆಪತ್ ನಿಧಿ' ಸ್ಥಾಪಿಸಿ ನೆರವಾಗುವ ಯೋಜನೆ ರೂಪಿಸಿ ಅನುಷ್ಠಾನ ಮಾಡುವುದು.

(27) ಸಾಮಾಜಿಕ ತಪಾಸಣೆ :

ಸಮಾಜದ ಸಂಪನ್ಮೂಲಗಳನ್ನು ಬಳಸಿ ಕಾರ್ಯ ನಿರ್ವಹಿಸುವ ಹಲವು ಸಂಸ್ಥೆಗಳು ಅನುದಾನ ಬಳಕೆಯ ಬಗ್ಗೆ ಹಣಕಾಸು ತಪಾಸಣೆಗೆ ಒಳಪಡುತ್ತವೆ. ಈ ತಪಾಸಣೆಗಳು ಹಣಕಾಸು ಆಯಾಮದಲ್ಲಿ ಗುರಿ-ಸಾಧನೆಯನ್ನು ಮಾತ್ರ ಪರಿಗಣಿಸುತ್ತವೆ. ಹಾಗೆಯೇ ಈ ಹಣಬಳಕೆಯ ಸಾಮಾಜಿಕ ಪರಿಣಾಮಗಳನ್ನು ಅಧ್ಯಯನ ಮಾಡುವ ಅಗತ್ಯವಿರುತ್ತದೆ. ಸರ್ಕಾರದ ವಿವಿಧ ಯೋಜನೆಗಳು ಮತ್ತು ವಿವಿಧ ಸಂಸ್ಥೆಗಳಿಗೆ ಮಂಜೂರಾದ ಅನುದಾನಗಳು ಸದ್ಬಳಕೆ ಆಗಿವೆಯೇ ಇಲ್ಲವೇ ಎಂಬ ಬಗ್ಗೆ ಕಾಲಕಾಲಕ್ಕೆ ಸಾಮಾಜಿಕ ತಪಾಸಣೆ ಕೈಗೊಳ್ಳಬೇಕಾಗಿರುವುದು ಅವಶ್ಯಕ. ಇದರಿಂದ ಪುನರಾವರ್ತಿ ಯೋಜನೆಗಳು, ಅನುಪಯುಕ್ತ ವೆಚ್ಚಗಳನ್ನು ಸದುಪಯೋಗವಾಗುವ ನಿಟ್ಟಿನಲ್ಲಿ ಪುನರ್ರಚಿಸಬಹುದು. ಹಾಗಾಗಿ ಯೋಜನೆಗಳ ಸಾಮಾಜಿಕ ತಪಾಸಣೆ ಕೈಗೊಳ್ಳುವುದು.

4) ಸದರಿ ಸಾಂಸ್ಕೃತಿಕ ನೀತಿಯ ಅನುಷ್ಠಾನಕ್ಕೆ ಅಗತ್ಯವಾಗಿರುವ ಒಟ್ಟು ಹೆಚ್ಚುವರಿ ಅನುದಾನ:-

| | | |
|---|---|---|
| 1. | ವಾರ್ಷಿಕ ವೆಚ್ಚಗಳು | ರೂ.36.68 ಕೋಟಿಗಳು |
| 2. | ಒಂದು ಬಾರಿಯ ವೆಚ್ಚ | ರೂ.23.00 ಕೋಟಿಗಳು |
| | ಒಟ್ಟು | ರೂ.59.68 ಕೋಟಿಗಳು |

5) ಮೇಲ್ಕಂಡ ರೂ.23.00 ಕೋಟಿಗಳ ವೆಚ್ಚವು ಒಂದು ಬಾರಿ ಮಾತ್ರ ಮಾಡುವ ವೆಚ್ಚವಾಗಿದ್ದು, ಇದರಲ್ಲಿ ರೂ.10.00 ಕೋಟಿಗಳು ಕಲಾವಿದರ ಕ್ಷೇಮಾಭಿವೃದ್ಧಿ ಆಪತ್‌ನಿಧಿಯ ಇಡಿಗಂಟಾಗಿರುತ್ತದೆ. ಇಡಿಗಂಟಿನ ಬಡ್ಡಿ ಹಣದಿಂದ ಮಾತ್ರ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತದೆ ಹಾಗೂ ಕರ್ನಾಟಕ ಕಲಾಗ್ರಾಮ ನಿರ್ಮಾಣಗಳಿಗೆ ಮಾಡುವ ರೂ.13.00 ಕೋಟಿಗಳ ವೆಚ್ಚವು ಆಸ್ತಿ ಸೃಜನೆಯ ದೃಷ್ಟಿಯಿಂದ ಮಾಡುವ ಒಂದು ಬಾರಿಯ ವೆಚ್ಚವಾಗಿರುತ್ತದೆಂದು ತಿಳಿಸುತ್ತಾ, ಈ ನೀತಿಯನ್ನು ಜಾರಿಗೊಳಿಸುವುದರಿಂದ ರೂ.36.68 ಕೋಟಿಗಳ ವಾರ್ಷಿಕ ವೆಚ್ಚವನ್ನು ಹಾಗೂ ಒಂದು ಬಾರಿ ವೆಚ್ಚ ರೂ.23.00 ಕೋಟಿಗಳನ್ನು ಇಲಾಖೆಗೆ ಒದಗಿಸಲಾದ ಅನುದಾನದಿಂದ ಸಂಬಂಧಪಟ್ಟ ಶೀರ್ಷಿಕೆಯಡಿ ಭರಿಸಲು ಅನುಮೋದನೆ ನೀಡುವಂತೆ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

6) ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಸಂವಾ 560 ಕಸಧ 2013, ಬೆಂಗಳೂರು, ದಿನಾಂಕ:10-10-2017.

7) ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರೊ.ಬರಗೂರು ರಾಮಚಂದ್ರಪ್ಪರವರ ಅಧ್ಯಕ್ಷತೆಯಲ್ಲಿನ ಸಾಂಸ್ಕೃತಿಕ ನೀತಿ ಶಿಫಾರಸ್ಸು ಸಮಿತಿಯು ಸಲ್ಲಿಸಿದ ಶಿಫಾರಸ್ಸುಗಳನ್ನೊಳಗೊಂಡಂತೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಚಿವ ಸಂಪುಟದ ಉಪ ಸಮಿತಿಯು ಸಲ್ಲಿಸಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ. ಶಿಫಾರಸ್ಸುಗಳು ಮತ್ತು ಕ್ರಮ ವಹಿಸಬೇಕಾದ ಪ್ರಾಧಿಕಾರದ ವಿವರಗಳು ಕೆಳಕಂಡಂತಿವೆ.

8) (1) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ ಮತ್ತು ಆಡಳಿತ ವಿಕೇಂದ್ರೀಕರಣ:-

ಈ ಇಲಾಖೆಯು ಹೆಚ್ಚು ದಕ್ಷತೆಯಿಂದ ಕಾರ್ಯನಿರ್ವಹಿಸಲು ಜನರ ಬಳಿ ಆಡಳಿತ ತೆಗೆದುಕೊಂಡು ಹೋಗುವ ಸಲುವಾಗಿ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರಾದೇಶಿಕ ಕಚೇರಿಗಳನ್ನು ಸ್ಥಾಪಿಸುವುದು. ಈ ನಾಲ್ಕು ಪ್ರಾದೇಶಿಕ ಕಚೇರಿಗಳಲ್ಲಿ ಪ್ರಸ್ತುತ ಕೇಂದ್ರ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಂಟಿ ನಿರ್ದೇಶಕರನ್ನು ಪ್ರಾದೇಶಿಕ ನಿರ್ದೇಶಕರಾಗಿ ನೇಮಿಸುವುದು. ಕಚೇರಿಯ ನಿರ್ವಹಣೆಗೆ ಅಗತ್ಯ ಸಹಾಯಕ ನಿರ್ದೇಶಕರು-1, ಅಧೀಕ್ಷಕರು-1, ಪ್ರಥಮ ದರ್ಜೆ ಸಹಾಯಕರು-1,

ಕಂಪ್ಯೂಟರ್ ಆಪರೇಟರ್/ಬೆರಳಚ್ಚುಗಾರರು-2, ದ್ವಿತೀಯ ದರ್ಜೆ ಸಹಾಯಕರು-1, ದಲಾಯತರು-1, ವಾಹನ ಚಾಲಕರು-1 ಸೇರಿದಂತೆ ಒಟ್ಟಾರೆ ಎಂಟು ಮಂದಿ ಅಧಿಕಾರಿ ಸಿಬ್ಬಂದಿ ವ್ಯವಸ್ಥೆಯುಳ್ಳ ಪ್ರಾದೇಶಿಕ ಕಚೇರಿಗಳನ್ನು ಪರಿಣಾಮಕಾರಿ ಆಡಳಿತ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಲು ಆದೇಶಿಸಿದೆ. ಈ ವಿಭಾಗೀಯ ಕಚೇರಿಗಳು ಈಗಾಗಲೇ ಆಯಾ ಕಂದಾಯ ವಿಭಾಗದಲ್ಲಿ ಬರುವ ಜಿಲ್ಲೆಗಳ ಕನ್ನಡ ಸಂಸ್ಕೃತಿ ಇಲಾಖೆಗಳ ವಿಭಾಗೀಯ ಕಚೇರಿಯಾಗಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಜವಾಬ್ದಾರಿಯಾಗಿರುವುದು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಇಬ್ಬರು ಅಪರ ನಿರ್ದೇಶಕರು, ಸಂಪೂರ್ಣ ಇಲಾಖೆಯ ಆಡಳಿತ ಮತ್ತು ಕಾರ್ಯಕ್ರಮಗಳ ಉಸ್ತುವಾರಿಗಾಗಿ ಇಬ್ಬರು ಉಪನಿರ್ದೇಶಕರ ಮಟ್ಟದ ಅಧಿಕಾರಿಗಳು ಮತ್ತು ಇಬ್ಬರು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಕೇಂದ್ರ ಕಚೇರಿಯಲ್ಲಿ ಸೃಜಿಸಿ ಆದೇಶಿಸಿದೆ.

ಜಿಲ್ಲಾ ಕೇಂದ್ರಗಳಲ್ಲಿ ಇರುವ ಸಿಬ್ಬಂದಿ ಕೊರತೆಯನ್ನು ನೀಗಿಸಲು ಪ್ರತಿ ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕರ ಹಂತದ ಅಧಿಕಾರಿಯ ನೇತೃತ್ವದಲ್ಲಿ, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಬೆರಳಚ್ಚುಗಾರರು/ಕಂಪ್ಯೂಟರ್ ಆಪರೇಟರ್ ಮತ್ತು ದಲಾಯತ ಸೇರಿ ಪ್ರತಿ ಜಿಲ್ಲೆಗೆ ಒಟ್ಟಾರೆ ಐದು ಹುದ್ದೆಗಳು ಹಾಗೂ ಜಿಲ್ಲಾ ರಂಗಮಂದಿರಗಳು ಕಾರ್ಯ ನಿರ್ವಹಿಸುತ್ತಿರುವ ಕಡೆಗಳಲ್ಲಿ ಸೌಂಡ್ ಎಂಜಿನಿಯರ್ ಮತ್ತು ದ್ವಿತೀಯ ದರ್ಜೆ ಸಹಾಯಕರು/ಕಂಪ್ಯೂಟರ್ ಆಪರೇಟರ್, ಕ್ಲೀನರ್/ದಲಾಯತರು ಹುದ್ದೆಗಳಿರುವಂತೆ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವುದು. ಹುದ್ದೆಗಳು ಸೃಜನೆಯಾಗಿಲ್ಲದ ಜಿಲ್ಲೆಗಳಲ್ಲಿ ಇಲ್ಲಿ ಪ್ರಸ್ತಾಪಿಸಿರುವಂತೆ ಹುದ್ದೆಗಳ ಸೃಜನೆಗೆ ಕ್ರಮವಹಿಸಿ ಜಿಲ್ಲಾ ಹಂತದ ಕಚೇರಿಗಳನ್ನು ಸಬಲೀಕರಣಗೊಳಿಸಿ ಸರ್ಕಾರದ ಆಶಯಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸಲು ಕ್ರಮ ವಹಿಸುವುದು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಸಾಹಿತ್ಯ ಮತ್ತು ಸಂಸ್ಕೃತಿ ಕಲಾ ಪರಂಪರೆಗಳ ನಿಕಟ ಪರಿಚಯ ದೊರಕಿಸಿ ಕೊಡುವ ಸಲುವಾಗಿ ನಿಯತಕಾಲಿಕವಾಗಿ ಸಾಂಸ್ಕೃತಿಕ ಮಾಹಿತಿ ಶಿಬಿರಗಳನ್ನು ಮತ್ತು ಆಡಳಿತಾತ್ಮಕ ತರಬೇತಿ ಶಿಬಿರಗಳನ್ನು ಆಯೋಜಿಸುವುದು.

ಮೇಲ್ಕಂಡಂತೆ ನಮೂದಿಸಿರುವ ಹುದ್ದೆಗಳ ಸೃಜನೆ ಮತ್ತು ವೃಂದ ಹಾಗೂ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

## (2) ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ

ಕರ್ನಾಟಕ ರಾಜ್ಯದಲ್ಲಿರುವ ಐತಿಹಾಸಿಕ ಸ್ಮಾರಕಗಳು, ನಿರ್ಮಾಣಗಳು ಮತ್ತು ವಸ್ತುಗಳನ್ನು ಪ್ರಾಚ್ಯಪರಂಪರೆಯ ಅಡಿಯಲ್ಲಿ ಗುರುತಿಸಿ ಘೋಷಿಸುವ ಮತ್ತು ಮುಂದಿನ ಪೀಳಿಗೆಗೆ ಇತಿಹಾಸದ ಕುರುಹಾಗಿ ಸಂರಕ್ಷಿಸುವ ಮಹತ್ವದ ಕಾರ್ಯ ಜವಾಬ್ದಾರಿಯನ್ನು ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆಯು ನಿರ್ವಹಿಸುತ್ತಿದೆ. ಇಂತಹ ಮಹತ್ವಪೂರ್ಣ ಇಲಾಖೆಯು ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆಯ ಸಹಯೋಗದಲ್ಲಿ ಸಹ ಕಾರ್ಯನಿರ್ವಹಿಸುತ್ತಿದ್ದು, ಸುಮಾರು 800 ಸಂರಕ್ಷಿತ ಸ್ಮಾರಕಗಳು ಮತ್ತು 20,000 ಅಘೋಷಿತ ಸ್ಮಾರಕಗಳ ಘೋಷಣೆ ಮತ್ತು ಸಂರಕ್ಷಣೆಯ ನಿರೀಕ್ಷೆಯಲ್ಲಿವೆ.

30 ಜಿಲ್ಲಾ ಕೇಂದ್ರಗಳಿಗೆ ಒಬ್ಬರಂತೆ ಪ್ರಾಚ್ಯವಸ್ತು ಪಾಲಕರು, ಕಚೇರಿಗೆ ಪ್ರಥಮ ದರ್ಜೆ ಸಹಾಯಕರು, ಕಂಪ್ಯೂಟರ್ ಆಪರೇಟರ್ ಮತ್ತು ದಲಾಯತ ಹುದ್ದೆಗಳು ಸೇರಿದಂತೆ ತಲಾ ಜಿಲ್ಲೆಗೆ ಒಟ್ಟು ನಾಲ್ಕು ಹುದ್ದೆಗಳನ್ನು ಸೃಜಿಸಲು ಆದೇಶಿಸಿದೆ. ಹುದ್ದೆಗಳ ಸೃಜನೆ ಮತ್ತು ವೃಂದ ಹಾಗೂ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
ಕ್ರಮ: ಆಯುಕ್ತರು, ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ, ಮೈಸೂರು.

(3) ಪ್ರಶಸ್ತಿಗಳ ವಿತರಣೆ ಕಾಲಬದ್ಧತೆ ಮತ್ತು ಏಕರೂಪತೆ

ಕರ್ನಾಟಕ ರಾಜ್ಯ ಸರ್ಕಾರವು ವಿವಿಧ ವಿಷಯ ಕ್ಷೇತ್ರಗಳಲ್ಲಿ ಸಾಧಕರಿಗೆ ಕೊಡಮಾಡುವ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳ ಮೊತ್ತದಲ್ಲಿ ಏಕರೂಪತೆ ಕಾಯ್ದುಕೊಳ್ಳುವ ಮೂಲಕ ಪ್ರಶಸ್ತಿಗಳಲ್ಲಿ ತಾರತಮ್ಯ ತೊಲಗಿಸಲು ರಾಷ್ಟ್ರ ಮಟ್ಟದ ಪ್ರಶಸ್ತಿಗಳಿಗೆ ತಲಾ ಹತ್ತು ಲಕ್ಷ ರೂಪಾಯಿ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಳಿಗೆ ತಲಾ ಐದು ಲಕ್ಷ ರೂಪಾಯಿ ಗೌರವಧನ ನೀಡಲು ಶಿಫಾರಸ್ಸು ಮಾಡುತ್ತದೆ ಮತ್ತು ಎಲ್ಲ ಪ್ರಶಸ್ತಿಗಳನ್ನು ಆಯಾ ವರ್ಷದಲ್ಲಿಯೇ ಆಯ್ಕೆ ಮಾಡಿ ಸಕಾಲದಲ್ಲಿ ಪ್ರಧಾನ ಮಾಡಲು ಕ್ರಮ ವಹಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(4) ಸಾಹಿತಿ-ಕಲಾವಿದರಿಗೆ ಮಾಸಾಶನ:

ಜೀವನ ಸಂಧ್ಯಾ ಕಾಲದಲ್ಲಿ ಕಲಾವಿದರು ಮತ್ತು ಸಾಹಿತಿಗಳು ಗೌರವಪೂರ್ಣ ಬದುಕನ್ನು ಬದುಕಲನುವಾಗುವಂತೆ ಮಾಸಾಶನವನ್ನು ನೀಡಲಾಗುತ್ತಿದೆ. ಮಾಸಾಶನ ಕೋರಿ ಸಲ್ಲಿಕೆಯಾಗುವ ಅರ್ಜಿಗಳನ್ನು ಕಾಲಬದ್ಧವಾಗಿ ವಿಲೇವಾರಿ ಮಾಡಿ ಆದ್ಯತೆಯ ಮೇರೆಗೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾಸಾಶನ ವಿತರಿಸುವುದು. ಮಾಸಾಶನವನ್ನು ರೂ.2,000/-ಗಳಿಗೆ ಏರಿಸಿ ಮಂಜೂರು ಮಾಡಿ ಕಲಾವಿದರಿಗೆ ಪಾವತಿಸುವುದು.

ಮಾಸಾಶನ ಮಂಜೂರಾತಿ ಸಂದರ್ಭದಲ್ಲಿ ಸಾಮಾನ್ಯ ಕನಿಷ್ಠ ವಯೋಮಿತಿ 58 ವರ್ಷಗಳು. ವಿಶೇಷ ಸಂದರ್ಭದಲ್ಲಿ ಕಲಾವಿದರ ಆರ್ಥಿಕ ಮತ್ತು ಆರೋಗ್ಯ ಪರಿಸ್ಥಿತಿಗಳನ್ನು 50 ವರ್ಷ ಮೀರಿದ ಕಲಾವಿದರನ್ನು ಪರಿಗಣಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(5) ಇಲಾಖೆಯ ಅಡಿಯಲ್ಲಿ ರಚಿತವಾಗಿರುವ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳ ಸಬಲೀಕರಣ

ಅಕಾಡೆಮಿಗಳು ಯೋಜಿತವಾಗಿ ರೂಪಿಸಿಕೊಂಡಿರುವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ನಿಗದಿತ ಅವಧಿಯವರೆಗೆ ನಿಯೋಜಿತರಾದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಅವಧಿ ಮುಗಿದ ನಂತರವೂ ಹೊಸ ನೇಮಕಾತಿ ಆಗುವವರೆಗೆ ಮುಂದುವರೆಸುವುದು. ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕಾತಿ ಮಾಡುವಾಗ ಸಾಧ್ಯವಾದಷ್ಟು ಸಾಮಾಜಿಕ ನ್ಯಾಯ, ಲಿಂಗಾಧಾರಿತ ಪ್ರಾತಿನಿಧ್ಯ, ಪ್ರಾದೇಶಿಕ ನ್ಯಾಯಗಳಿಗೆ ಚ್ಯುತಿ ಬಾರದಂತೆ ಯುವ ಪ್ರತಿಭೆಗಳೂ ಸೇರಿದಂತೆ ಎಲ್ಲ ವರ್ಗಗಳ ವಿಷಯಕ್ಷೇತ್ರ ಪರಿಣತರನ್ನೂ ಪರಿಗಣಿಸಿ ಅವಕಾಶ ಕಲ್ಪಿಸುವುದು. ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಮುಂದಿನ ಅವಧಿಗೆ ಮಾತ್ರ ಮರುನೇಮಕ ಮಾಡುವಂತಿಲ್ಲ. ಅಕಾಡೆಮಿ ಮತ್ತು ಪ್ರಾಧಿಕಾರಗಳು ಅಗತ್ಯಾನುಸಾರವಾಗಿ ಕಾರ್ಯಕ್ರಮ ಅನುಷ್ಠಾನಕ್ಕೆ ಸ್ಥಳೀಯ ತಜ್ಞ ಸಂಪನ್ಮೂಲ ಕ್ರೋಢೀಕರಿಸಲು ಅವಕಾಶ ಒದಗಿಸುವುದು.

ಕರ್ನಾಟಕ ಉರ್ದು ಅಕಾಡೆಮಿಯು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಭಾಗವಾಗಿ ರಚನೆಯಾಗಿದ್ದು, ಕನ್ನಡ ನಾಡಿನಲ್ಲಿ ಉರ್ದು ಮಾತನಾಡುವ ಬಹುದೊಡ್ಡ ಸಾಂಸ್ಕೃತಿಕ ಜನವರ್ಗವನ್ನು ಸಾಂಸ್ಕೃತಿಕವಾಗಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಅಲ್ಪಸಂಖ್ಯಾತ ಇಲಾಖೆಗೆ ಹಸ್ತಾಂತರವಾಗಿರುವ ಉರ್ದು ಅಕಾಡೆಮಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಮರಳಿ ತರಲು ಕ್ರಮ ವಹಿಸತಕ್ಕದ್ದು.

ತುಳು, ಕೊಡವ, ಕೊಂಕಣಿ, ಅರೆಭಾಷೆ ಬ್ಯಾರಿ ಮತ್ತು ಉರ್ದು ಭಾಷಾ ಅಕಾಡೆಮಿಗಳು ಭೌಗೋಳಿಕ ಮತ್ತು ಸಾಮಾಜಿಕ ಪರಿಮಿತಿಗಳನ್ನು ಮೀರಿ ಸರ್ವರನ್ನೂ ತಲುಪುವ ನಿಟ್ಟಿನಲ್ಲಿ ಭಾಷಾಭಿವೃದ್ಧಿ ಕೈಗೊಳ್ಳಲು ಶ್ರಮಿಸುವುದು. ವಿವಿಧ ಅಕಾಡೆಮಿಗಳ ನಡುವೆ ಸಮನ್ವಯ ಸಾಧಿಸಿ ಸಮಗ್ರವಾಗಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸೌಹಾರ್ದ ವೃದ್ಧಿಸುವ ನಿಟ್ಟಿನಲ್ಲಿ ಕ್ರಮ ವಹಿಸುವುದು. ಅಕಾಡೆಮಿಗಳ ಕಾರ್ಯಯೋಜನೆಗಳನ್ನು ಆರ್ಥಿಕವಾಗಿ ಬಲಪಡಿಸಲು ಆಯಾ ಅಕಾಡೆಮಿಗಳ ಕಾರ್ಯವ್ಯಾಪ್ತಿ ಪರಿಗಣಿಸಿ ಅಗತ್ಯಾನುಸಾರವಾಗಿ ಅನುದಾನವನ್ನು ಇಲಾಖೆಯ ವತಿಯಿಂದ ಒದಗಿಸಿಕೊಳ್ಳುವುದು.

ಅಕಾಡೆಮಿಯ ಅಂಗರಚನೆ/ನಿಯಮಾವಳಿ ಮತ್ತು ಹಣಕಾಸಿನ ನಿರ್ವಹಣೆಯಲ್ಲಿ ನಿಯಮಾನುಸಾರ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನ ಮಾಡುವ ಸ್ವಾಯತ್ತತೆಯನ್ನು ಅಕಾಡೆಮಿಗಳಿಗೆ ಒದಗಿಸುವುದು. ಅಕಾಡೆಮಿಯ ಅಧ್ಯಕ್ಷ/ಸದಸ್ಯರಾಗುವವರು ಉದ್ಯೋಗಿಯಾಗಿರ ಬಾರದು ಎಂಬ ನಿಯಮವನ್ನು ಕೈಬಿಡಬಹುದು ಮತ್ತು ಅಕಾಡೆಮಿಯ ಪದಾಧಿಕಾರಿಗಳನ್ನು ಸರ್ಕಾರವು ನೇಮಿಸುವಾಗ ವೃತ್ತಿನಿರತರಿಗೆ ಮೊದಲ ಆದ್ಯತೆ ನೀಡಬೇಕಾದ ನಿಯಮವನ್ನು ಪಾಲಿಸಲು ಶಿಫಾರಸ್ಸು ಮಾಡುತ್ತದೆ. ಅಕಾಡೆಮಿಗಳು ತಂತಮ್ಮ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಯನ್ನು ಅಗತ್ಯಾನುಸಾರ ಕೈಗೊಳ್ಳಬಹುದು. ಅಕಾಡೆಮಿಗಳು ಉತ್ಸವಗಳ ಆಯೋಜನೆಗೆ ಹೊರತಾಗಿ ಕ್ಷೇತ್ರದ ಮೌಲ್ಯವರ್ಧನೆ ಮಾಡುವ ಕಮ್ಮಟ-ಕಾರ್ಯಾಗಾರಗಳು, ತರಬೇತಿ ಶಿಬಿರಗಳು ಮತ್ತು ಕಾರ್ಯಕ್ಷೇತ್ರ ಸಬಲೀಕರಣದ ಕಾರ್ಯಗಳನ್ನು ರೂಪಿಸಿ ಕ್ರಿಯಾಯೋಜನೆ ರೂಪಿಸತಕ್ಕದ್ದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**(6) ಅಕಾಡೆಮಿಗಳ ವಿಭಾಗೀಕರಣ ಮತ್ತು ಹೆಸರು ಬದಲಾವಣೆ:**

ಕರ್ನಾಟಕ ಯಕ್ಷಗಾನ ಮತ್ತು ಬಯಲಾಟಗಳು ಪ್ರತ್ಯೇಕ ಪ್ರದೇಶಗಳಲ್ಲಿ ಅತ್ಯಂತ ವ್ಯಾಪಕವಾಗಿ ಮತ್ತು ಜನಪ್ರಿಯ ಕಲಾಪ್ರಕಾರಗಳಾಗಿ ರೂಪುಗೊಂಡಿದ್ದು ಇವುಗಳನ್ನು ಪ್ರಸಕ್ತ ಕರ್ನಾಟಕ ಯಕ್ಷಗಾನ-ಬಯಲಾಟ ಅಕಾಡೆಮಿಯ ಅಡಿಯಲ್ಲಿ ನಿರ್ವಹಿಸಲಾಗುತ್ತಿದೆ. ಅದರಂತೆ ಕರ್ನಾಟಕ ಯಕ್ಷಗಾನ ಪ್ರಕಾರಗಳ ಸಂಬಂಧಿ ಚಟುವಟಿಕೆಗಳನ್ನು ನಿರ್ವಹಿಸುವ ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತದಂತಹ ಬಯಲಾಟ ಪ್ರಕಾರಗಳನ್ನು ಪೋಷಿಸುವ ಸಲುವಾಗಿ ಈಗಿನ ಅಕಾಡೆಮಿಯಿಂದ ಬೇರ್ಪಡಿಸಿ ಕರ್ನಾಟಕ ಬಯಲಾಟ ಅಕಾಡೆಮಿಯನ್ನು ರಚಿಸುವುದು.

ಕರ್ನಾಟಕ ಸಂಗೀತ – ನೃತ್ಯ ಅಕಾಡೆಮಿಗಳು ಅತ್ಯಂತ ವಿಸ್ತಾರವಾದ ಕಾರ್ಯಕ್ಷೇತ್ರವನ್ನು ನಿರ್ವಹಿಸಬೇಕಾಗಿದ್ದು, ಕರ್ನಾಟಕದ ನೃತ್ಯ ಶೈಲಿಗಳಲ್ಲಿ ಹಲವು ನೃತ್ಯ ಪ್ರಕಾರಗಳು ಇಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದು, ನೃತ್ಯ ಪ್ರಕಾರಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಕರ್ನಾಟಕ ಸಂಗೀತ-ನೃತ್ಯ ಅಕಾಡೆಮಿಯಿಂದ ನೃತ್ಯ ಅಕಾಡೆಮಿಯನ್ನು ಬೇರ್ಪಡಿಸಿ ಕರ್ನಾಟಕ ನೃತ್ಯ ಅಕಾಡೆಮಿಯನ್ನು ರಚಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**(7) ಸಾಂಸ್ಕೃತಿಕ ಸಂಸ್ಥೆಗಳಿಗೆ ಧನಸಹಾಯ ಮಂಜೂರಾತಿ – ತಜ್ಞರ ಸಮಿತಿ ರಚನೆ**

ರಾಜ್ಯಾದ್ಯಂತ ಮತ್ತು ಹೊರನಾಡಿನಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಭ್ಯುದಯಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಸಾಂಸ್ಕೃತಿಕ ಸಂಘಟನೆಗಳನ್ನು ಬಲಪಡಿಸಲು ಅರ್ಜಿಗಳನ್ನು ಆಹ್ವಾನಿಸಿ, ಕಾಲಬದ್ಧವಾಗಿ ಅವುಗಳನ್ನು ಪರಿಶೀಲಿಸಿ ಅರ್ಹತೆಯ ಆಧಾರದಲ್ಲಿ ಅನುದಾನ ಮಂಜೂರಾತಿ ಸಮಿತಿಯ ಮೂಲಕ ಮಾತ್ರ ಅನುದಾನ ಮಂಜೂರು ಮಾಡಬೇಕು. ಪ್ರಾತಿನಿಧಿಕ ತಜ್ಞರ ಸಮಿತಿಯು ಈ ಅರ್ಜಿಗಳನ್ನು ಸವಿವರ ಪರಿಶೀಲನೆಗೊಳಪಡಿಸಿ ತನ್ನ ಶಿಫಾರಸ್ಸನ್ನು ಅನುದಾನ ಮಂಜೂರಾತಿ ಸಮಿತಿಗೆ ಶಿಫಾರಸ್ಸು ಮಾಡಬೇಕು. ಈ ಅಂಶಗಳನ್ನು ಸಹ ಪರಿಗಣಿಸಿ ಸಮಿತಿಯು ಅನುದಾನ ಮಂಜೂರು ಮಾಡಬೇಕು. ಸಾಂಸ್ಕೃತಿಕ ಸ್ವರೂಪವಿಲ್ಲದ ಸಂಸ್ಥೆಗಳಿಗೆ ಇಲಾಖೆಯಿಂದ ಅನುದಾನ ನೀಡಬಾರದು. ಸಾಮಾನ್ಯ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಗಳಡಿಯಲ್ಲಿ ಆಯಾ ಜನವರ್ಗದ ನಿಯಮಗಳಿಗನುಸಾರವಾಗಿ ಕ್ರಮ ವಹಿಸಬೇಕು. ಈ ನಿಟ್ಟಿನಲ್ಲಿ ಈಗಾಗಲೇ ಸರ್ಕಾರವು ಹೊರಡಿಸಿರುವ ಅಧಿನಿಯಮಗಳ ಪಾಲನೆ ಮಾಡಲು ಆದೇಶಿಸಿದೆ.

12

ಅನುದಾನ ಪಡೆಯುವ ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯಾನುಷ್ಠಾನದ ಅಧ್ಯಯನ ಕೈಗೊಳ್ಳಲು ಸಾಮಾಜಿಕ ತಪಾಸಣೆ ಕೈಗೊಳ್ಳಬೇಕು. ಮಂಜೂರಾದ ಅನುದಾನ ಮತ್ತು ಫಲಾನುಭವಿ ಸಂಸ್ಥೆಗಳ ವಿವರಗಳು ಅತ್ಯಂತ ಪಾರದರ್ಶಕವಾಗಿ ಇಲಾಖೆಯ ವೆಬ್‌ಸೈಟ್ ಮತ್ತು ಸೂಚನಾ ಫಲಕಗಳಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(8) ಸ್ಕಾಲರ್ ಶಿಪ್ ಮತ್ತು ಫೆಲೋಶಿಪ್ ನೀಡಿಕೆ

ಕಲೆಯ ವಿವಿಧ ಕ್ಷೇತ್ರಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವ ಯೋಜನೆ ಕೈಗೊಂಡು ವಿದ್ಯಾಭ್ಯಾಸಕ್ಕೆ ಆರ್ಥಿಕ ತೊಡಕುಂಟಾಗದಂತೆ ಕ್ರಮ ವಹಿಸುವುದು ಮತ್ತು ಪ್ರತಿ ವಿಷಯ ಕ್ಷೇತ್ರದ ವಿವಿಧ ಆಯಾಮಗಳ ಅಧ್ಯಯನ ಮತ್ತು ಸಂಶೋಧನೆಗೆ ಹೆಚ್ಚಿನ ಒತ್ತು ಕೊಡುವ ಮೂಲಕ ಸಮಗ್ರ ಅಧ್ಯಯನಕ್ಕೆ ಪೂರಕ ವಾತಾವರಣ ನಿರ್ಮಿಸುವುದು. ಸಾಂಸ್ಕೃತಿಕ ಮತ್ತು ಸಾಹಿತ್ಯ ಅಧ್ಯಯನಗಳಲ್ಲಿ ತೊಡಗುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಸಂಶೋಧನೆಯಲ್ಲಿ ತೊಡಗುವ ತಜ್ಞರಿಗೆ ಫೆಲೋಶಿಪ್ ನೀಡುವ ಯೋಜನೆ ಜಾರಿ ಮಾಡಲು ಅಗತ್ಯ ಯೋಜನೆಗಳನ್ನು ರೂಪಿಸಿ ನಿರಂತರವಾಗಿ ಇಂತಹ ಅಧ್ಯಯನ ಕಾರ್ಯಗಳಿಗೆ ಪೂರಕ ಪ್ರೋತ್ಸಾಹಕ ವಾತಾವರಣವನ್ನು ರೂಪಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(9) ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನೆಗೆ ಒತ್ತು:

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವು ಲಭಿಸಿದ್ದು, ಇದಕ್ಕೆ ಇತರೆ ಕಾನೂನಿನ ತೊಡಕುಗಳು ಸಹ ಪರಿಹಾರವಾಗಿರುತ್ತದೆ. ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಮೈಸೂರು ಭಾರತೀಯ ಭಾಷಾ ಸಂಸ್ಥಾನದಲ್ಲಿ ಸ್ಥಾಪಿಸಿರುವ ಕಾರಣ ಸಂಸ್ಥಾನ ಕಾರ್ಯಾಭಾರದ ಹೊರೆಯಿಂದಾಗಿ ಸಂಪೂರ್ಣ ಕ್ಷಮತೆಯಿಂದ ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನಾ ಕಾರ್ಯ ನಡೆಯುತ್ತಿಲ್ಲ. ಆದ್ದರಿಂದ, ಈ ಬಗ್ಗೆ ಕೇಂದ್ರ ಮಾನವಸಂಪನ್ಮೂಲ ಇಲಾಖೆಯ ಜೊತೆ ಸಮನ್ವಯ ಸಾಧಿಸಿ ಅವರ ಸಹಮತಿಯೊಂದಿಗೆ ಸಮಕಾಲೀನ ವಿವೇಕದೊಂದಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಇತಿಹಾಸದ ಸಂಶೋಧನೆ ಮತ್ತು ಭವಿಷ್ಯದ ನೆಲೆಗಳನ್ನು ರೂಪಿಸುವ ಅಧ್ಯಯನ ಕೇಂದ್ರವಾಗಿ ಶಾಸ್ತ್ರೀಯ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ವತಂತ್ರವಾಗಿ ರಚಿಸುವುದು ಮತ್ತು ಅಭಿವೃದ್ಧಿಪಡಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮತ್ತು ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

(10) ಗಡಿನಾಡು ಪ್ರಾಧಿಕಾರದ ವ್ಯಾಪ್ತಿಗೆ ಹೊರನಾಡು:

ಕರ್ನಾಟಕ ರಾಜ್ಯದಲ್ಲಿ ಪಕ್ಕದ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿರುವ 52 ತಾಲ್ಲೂಕುಗಳನ್ನು ಗುರುತಿಸಲಾಗಿದ್ದು, ಪರ ರಾಜ್ಯಗಳಲ್ಲಿಯೂ ಕನ್ನಡ ಭಾಷಿಕರಿರುವ ಸ್ಥಳಗಳಿವೆ. ಈ ಸ್ಥಳಗಳಲ್ಲಿ ಕನ್ನಡ ಪರ ವಾತಾವರಣ ಕಾಪಾಡುವ ನಿಟ್ಟಿನಲ್ಲಿ ಗಡಿನಾಡು ಪ್ರಾಧಿಕಾರವು ಹೊರನಾಡು ಪ್ರದೇಶಗಳಲ್ಲಿ ಸಹ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಹೊರನಾಡಿನ ಮತ್ತು ಗಡಿನಾಡಿನ ಶಾಲೆಗಳಲ್ಲಿ ಕನ್ನಡಿಗರ ಬಾಹುಳ್ಯದ ಪ್ರದೇಶಗಳಲ್ಲಿ ಕನ್ನಡ ಶಿಕ್ಷಣಕ್ಕೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲು ಪ್ರದೇಶಕ್ಕೆ ಸಮೀಪವಿರುವ ಜಿಲ್ಲೆಗಳಿಗೆ ಸಂಲಗ್ನಗೊಳಿಸಿ ಅಲ್ಲಿಯ ಕನ್ನಡಿಗರ ಆಗುಹೋಗುಗಳ ಮತ್ತು ಅಪೇಕ್ಷೆ ನಿರೀಕ್ಷೆಗಳಿಗೆ ಅನುಕೂಲವಾಗುವಂತಹ ವಾತಾವರಣವನ್ನು ಸೃಷ್ಟಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಗಡಿನಾಡು ಮತ್ತು ಹೊರನಾಡು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಕನ್ನಡಿಗರ ಸಾಂಸ್ಕೃತಿಕ ಅಗತ್ಯಗಳನ್ನು ಒದಗಿಸಿಕೊಡಲು ಇಲಾಖೆ ವ್ಯವಸ್ಥೆ ರೂಪಿಸುವುದು. ಗಡಿ ಪ್ರದೇಶದಲ್ಲಿ ಮತ್ತು ಕನ್ನಡಿಗರ ಸಾಂಸ್ಕೃತಿಕ ಪ್ರತಿಭಾ ಪ್ರದರ್ಶನಕ್ಕೆ ಅಗತ್ಯ ಕ್ರಮ ವಹಿಸುವುದು. ಗಡಿ ರಾಜ್ಯಗಳ ಸಂಕೀರ್ಣ

ಸ್ಥಿತಿಯಲ್ಲಿ ದ್ವಿಭಾಷಿಕ ಮತ್ತು ಬಹುಭಾಷಿಕ ಭಾಷಾ ಸಾಮರಸ್ಯವನ್ನು ನೆಲೆಗೊಳಿಸಬೇಕು. ಹೊರನಾಡಿನಲ್ಲಿ ಕನ್ನಡ ವ್ಯಾಸಂಗ ಮಾಡುವವರಿಗೆ ವಿಶೇಷ ಪ್ರೋತ್ಸಾಹ ಕ್ರಮಗಳನ್ನು ಕೈಗೊಳ್ಳುವುದು, ಹೊರನಾಡು ಕನ್ನಡಿಗರಿಗೆ ಒಳನಾಡಿನ ಕನ್ನಡಿಗರೊಂದಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಕನ್ನಡಿಗರ ಬಾಹುಳ್ಯವಿರುವ ಹೊರನಾಡಿನ ಮತ್ತು ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಭವನಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ಮತ್ತು ಅನುದಾನ ನೀಡುವುದು.

**ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮತ್ತು ಕಾರ್ಯದರ್ಶಿ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ**

(11) ಅನ್ವಯಿಕ ಕನ್ನಡ ತಂತ್ರಾಂಶಗಳ ಅಭಿವೃದ್ಧಿ ಮತ್ತು ಆಧುನಿಕ ತಂತ್ರಜ್ಞಾನ ಮಾಧ್ಯಮ ಸದ್ಬಳಕೆ:

ಕನ್ನಡ ಭಾಷೆಯನ್ನು ಆಧುನಿಕ ತಂತ್ರಜ್ಞಾನ ಮಾಧ್ಯಮದಲ್ಲಿ ಮುಖ್ಯ ನೆಲೆಯಲ್ಲಿ ಬೆಳೆಸಲು ಮತ್ತು ದೂರಗಾಮಿ ನೆಲೆಯಲ್ಲಿ ಕ್ರಿಯಾ ಯೋಜನೆಗಳನ್ನು ರೂಪಿಸಲು ಕ್ರಮ ವಹಿಸುವುದು. ಯೂನಿಕೋಡ್ ಶಿಷ್ಟತೆ ಅನುಷ್ಠಾನ ಮತ್ತು ಕನ್ನಡ ಭಾಷೆಯ ಒಟ್ಟಾರೆ ಬೆಳವಣಿಗೆಗೆ ಅಗತ್ಯವಾದ ತಂತ್ರಾಂಶಗಳ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ನಿರ್ಮಿಸಲು ಯೋಜನೆ ರೂಪಿಸಿ ಅನುಷ್ಠಾನ ಮಾಡಲು ಮತ್ತು ನಾಡಿನ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಪರಂಪರೆಗಳ ಸಾಹಿತ್ಯ ಹಾಗೂ ಇತರೆ ಕಲೆಗಳನ್ನು ಆಧುನಿಕ ತಂತ್ರಜ್ಞಾನ ಮಾಧ್ಯಮಗಳ ಮೂಲಕ ಕನ್ನಡ ಭಾಷೆಯಲ್ಲಿ ಸಾರ್ವಜನಿಕರಿಗೆ ತಲುಪಿಸಲು ಅಗತ್ಯ ಕ್ರಮ ವಹಿಸುವುದು.

ಅನ್ವಯಿಕ ತಂತ್ರಾಂಶಗಳ ಅಭಿವೃದ್ಧಿ ಮತ್ತು ಆಧುನಿಕ ತಂತ್ರಜ್ಞಾನ ಮಾಧ್ಯಮ ಸದ್ಬಳಕೆ ಕುರಿತು ಕನ್ನಡದ ಪೂರ್ಣ ಪ್ರಮಾಣದ ಎಲ್ಲಾ ಆಪರೇಟಿಂಗ್ ಸಿಸ್ಟಂಗಳಿಗೆ ಹೊಂದಾಣಿಕೆಯಾಗುವ ತಂತ್ರಜ್ಞಾನ ರೂಪಿಸಲು ಮತ್ತು ಇಲಾಖೆಯ ಮಟ್ಟದಲ್ಲಿ ತಂತ್ರಜ್ಞಾನ ತಂಡವನ್ನು ರಚಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(12) ರಂಗಮಂದಿರಗಳ ನಿರ್ಮಾಣ ಮತ್ತು ಏಕರೂಪ ನಿರ್ವಹಣೆ:

ಸರ್ಕಾರದ ಮತ್ತು ಅರೆ ಸರ್ಕಾರಿ ವ್ಯಾಪ್ತಿಯಲ್ಲಿ ಬರುವ ರಂಗಮಂದಿರಗಳ ನಿರ್ವಹಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ತರುವುದು ಮತ್ತು ಈ ಎಲ್ಲ ರಂಗಮಂದಿರಗಳನ್ನು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಾಮಾನ್ಯರಿಗೆ ಎಟುಕುವ ದರಗಳಲ್ಲಿ ಏಕರೂಪ ರಿಯಾಯಿತಿ ಬಾಡಿಗೆ ದರಗಳನ್ನು ನಿಗದಿಪಡಿಸುವುದು. ರಂಗಮಂದಿರಗಳು ದುರ್ಬಳಕೆಯಾಗದಂತೆ ಕಟ್ಟುನಿಟ್ಟಿನ ಬಳಕೆ ನಿಯಮಗಳನ್ನು ಅನುಷ್ಠಾನ ಮಾಡಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(13) ರಂಗಾಯಣಗಳ ರಚನೆ ಮತ್ತು ನಿರ್ವಹಣೆ

ಕರಾವಳಿ ಪ್ರದೇಶ ಮತ್ತು ಬೆಂಗಳೂರು ನಗರ ಪ್ರದೇಶಗಳು ತಮ್ಮದೇ ಆದ ವಿಶೇಷತೆಗಳಿಂದಾಗಿ ವಿಶಿಷ್ಟವಾಗಿ ಹೊರಹೊಮ್ಮಿದ್ದು, ಇಲ್ಲಿನ ರಂಗವೈಶಿಷ್ಟ್ಯ ಮತ್ತು ಸಾಧ್ಯತೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕರಾವಳಿ ಮತ್ತು ಬೆಂಗಳೂರು ರಂಗಾಯಣಗಳನ್ನು ಹೊಸದಾಗಿ ಸ್ಥಾಪಿಸಲು ಆದೇಶಿಸಿದೆ.

**ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.**

(14) ಕಾಲೇಜು ರಂಗೋತ್ಸವ:

ಪಠ್ಯೇತರ ಚಟುವಟಿಕೆಯಾಗಿ ನಾಡಿನ ಸಾಂಸ್ಕೃತಿಕ ವಲಯದಲ್ಲಿ ಪ್ರಮುಖವಾಗಿ ಗುರುತಿಸಲ್ಪಡುವಂತೆ ಯುವಜನತೆ ಸಕ್ರಿಯವಾಗಿ ತೊಡಗಿರುವ ಕಾಲೇಜು ರಂಗಭೂಮಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಜಿಲ್ಲೆ, ವಿಭಾಗಗಳು ಮತ್ತು ರಾಜ್ಯ ಹೀಗೆ ವಿವಿಧ ಹಂತಗಳಲ್ಲಿ ವಿಕೇಂದ್ರೀಕರಿಸಿ ನಾಟಕೋತ್ಸವ ಮತ್ತು ಸ್ಪರ್ಧೆಗಳನ್ನು ನಿಯತಕಾಲಿಕವಾಗಿ ಆಯೋಜಿಸತಕ್ಕದ್ದು.

T2

(15) ಉತ್ಸವಗಳಲ್ಲಿ ಸ್ಥಳೀಯರಿಗೆ ಆದ್ಯತೆ

ಸರ್ಕಾರವು ನಾಡಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಬಿಂಬಿಸುವ ಉತ್ಸವಗಳನ್ನು ಆಚರಿಸುತ್ತ ಬಂದಿದ್ದು, ಈ ನಿಟ್ಟಿನಲ್ಲಿ ಉತ್ಸವಗಳಲ್ಲಿ ಸಂಭಾವನೆ ಮತ್ತು ಸಂಖ್ಯೆ ದೃಷ್ಟಿಯಿಂದ ಪ್ರದರ್ಶನ ನೀಡುವ ಕಲಾವಿದರಲ್ಲಿ ಶೇಕಡಾ 75ರಷ್ಟು ಸ್ಥಳೀಯ ಅಂದರೆ ರಾಜ್ಯದ ಕಲಾವಿದರು ಮತ್ತು ಅವಶ್ಯವಿದ್ದಲ್ಲಿ ಶೇಕಡಾ 25ರ ಮಿತಿಯಲ್ಲಿ ಕಲಾವಿದರನ್ನು ತೊಡಗಿಸುವ ನಿಯಮವನ್ನು ರಚಿಸಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(16) ಜನಪದ ರೆಪರ್ಟರಿ ಸ್ಥಾಪನೆ

ನಾಡಿನ ಮೌಖಿಕ ಪರಂಪರೆಯ ಜನಪದ ಕಲಾವಿದರು ಅವಕಾಶ ಮತ್ತು ಸಂಭಾವನೆಯ ವಿಷಯಗಳಲ್ಲಿ ಬಹಳ ಕಾಲದಿಂದ ತಮ್ಮ ಅಕ್ಷರ ತಿಳಿವಳಿಕೆಯ ಕೊರತೆಯಿಂದ ಅನ್ಯಾಯಕ್ಕೊಳಗಾಗಿ ಅಗತ್ಯ ಗೌರವ ಸ್ಥಾನಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ನಾಡಿನ ಸಾಂಸ್ಕೃತಿಕ ಮಹತ್ವದ ಜನಪದ ಪರಂಪರೆಯನ್ನು ಕಾಪಿಟ್ಟು ಕಲಾವಿದರಿಗೆ ಸೂಕ್ತ ಆರ್ಥಿಕ ಭದ್ರತೆ ಮತ್ತು ಗೌರವ ಒದಗಿಸಿಕೊಡುವ ಸಲುವಾಗಿ ಗೌರವ ಪೂರ್ಣ ಸಂಭಾವನೆಯ ಮಧ್ಯವರ್ತಿಗಳ ಹಾವಳಿ ಇಲ್ಲದೆ ಕಲಾವಿದರಿಗೇ ನೇರವಾಗಿ ತಲುಪಿಸುವಲ್ಲಿ ಕ್ರಮಗಳನ್ನು ವಹಿಸುವುದು. ಜನಪದರಲ್ಲಿ ಹಿಂದಿನಿಂದಲೂ ಅತ್ಯಂತ ವಿಶಿಷ್ಟ ಕ್ರೀಡಾ ಪ್ರಕಾರಗಳಾಗಿದ್ದ, ಕತ್ತಿವರಸೆ, ದೊಣ್ಣೆವರಸೆ, ಮಲ್ಲಕಂಭ, ಮಲ್ಲಯುದ್ಧ ಮುಂತಾದ ಗ್ರಾಮೀಣ ಕ್ರೀಡೆಗಳು ಮತ್ತು ಪ್ರಾಚೀನ ಸಮರ ಕಲಾ ಪ್ರಕಾರಗಳು ಕ್ರೀಡಾ ಪ್ರಕಾರ, ಜನಪದ ಪ್ರಕಾರಗಳೆರಡರಲ್ಲಿಯೂ ಪರಿಗಣಿಸಲ್ಪಡದೇ ಕಡೆಗಣಿಸಲ್ಪಟ್ಟಿವೆ. ಆದ್ದರಿಂದ ಇಂತಹ ಪ್ರಾಚೀನ ಜನಪದೀಯ ಪ್ರಕಾರಗಳೆರಡರಲ್ಲಿಯೂ ಪರಿಗಣಿಸಲ್ಪಡದೇ ಕಡೆಗಣಿಸಲ್ಪಟ್ಟಿವೆ. ಆದ್ದರಿಂದ, ಇಂತಹ ಪ್ರಾಚೀನ ಜನಪದೀಯ ಕಲೆಗಳನ್ನು ಜನಪದ ಪ್ರಕಾರಗಳಲ್ಲಿ ಪರಿಗಣಿಸಿ ಅಗತ್ಯ ತರಬೇತಿ ಮತ್ತು ಪ್ರೋತ್ಸಾಹ ನೀಡುವುದು.

ಜನಪದ ಕಲಾಪ್ರಕಾರಗಳಲ್ಲಿ ಕಲಾವಿದರಿಗೆ ತರಬೇತಿ ಕೊಡಲು ಜನಪದ ರೆಪರ್ಟರಿಗಳನ್ನು ಸ್ಥಾಪಿಸುವುದು ಮತ್ತು ತನ್ಮೂಲಕ ಕುಲಕಸುಬಿನಾಚೆಗೂ ಈ ಪ್ರದರ್ಶನ ಕಲೆಗಳನ್ನು ಕಲಾಪ್ರಕಾರವಾಗಿ ಆಸಕ್ತರಿಗೆ ಈ ಪ್ರದರ್ಶನ ಕಲಾ ಪ್ರಕಾರಗಳಲ್ಲಿ ತರಬೇತಿ ನೀಡುವುದು. ತನ್ಮೂಲಕ ಕಲೆಯ ವಿಸ್ತಾರ ಮತ್ತು ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕ್ರಮ ವಹಿಸಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(17) ಪ್ರವಾಸಿ ಕೇಂದ್ರಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ:

ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗರು ಆಗಮಿಸುವ ಪ್ರಮುಖ ಕೇಂದ್ರಗಳಲ್ಲಿ ನಾಡಿನ ಸಾಂಸ್ಕೃತಿಕ ಸಿರಿಯನ್ನು ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಪ್ರವಾಸಿಗರು ಮತ್ತು ಸಾರ್ವಜನಿಕರಿಗೆ ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತ ಕಲೆಯ ಅನಾವರಣ ಮತ್ತು ಕಲಾವಿದರಿಗೆ ವೇದಿಕೆ ಮತ್ತು ಆರ್ಥಿಕ ಅವಕಾಶಗಳನ್ನು ಒದಗಿಸುವ ಯೋಜನೆಗಳನ್ನು ರೂಪಿಸಲು ಆದೇಸಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(18) ಕಲಾಕೃತಿಗಳ ಮಾರಾಟ ಕೇಂದ್ರಗಳ ಸ್ಥಾಪನೆ ಮತ್ತು ಕಲಾಕೃತಿಗಳ ಪ್ರದರ್ಶನ:

ಕರ್ನಾಟಕ ರಾಜ್ಯದ ವಿಶಿಷ್ಟ ಕಲಾಪ್ರಕಾರಗಳಲ್ಲಿ ಸಾಕಷ್ಟು ಸಂಖ್ಯೆಯ ಕಲಾವಿದರು ಸಕ್ರಿಯರಾಗಿ ತೊಡಗಿಸಿಕೊಂಡು ಚಿತ್ರಕಲೆಯ ಪರಂಪರೆ ಪ್ರಯೋಗಗಳಿಗೆ ಕಾರಣರಾಗಿದ್ದಾರೆ. ಇಂತಹ ಕಲಾಕೃತಿಗಳ ಮಾರಾಟ ಮತ್ತು ವಿತರಣೆ ಜಾಲವನ್ನು ಸುಸ್ಥಿರಗೊಳಿಸುವ ಸಲುವಾಗಿ ಜಿಲ್ಲಾ ಪುಸ್ತಕ ಮಾರಾಟ ಮಳಿಗೆಗಳಂತೆ ಪ್ರತಿ ಜಿಲ್ಲೆಯಲ್ಲಿಯೂ ಗ್ಯಾಲರಿಗಳು ಮತ್ತು ಪುಸ್ತಕಗಳು, ಚಿತ್ರ ಮತ್ತು ಶಿಲ್ಪ ಕಲಾಕೃತಿಗಳು ಮತ್ತು ಕುಶಲಕರ್ಮಿಗಳು ತಯಾರಿಸುವ ವಿವಿಧ ಪ್ರಕಾರಗಳ ಕಲಾ ಸಾಮಗ್ರಿಗಳ ಮಾರಾಟ ಕೇಂದ್ರ ಒದಗಿಸುವ ಮೂಲಕ ಕಲೆಗಳ ಪ್ರಸಾರ ಮತ್ತು ಪ್ರಚಾರಕ್ಕೆ ನೆರವು ಹಾಗೂ ಮಾರುಕಟ್ಟೆ ಒದಗಿಸಿದಂತಾಗುತ್ತದೆ.

15

25

ಇಲಾಖೆಯು ಆಯೋಜಿಸುವ ಚಿತ್ರಕಲಾ ಶಿಬಿರಗಳಲ್ಲಿ ಸಿದ್ಧವಾಗುವ ಚಿತ್ರ ಮತ್ತು ಶಿಲ್ಪ ಕಲಾಕೃತಿಗಳನ್ನು ಶಾಲಾ-ಕಾಲೇಜುಗಳ ಆವರಣದಲ್ಲಿ ಶಾಶ್ವತ ಪ್ರದರ್ಶನಕ್ಕೆ ಒದಗಿಸಿಕೊಡುವುದು, ತನ್ಮೂಲಕ ವಿದ್ಯಾರ್ಥಿಗಳಲ್ಲಿ ಕಲಾಭಿರುಚಿಯ ವರ್ಧನೆಗೆ ನೆರವಾಗುವುದು. ಸರ್ಕಾರಿ ಕಚೇರಿಗಳಲ್ಲಿ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ಒದಗಿಸಿಕೊಡುವ ನಿಟ್ಟಿನಲ್ಲಿ ಕಚೇರಿಯ ಕಲಾತ್ಮಕ ಸೌಂದರ್ಯ ಮತ್ತು ಪ್ರಾದೇಶಿಕ ಸೊಗಡನ್ನು ಬಿಂಬಿಸುವ ಚಿತ್ರ ಮತ್ತು ಶಿಲ್ಪ ಕಲಾಕೃತಿಗಳನ್ನು ಖರೀದಿಸಲು ಮತ್ತು ಅವುಗಳ ನಿರ್ವಹಣೆಗೆ ಕ್ರಮ ವಹಿಸಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(19) ಕರ್ನಾಟಕ ಕಲಾಗ್ರಾಮ:

ಕರ್ನಾಟಕ ಏಕೀಕರಣದ ಸಂಭ್ರಮದ ಕುರುಹಾಗಿ ಕರ್ನಾಟಕ ರಾಜ್ಯದ ವಿವಿಧ ಕಲಾಪ್ರಕಾರಗಳನ್ನು ತರಬೇತಿ ನೀಡುವ, ಪ್ರದರ್ಶನಕ್ಕೆ ವೇದಿಕೆ ಒದಗಿಸುವ ಮತ್ತು ಸಾಹಿತಿ ಕಲಾವಿದರ ಸಾಹಿತ್ಯ – ಕಲಾ ಸೃಜನೆಗೆ ನೆಲೆಯಾಗಿ ವಸತಿ ಒದಗಿಸುವ, ವಿವಿಧ ಕಲಾಪ್ರಕಾರಗಳ ತರಬೇತಿಗಳಿಗೆ ನೆಲೆ ಒದಗಿಸುವ ತರಬೇತಿ – ಕಾರ್ಯಾಗಾರ, ಕಮ್ಮಟಗಳಿಗೆ ನೆಲೆ, ಹೀಗೆ ಕರ್ನಾಟಕ ಕಲಾದರ್ಶನದ ಆಧುನಿಕ ವ್ಯವಸ್ಥೆಯುಳ್ಳ "ಕಲಾಗ್ರಾಮ" ಸಮಗ್ರ ಯೋಜನೆ ರೂಪಿಸಲಾಗಿದೆ, ವಿವಿಧ ಹಂತಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯ ಅಡಿಯಲ್ಲಿ ವಸ್ತುಸಂಗ್ರಹಾಲಯಗಳು ಸೇರಿದಂತೆ ಪ್ರತೀ ಜಿಲ್ಲೆಗೆ ಒಂದು ಕಲಾಗ್ರಾಮವನ್ನು ಸ್ಥಾಪಿಸುವ ಉದ್ದೇಶಹೊಂದಲಾಗಿದೆ. ಇದನ್ನು ವಿದ್ಯಾರ್ಥಿ-ಯುವಜನರ ಕಲಿಕೆಯ ಕೇಂದ್ರವಾಗಿ ಮತ್ತು ಪ್ರವಾಸಿಗರಿಗೆ ಸ್ಥಳೀಯ ವೈಶಿಷ್ಟ್ಯ ಮತ್ತು ವೈವಿಧ್ಯಗಳನ್ನು ತೋರಿಸಿಕೊಡುವ ಜಿಲ್ಲಾ ಕಲಾಗ್ರಾಮಗಳನ್ನು ಆದ್ಯತೆಯ ಮೇರೆಗೆ ಸ್ಥಾಪಿಸುವುದು.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(20). ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ

ಇಡಿಯ ರಾಷ್ಟ್ರದಲ್ಲಿ ಮಧ್ಯಪ್ರದೇಶದ ಅಮರಕಂಟಕದಲ್ಲಿ ಇರುವ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದಂತೆ, ಕರ್ನಾಟಕದ ವಿವಿಧ ಭಾಗಗಳಲ್ಲಿ ಬುಡಕಟ್ಟು ಜನಾಂಗಗಳು ಮತ್ತು ಸಂಸ್ಕೃತಿಗಳು ವಿಸ್ತಾರವಾಗಿದ್ದು ಅವುಗಳ ಅಧ್ಯಯನ ಮತ್ತು ಸಂಶೋಧನೆಗೆ ಒಂದು ಪ್ರತ್ಯೇಕ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪಿಸಲು ಆದೇಶಿಸಿದೆ.

ಕ್ರಮ: ಉನ್ನತ ಶಿಕ್ಷಣ ಇಲಾಖೆ

(21) ಸೂಫಿ ಸಂಸ್ಕೃತಿ ಮತ್ತು ತತ್ವಪದ ಅಧ್ಯಯನ ಕೇಂದ್ರ ಸ್ಥಾಪನೆ

ಜೀವನ ದರ್ಶನಗಳನ್ನು ಕಟ್ಟುಪದಗಳಾಗಿ, ಹಾಡುಗಳಾಗಿ ರೂಪಿಸುವ ಮೂಲಕ ಸಮಾಜದಲ್ಲಿ ಸಾಮರಸ್ಯ ಮತ್ತು ಸೌಹಾರ್ದತೆಯನ್ನು ಸಾರುವ ಸಾರ್ವಕಾಲಿಕ ಪರಂಪರೆಯಾಗಿ ತತ್ವಪದಕಾರರು ಮತ್ತು ಸೂಫಿಗಳ ಬದುಕು ಮತ್ತು ಸಂದೇಶಗಳನ್ನು ಅಧ್ಯಯನ ಮಾಡಿ ಸಂದೇಶಗಳನ್ನು ಒಟ್ಟುಗೂಡಿಸಿ, ಅವುಗಳ ಸಂರಕ್ಷಣೆ ಮತ್ತು ಪ್ರಸಾರ ಹಾಗೂ ಪ್ರಚಾರಕ್ಕೆ ಅಗತ್ಯ ವ್ಯವಸ್ಥೆಗಳನ್ನು ರೂಪಿಸಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(22) ಯುವಜನ ಸಂಸ್ಕೃತಿ ಶಿಬಿರ :

ಜಾಗತೀಕರಣದ ಫಲವಾಗಿ ವಿಭಿನ್ನ ಸಂಸ್ಕೃತಿ ಮತ್ತು ಭಾಷೆಗಳ ನಡುವೆ ನಾಡಿನ ಯುವಜನರಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಸ್ಮಿತೆಯ ಬಗ್ಗೆ ಜಾಗೃತಿ ಮತ್ತು ಅಭಿಮಾನ ಮೂಡಿಸುವ ನಿಟ್ಟಿನಲ್ಲಿ ನಿರಂತರ ಚಟುವಟಿಕೆಗಳನ್ನು ಕೈಗೊಳ್ಳುವ ಹಾಗೂ ಸಂಸ್ಕೃತಿ ಶಿಬಿರಗಳ ಮೂಲಕ ಸಾಮಾಜಿಕ-ಸಾಂಸ್ಕೃತಿಕ ವಾತಾವರಣವನ್ನು ಕಾಯ್ದುಕೊಳ್ಳುವ ಬಗ್ಗೆ ಕ್ರಮ ವಹಿಸಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

16

(23) ತುಳು ಭಾಷೆಗೆ ಸಂವಿಧಾನದ ಎಂಟನೆಯ ಪರಿಚ್ಛೇಧದಲ್ಲಿ ಸಾಂವಿಧಾನಿಕ ಮಾನ್ಯತೆ ಪಡೆಯಲು ಪ್ರಯತ್ನ

ತುಳು ಭಾಷೆಗೆ ಸಂವಿಧಾನದ ಎಂಟನೆಯ ಪರಿಚ್ಛೇಧದಲ್ಲಿ ಸೇರ್ಪಡೆ ಮಾಡಲು ಬಹಳ ಕಾಲದಿಂದಲೂ ಬೇಡಿಕೆ ಇದ್ದು, ಅದು ಈಡೇರಬೇಕಾಗಿದೆ. ಈ ದಿಕ್ಕಿನಲ್ಲಿ ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(24) ವಿವಿಧ ಟ್ರಸ್ಟ್/ ಪ್ರತಿಷ್ಠಾನಗಳ ಅವಧಿ ನಿಗದಿ:

ಸರ್ಕಾರವು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳ ಹಿರಿಯರ ಹೆಸರಿನಲ್ಲಿ ವಿವಿಧ ಟ್ರಸ್ಟ್ ಮತ್ತು ಪ್ರತಿಷ್ಠಾನಗಳನ್ನು ರಚಿಸಲಾಗಿದೆ. ಈ ಸಂಸ್ಥೆಗಳು ನಿರಂತರವಾಗಿ ವಿನೂತನ ಯೋಜನೆಗಳೊಂದಿಗೆ ಉದ್ದೇಶಿತ ಕಾರ್ಯಸಾಧನೆಗಾಗಿ ಕಾಲಬದ್ಧವಾಗಿ ಟ್ರಸ್ಟ್ ಮತ್ತು ಪ್ರತಿಷ್ಠಾನಗಳಿಗೆ ಸದಸ್ಯರನ್ನು ನೇಮಿಸುವುದು.

ವಿವಿಧ ಟ್ರಸ್ಟ್ ಮತ್ತು ಪ್ರತಿಷ್ಠಾನಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಯನ್ನು ಕಾಲಾವಧಿ ನಿಗದಿಪಡಿಸಿ ಮಾಡಲಾಗುತ್ತಿದ್ದರೂ ಸರ್ಕಾರದ ಅಪೇಕ್ಷೆ ಇರುವವರೆಗೂ ಅವರು ತಮ್ಮ ಪದಾವಧಿಯಲ್ಲಿ ಮುಂದುವರೆಯಲು ಅಗತ್ಯ ವ್ಯವಸ್ಥೆಗಳನ್ನು ರೂಪಿಸಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(25) ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪನೆ

ಕರ್ನಾಟಕದಲ್ಲಿ ವಿಸ್ತಾರವಾಗಿ ಬೆಳೆದ ಪ್ರಾಕೃತ ಮತ್ತು ಪಾಲಿ ಭಾಷೆಗಳಲ್ಲಿ ಜೈನ ಮತ್ತು ಬೌದ್ಧ ಧರ್ಮಗ್ರಂಥಗಳು ಮತ್ತು ಶಾಸನಗಳು ಲಭಿಸಿವೆ. ಈ ಬಗ್ಗೆ ನಿರಂತರವಾಗಿ ಸಂಬಂಧಿತ ವಿಶ್ವವಿದ್ಯಾಲಯಗಳ ಮೂಲಕ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಅನುವಾಗುವಂತೆ ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪಿಸಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮತ್ತು ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.

(26) ಆರ್ಥಿಕ ಸಂಕಷ್ಟದಲ್ಲಿರುವ ಸಾಂಸ್ಕೃತಿಕ ವ್ಯಕ್ತಿಗಳಿಗೆ ಸಹಾಯ ಯೋಜನೆ

ರಂಗಭೂಮಿ, ಸಾಹಿತ್ಯ, ಜನಪದ, ಸಂಗೀತ, ಚಿತ್ರಕಲೆ, ಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಜೀವನೋಪಾಯಕ್ಕಾಗಿ ಶ್ರಮಿಸುತ್ತ ಬಂದಿರುವ ಕಲಾವಿದರು ತಮ್ಮ ಜೀವನ ಸಂಧ್ಯಾ ಕಾಲದಲ್ಲಿ ಆಸರೆ ಇಲ್ಲದೆ ಕಷ್ಟಕರ ಜೀವನ ನಡೆಸುವ ಪರಿಸ್ಥಿತಿ ಇದೆ. ಇಂತಹವರ ನೆರವಿಗಾಗಿ 'ಸಾಂಸ್ಕೃತಿಕ ಆಪತ್ ನಿಧಿ' ಸ್ಥಾಪಿಸಿ ನೆರವಾಗುವ ಯೋಜನೆ ರೂಪಿಸಿ ಅನುಷ್ಠಾನ ಮಾಡಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

(27) ಸಾಮಾಜಿಕ ತಪಾಸಣೆ :

ಸಮಾಜದ ಸಂಪನ್ಮೂಲಗಳನ್ನು ಬಳಸಿ ಕಾರ್ಯ ನಿರ್ವಹಿಸುವ ಹಲವು ಸಂಸ್ಥೆಗಳು ಅನುದಾನ ಬಳಕೆಯ ಬಗ್ಗೆ ಹಣಕಾಸು ತಪಾಸಣೆಗೆ ಒಳಪಡುತ್ತವೆ. ಈ ತಪಾಸಣೆಗಳು ಹಣಕಾಸು ಆಯಾಮದಲ್ಲಿ ಗುರಿ-ಸಾಧನೆಯನ್ನು ಮಾತ್ರ ಪರಿಗಣಿಸುತ್ತವೆ. ಹಾಗೆಯೇ ಈ ಹಣಬಳಕೆಯ ಸಾಮಾಜಿಕ ಪರಿಣಾಮಗಳನ್ನು ಅಧ್ಯಯನ ಮಾಡುವ ಅಗತ್ಯವಿರುತ್ತದೆ. ಸರ್ಕಾರದ ವಿವಿಧ ಯೋಜನೆಗಳು ಮತ್ತು ವಿವಿಧ ಸಂಸ್ಥೆಗಳಿಗೆ ಮಂಜೂರಾದ ಅನುದಾನಗಳು ಸದ್ಬಳಕೆ ಆಗಿವೆಯೇ ಇಲ್ಲವೇ ಎಂಬ ಬಗ್ಗೆ ಕಾಲಕಾಲಕ್ಕೆ ಸಾಮಾಜಿಕ ತಪಾಸಣೆ ಕೈಗೊಳ್ಳಬೇಕಾಗಿರುವುದು ಅವಶ್ಯಕ. ಇದರಿಂದ ಪುನರಾವರ್ತಿ ಯೋಜನೆಗಳು, ಅನುಪಯುಕ್ತ ವೆಚ್ಚಗಳನ್ನು ಸದುಪಯೋಗವಾಗುವ ನಿಟ್ಟಿನಲ್ಲಿ ಪುನರ್ ರಚಿಸಬಹುದು. ಹಾಗಾಗಿ ಯೋಜನೆಗಳ ಸಾಮಾಜಿಕ ತಪಾಸಣೆ ಕೈಗೊಳ್ಳಲು ಆದೇಶಿಸಿದೆ.

ಕ್ರಮ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

9) ಸಾಂಸ್ಕೃತಿಕ ನೀತಿಯ ಅನುಷ್ಠಾನಕ್ಕೆ 2017-18ನೇ ಕ್ರಿಯಾ ಯೋಜನೆಯ ಲೆಕ್ಕಶೀರ್ಷಿಕೆ 2205-00-102-4-01-103 ಅಡಿಯಲ್ಲಿ ರೂ.1.00 ಕೋಟಿಗಳನ್ನು ಸಾಂಸ್ಕೃತಿಕ ನೀತಿ ಅನುಷ್ಠಾನಕ್ಕಾಗಿ ಕಾಯ್ದಿರಿಸಿದ್ದು, ಉಳಿಕೆ ಹಣವನ್ನು ಮತ್ತು ಸಾಂಸ್ಕೃತಿಕ ನೀತಿ ಸಂಬಂಧಿಸಿದ ಪ್ರತಿಯೊಂದು ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ ಪ್ರತ್ಯೇಕವಾದ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನ ಮಂಜೂರು ಮಾಡಲು ಸೂಕ್ತ ಸಮರ್ಥನೆ ಹಾಗೂ ಶಿಫಾರಸ್ಸಿನೊಡನೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಅಗತ್ಯವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಆದೇಶಿಸಿದೆ.

10) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ:ಆಇ 994 ವೆಚ್ಚ-7/2014, ದಿನಾಂಕ:20.01.2015 ಹಾಗೂ ಆಇ 557 ವೆಚ್ಚ-7/2017, ದಿನಾಂಕ:24.07.2017ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Malathi 10/10/17

(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)

ಗೆ:

1) ಮಹಾಲೇಖಪಾಲರು (ಎ&ಇ) ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು., ವಿಧಾನಸೌಧ, ಬೆಂಗಳೂರು.
5) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ.
7) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
9) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಆಯುಕ್ತರು, ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಮೈಸೂರು.
11) ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
12) ಖಜಾನೆ ಅಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13) ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
14) ಕಾರ್ಯದರ್ಶಿ, ಕನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
15) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-7-8), ವಿಧಾನ ಸೌಧ, ಬೆಂಗಳೂರು
16) ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರ ಆಪ್ತಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
17) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

18

ಅನುಬಂಧ 5

ಕರ್ನಾಟಕ ಸರ್ಕಾರ

# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ

ಕರ್ನಾಟಕ ಸರ್ಕಾರ

ಬೆಂಗಳೂರು

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ:25-01-2023 ರಂದು ಪ್ರಾಧಿಕಾರದ ಕಛೇರಿಯಲ್ಲಿ ನಡೆದ ಗಡಿ ಭಾಗದ ಕನ್ನಡಿಗರ ಸಮಸ್ಯೆಗಳ ಸಮಾಲೋಚನಾ ಸಭೆಯಲ್ಲಿ ಮಹಾರಾಷ್ಟ್ರ, ಕೇರಳ, ಗೋವಾ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ತಮಿಳುನಾಡು ರಾಜ್ಯಗಳಂತ ಕೆಲವು ಪ್ರಮುಖ ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದು, ಈ ಸಮಾಲೋಚನಾ ಸಭೆಯಲ್ಲಿ ಮೂಡಿಬಂದ ಅಭಿಪ್ರಾಯ ಮತ್ತು ಸಮಸ್ಯೆಗಳನ್ನು ಕ್ರೋಢೀಕರಿಸಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ:02-02-2023 ರಂದು ಸಲ್ಲಿಸಿದ ವರದಿ.

## "ಹೊರರಾಜ್ಯದ ಗಡಿ ಕನ್ನಡಿಗರ ಸಮಸ್ಯೆಗಳ ಬಗ್ಗೆ – ಒಂದು ವರದಿ"

* ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ ಮಹಾಜನ ವರದಿಯ ಸೌಲಭ್ಯಗಳನ್ನು ಕೇರಳದ ಕಾಸರಗೋಡು ಮತ್ತು ಮಹಾರಾಷ್ಟ್ರ ರಾಜ್ಯದ ಗಡಿ ಕನ್ನಡಿಗರಿಗೆ ಮಾತ್ರ ಇದ್ದು, ಆಂದ್ರಪ್ರದೇಶ, ತೆಲಂಗಾಣ, ಗೋವಾ ಮತ್ತು ತಮಿಳುನಾಡು ರಾಜ್ಯದ ಗಡಿ ಕನ್ನಡಿಗರನ್ನು ಗಡಿನಾಡ ಕನ್ನಡಿಗರೆಂದು ರಾಜ್ಯಪತ್ರ (ಗೆಜೆಟ್) ದಲ್ಲಿ ಸೇರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ.5 ರಷ್ಟು ಮೀಸಲಾತಿ ಸೌಲಭ್ಯಗಳನ್ನು ವಿಸ್ತರಿಸಬೇಕಾಗಿದೆ.

* ಆರು ಗಡಿ ರಾಜ್ಯಗಳಲ್ಲಿ ಕನ್ನಡ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ತಲಾ ಕನಿಷ್ಟ ರೂ.2-00 ಕೋಟಿಗಳ ಅನುದಾನವನ್ನು ಒದಗಿಸಿ ಕನ್ನಡ ಸಾಂಸ್ಕೃತಿಕ ಭವನಗಳ ನಿರ್ಮಾಣ ಮಾಡಿದರೆ ಭಾಷಾ ಅಲ್ಪಸಂಖ್ಯಾತ ಕನ್ನಡಿಗರು ಸಂಘಟಿತರಾಗಿ ಒಂದು ನಿರ್ದಿಷ್ಟ ಸ್ಥಳದಲ್ಲಿ ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಪರಿಹರಿಸಿಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ನಿರಂತರವಾಗಿ ಕನ್ನಡ ಸಂಸ್ಕೃತಿ, ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುತ್ತದೆ.

* ಮಹಾರಾಷ್ಟ್ರ ಸರ್ಕಾರ ಗಡಿ ಭಾಗದ ಸುಮಾರು 865 ಹಳ್ಳಿಗಳನ್ನು ಮರಾಠ ಭಾಷಿಕರ ಗ್ರಾಮಗಳೆಂದು ಘೋಷಿಸಿ, ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ ಇವರಿಗೆ ಶೇ.3 ರಷ್ಟು ಮೀಸಲಾತಿ ನೀಡಿದ್ದು, ಈ ಪ್ರದೇಶಗಳಲ್ಲಿನ ಕನ್ನಡಿಗರು ಅನಿವಾರ್ಯವಾಗಿ ಮರಾಠಿ ಶಾಲೆಗಳಿಗೆ ಸೇರಬೇಕಾದ ಪರಿಸ್ಥಿತಿ ಬರುತ್ತಿದೆ. ಆದ್ದರಿಂದ, ಮಹಾರಾಷ್ಟ್ರ ಸರ್ಕಾರದ ಮಾದರಿಯಂತೆ, ಕರ್ನಾಟಕ ಸರ್ಕಾರವು ಇಲ್ಲಿನ ಕನ್ನಡಿಗರಿಗೆ ಮೀಸಲಾತಿ ಸೌಲಭ್ಯಗಳನ್ನು ನೀಡಬೇಕು.

* ಈ ಆರು ಗಡಿ ರಾಜ್ಯಗಳ ಕನ್ನಡ ಭಾಷಿಕ ಪ್ರದೇಶಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಬೇಕಾಗಿದೆ. ಮಹಾಜನ ವರದಿಯಲ್ಲಿ ಘೋಷಿಸಿರುವ ಮಹಾರಾಷ್ಟ್ರ ರಾಜ್ಯದ 747 ಕನ್ನಡ ಭಾಷಿತ ಗ್ರಾಮಗಳಿಗೆ ವಿಶೇಷ/ಆಧ್ಯತೆಯ ಸೌಲಭ್ಯಗಳನ್ನು ನೀಡಬೇಕು.

- ಅಂತೆಯೇ, ಈಗ ಕೇರಳ ರಾಜ್ಯದಲ್ಲಿದ್ದು, ಕರ್ನಾಟಕಕ್ಕೆ ಸೇರಲು ಮಹಾಜನ ವರದಿಯಲ್ಲಿ ಶಿಫಾರಸ್ಸು ಮಾಡಿರುವ 72 ಗ್ರಾಮಗಳಿಗೆ ವಿಶೇಷ/ಆದ್ಯತೆಯ ಸೌಲಭ್ಯಗಳನ್ನು ನೀಡಬೇಕು.

- ಬೆಳಗಾವಿ ಭಾಷಾ ಹಿಂಸಾಚಾರದಲ್ಲಿ ಮಡಿದ ಮರಾಠಿಗರಿಗೆ ಮಹಾರಾಷ್ಟ್ರ ಸರ್ಕಾರ ಸ್ವಾತಂತ್ರ್ಯ ಯೋಧರಿಗೆ ನೀಡುವ ಹುತಾತ್ಮರ ಸ್ಥಾನಮಾನ ನೀಡಿ ಅವರಿಗೆ ಮಾಸಿಕ ಮಾಶಾಸನ ನೀಡಲಾಗುತ್ತಿದೆ. ಇದೊಂದು ಪರೋಕ್ಷವಾಗಿ ಕನ್ನಡ ಹೋರಾಟಗಾರರಲ್ಲಿ ಅಸಮಾಧಾನ ಉಂಟಾಗಿದೆ.

- ಮರಾಠ ಭಾಷೆಯಲ್ಲಿರುವ ಪಠ್ಯ ಕ್ರಮಗಳಲ್ಲಿ ಗಣಿತದ ಸಂಕಲನ – ವ್ಯವಕಲನ ಪದ್ಧತಿಗಳು ಕನ್ನಡದ ಗಣಿತದ ಪದ್ಧತಿಗಳಿಗೆ ವ್ಯತ್ಯಾಸವಾಗಿದ್ದು, ಕನ್ನಡ ಮಕ್ಕಳ ಕಲಿಕೆಗೆ ತೊಡಕಾಗಿದೆ. ಆದ್ದರಿಂದ, ಕನ್ನಡ ಪಠ್ಯ ಪುಸ್ತಕಗಳು ವಿಶೇಷವಾಗಿ ಗಣಿತ ಮತ್ತು ವಿಜ್ಞಾನಗಳ ಪುಸ್ತಕಗಳನ್ನು ಕಾಲಮಿತಿಯಲ್ಲಿ ಸರಬರಾಜು ಮಾಡಬೇಕು. ಅವರಿಗೆ ಈ ಎಲ್ಲಾ ಪ್ರಕಟಣೆಗಳು ಹಾಗೂ ನಮೂನೆಗಳು ಕನ್ನಡ ಭಾಷೆಯಲ್ಲಿಯೂ ದೊರೆಯುವಂತಾಗಬೇಕು ಎಂಬುದು ಅವರ ಆಶಯವಾಗಿದೆ.

- ಮಹಾರಾಷ್ಟ್ರ ಕನ್ನಡ ಪ್ರದೇಶಗಳಲ್ಲಿ ಒಂದು ಅಂಗನವಾಡಿ ಕೇಂದ್ರ ಇರುವುದಿಲ್ಲ. ಇರುವ ಕನ್ನಡ ಶಾಲೆಯಲ್ಲಿ ಕನ್ನಡ ಅಂಗನವಾಡಿ ಕೇಂದ್ರ ತೆರೆಯಲು ಕರ್ನಾಟಕ ಸರ್ಕಾರದ ಗಡಿ ಪ್ರಾಧಿಕಾರದ ಸಹಾಯ ಒದಗಿಸಬೇಕು.

- ಕಾಸರಗೋಡಿನ ಸರ್ಕಾರಿ ಮತ್ತು ಅರೆ ಸರ್ಕಾರಿ ಕಛೇರಿಗಳಲ್ಲಿ ದ್ವಿಭಾಷಾ ಸೂತ್ರಗಳನ್ನು ಬದಿಗೊತ್ತಿ ಮಲೆಯಾಳಿ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರಕಟಣೆಗಳನ್ನು ಹೊರಡಿಸುತ್ತಿದ್ದು, ಕನ್ನಡಿಗರಿಗೆ ಸಮಸ್ಯೆಯಾಗುತ್ತಿದೆ. ಇದನ್ನು ಕೇರಳ ಸರ್ಕಾರದ ಗಮನಕ್ಕೆ ತಂದು ಸರಿಪಡಿಸಬೇಕು.

- ಕೇರಳ ರಾಜ್ಯದಲ್ಲಿ ಸರಕಾರದ ಜೊತೆ ಪತ್ರ ವ್ಯವಹಾರ/ ಅರ್ಜಿಗಳಿಗಾಗಿ ಅಕ್ಷಯ ಕೇಂದ್ರ'ಗಳಿದ್ದು ಅಲ್ಲಿ ಮಲಯಾಳ ಮತ್ತು ಆಂಗ್ಲ ಭಾಷೆಗಳಲ್ಲಿ ಮಾತ್ರ ಈ ವ್ಯವಸ್ಥೆ ಇದೆ. ಕಾಸರಗೋಡು ಪ್ರದೇಶಕ್ಕೆ ಇದು ಕನ್ನಡದಲ್ಲೂ ಇರುವಂತೆ ಮಾಡಬೇಕಾಗಿದೆ. (ಈಗಾಗಲೇ ಈ ನಿಟ್ಟಿನಲ್ಲಿ ಪ್ರಾಧಿಕಾರ ಪತ್ರ ಬರೆದಿದೆ)
- ಗೋವಾ ಕನ್ನಡಿಗರ ಮಕ್ಕಳಿಗೆ ಕನ್ನಡ ಭಾಷೆಯ ಸರ್ಕಾರಿ ಪ್ರೌಢಶಾಲೆ ಇಲ್ಲ. ಪರೀಕ್ಷಾ ಕೇಂದ್ರಕ್ಕೆ ಕಾರವಾರಕ್ಕೆ ಬರಬೇಕಾಗಿದ್ದು, ಇವರಿಗೆ ವಾಸ್ತವ್ಯ, ಪ್ರಯಾಣ ಇತರೆ ತೊಂದರೆಗಳು ಬರುತ್ತಿವೆ. ಆದ್ದರಿಂದ, ಪರೀಕ್ಷಾ ಕೇಂದ್ರಗಳನ್ನು ಗೋವಾದಲ್ಲಿ ತೆರೆಯಲು ಕ್ರಮಕೈಗೊಳ್ಳಬೇಕಾಗಿದೆ.
- ಮುಂಗಾರು ಸಮಯಕ್ಕೆ ಗೋವಾಕ್ಕೆ ಆಗಮಿಸುವ ಕೂಲಿ ಕಾರ್ಮಿಕರ ಮಕ್ಕಳಿಗೆ ಗೋವಾ ಸರ್ಕಾರವು ಘೋಷಿಸಿರುವ ಮೊಬೈಲ್ ಶಿಕ್ಷಣವು ಮರಾಠಿ ಮತ್ತು ಹಿಂದಿ ಭಾಷೆಗೆ ಸೀಮಿತವಾಗಿದ್ದು, ಕನ್ನಡಿಗರಿಗೆ ಯಾವುದೇ ಅನುಕೂಲ ಆಗುವುದಿಲ್ಲ.
- ಗೋವಾದ ಬೈನಾ ಬೀಚಿನ ನಿರಾಶ್ರಿತ ಕನ್ನಡಿಗರಿಗೆ ಪುನರ್ ವಸತಿ ಕಲ್ಪಿಸಬೇಕು. ಇದು ಕಳೆದ 10 ವರ್ಷದ ಬೇಡಿಕೆಯಾಗಿರುತ್ತದೆ.
- ಆಂಧ್ರ, ತೆಲಂಗಾಣ, ಗೋವಾ, ತಮಿಳುನಾಡು ರಾಜ್ಯದಲ್ಲಿ ವಾಸಿಸುತ್ತಿರುವ ಕನ್ನಡಿಗರ ಜಾತಿ ಪ್ರವರ್ಗ ಕರ್ನಾಟಕ ರಾಜ್ಯದಲ್ಲಿನ ಅದೇ ಜಾತಿಯ ಪ್ರವರ್ಗಕ್ಕೆ ವ್ಯತ್ಯಾಸವಾಗುತ್ತಿರುವುದರಿಂದ, ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆಯಲು ತೊಂದರೆಯಾಗುತ್ತಿದ್ದು, ಗಡಿ ಕನ್ನಡಿಗರಿಗೆ ಜಾತಿ, ವಾಸದ ಅವಧಿ ಮತ್ತು ಆದಾಯ ಮಿತಿಯ ನಿರ್ದಿಷ್ಟತೆಯನ್ನು ಕರ್ನಾಟಕ ಸರ್ಕಾರ ತೆಗೆಯಬೇಕಾಗಿದೆ.
- ಆಂಧ್ರ, ತೆಲಂಗಾಣದಿಂದ ಬಳ್ಳಾರಿ ಮತ್ತು ಸಿರಗುಪ್ಪ ಪ್ರದೇಶಗಳಿಗೆ ಪ್ರಯಾಣಿಸುವ ಗಡಿ ಭಾಗದ ಶಾಲಾ ಮಕ್ಕಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಉಚಿತ ಅಥವಾ ರಿಯಾಯಿತಿ ಪಾಸ್‌ಗಳನ್ನು ನೀಡಬೇಕಾಗಿದೆ.

- ಕಾಸರಗೋಡಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ಶಾಲೆ, ಕಾಲೇಜುಗಳಲ್ಲಿ ಓದಲು ಪ್ರತಿದಿನ ಪ್ರಯಾಣ ಮಾಡುವ ವಿದ್ಯಾರ್ಥಿನಿಯರಿಗೆ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಮಾಸಿಕ ಪಾಸ್‌ಗಳನ್ನು ನೀಡುವ ವ್ಯವಸ್ಥೆ ಆಗಬೇಕು.
- ಆಂಧ್ರ, ತೆಲಂಗಾಣ ರಾಜ್ಯದಲ್ಲಿ ಇರುವ ಸುಮಾರು ೬೦ ಶಾಲೆಗಳು ಕನ್ನಡ ಭಾಷೆಯ ಶಿಕ್ಷಕರಿಲ್ಲದೇ ಮುಚ್ಚುವ ಸ್ಥಿತಿಯಲ್ಲಿದ್ದು, ಸ್ಥಳೀಯ ಬಿ.ಎಡ್ ಮತ್ತು ಡಿ.ಎಡ್ ಮಾಡಿರುವ ನಿರುದ್ಯೋಗಿ ಯುವಕರನ್ನು ಅತಿಥಿ ಶಿಕ್ಷಕರನ್ನಾಗಿ ನೇಮಕ ಮಾಡಿ ಇವರಿಗೆ ಗೌರವಧನ ನೀಡಬೇಕು.
- ಕಾಸರಗೋಡಿನ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಬಾರದ ಶಿಕ್ಷಕರ ನೇಮಕದಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಕೆಲವು ಕಡೆ ಶಾಲೆಗಳನ್ನೇ ಮುಚ್ಚುವ ಪರಿಸ್ಥಿತಿಯೂ ಎದುರಾಗಿದೆ. ಇಂತಹ ಶಾಲೆಗಳನ್ನು ನಡೆಸಲು ಪ್ರಾಧಿಕಾರ ಒತ್ತಾಸೆಯಾಗಬೇಕು.
- ಹೊರ ರಾಜ್ಯಗಳಲ್ಲಿ ಹಾಗೂ ಗಡಿ ಭಾಗದಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿರುವ ಖಾಸಗಿ ಶಾಲಾ ಸಂಘ ಸಂಸ್ಥೆಗಳಿಗೆ ಹಾಗೂ ಸರ್ಕಾರಿ ಕನ್ನಡ ಶಾಲೆಗಳಿಗೆ ಶಾಲಾಕೊಠಡಿ ನಿರ್ಮಾಣಕ್ಕಾಗಿ ಹಾಗೂ ಇತರೆ ಮೂಲಭೂತ ಸೌಕರ್ಯಗಳಿಗಾಗಿ ಹೆಚ್ಚಿನ ಅನುದಾನ ನೀಡಬೇಕು. ಏಕೆಂದರೆ ಆಯಾ ರಾಜ್ಯ ಸರ್ಕಾರಗಳು ಈ ಖಾಸಗಿ ಕನ್ನಡ ಶಾಲೆಗಳಿಗೆ ಶಾಲಾಕಟ್ಟಡ ನಿರ್ಮಾಣಕ್ಕಾಗಿ ಯಾವುದೇ ಅನುದಾನ ನೀಡುವುದಿಲ್ಲ.
- ಕೆಲವು ಗಡಿ ಭಾಗಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಮಕ್ಕಳ ವಸತಿ ಪ್ರದೇಶದಿಂದ ದೂರ ಇದ್ದು, ೩-೪ ಕಿ.ಮೀ ಮಕ್ಕಳು ಶಾಲೆಗೆ ನಡೆದು ಬರುವಂತಹ ಸ್ಥಿತಿ ಇದ್ದು, ಇಂತಹ ಆಯ್ದ ಶಾಲೆಗಳ ಹತ್ತಿರ ವಸತಿ ನಿಲಯಗಳನ್ನು ಸ್ಥಾಪಿಸಬೇಕು. ಇಲ್ಲವಾದರೆ ವಸತಿ ನಿಲಯ ನಡೆಸುವ ಖಾಸಗಿ ಸಂಸ್ಥೆಗಳಿಗೆ ಸರ್ಕಾರವು ವಾರ್ಷಿಕ ಅನುದಾನವನ್ನು ನೀಡಬೇಕು.

- ಗಡಿ ಭಾಗಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕನ್ನಡ ಮಾಧ್ಯಮ ಶಾಲೆಯ ಶಿಕ್ಷಕರಿಗೆ ಕರ್ನಾಟಕ ಸರ್ಕಾರವು ವಾರ್ಷಿಕವಾಗಿ ಪ್ರೋತ್ಸಾಹಧನ ನೀಡಬೇಕು.
- ಗಡಿ ಭಾಗದ ಕನ್ನಡ ಶಾಲೆಗಳಲ್ಲಿ ಕನ್ನಡ ಪಠ್ಯ ಪುಸ್ತಕಗಳು, ಬೋಧನಾ ಉಪಕರಣಗಳು, ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಬೇಕು.
- ಮಾನ್ಯ ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ಬಳ್ಳಾರಿ, ರಾಯಚೂರು ಮತ್ತು ಆಂಧ್ರಪ್ರದೇಶದ ಅನಂತಪುರ ಹಾಗೂ ಕರ್ನೂಲ್ ಜಿಲ್ಲೆ ಮತ್ತು ಕೇರಳದಲ್ಲಿರುವ ಕಾಸರಗೋಡು ಜಿಲ್ಲೆಯ ಜಿಲ್ಲಾಧಿಕಾರಿಗಳ ಸಭೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಏರ್ಪಡಿಸಿ, ಸಮಸ್ಯೆಗಳ ಪರಿಹಾರಕ್ಕೆ ತೀವ್ರ ಕ್ರಮಕೈಗೊಳ್ಳಬೇಕು.
- ತಮಿಳುನಾಡಿನ ಗಡಿ ಭಾಗದಲ್ಲಿ ದ್ವಿಭಾಷಾ ನೀತಿಯಲ್ಲಿ ಕನ್ನಡದ ಬದಲಿಗೆ ತಮಿಳು ಭಾಷೆ ಮಾತ್ರ ನಿಗದಿ ಪಡಿಸಿದ್ದು, ಕನ್ನಡ ಭಾಷೆಗೆ ಒತ್ತು ಕೊಡಲು ಮಹಾಜನ ವರದಿಯ ಸೌಲಭ್ಯವನ್ನು ವಿಸ್ತರಿಸಬೇಕು. ತಮಿಳುನಾಡಿನ ಹೊಸೂರಿನಲ್ಲಿ ಕನ್ನಡ ಸಾಂಸ್ಕೃತಿಕ ಭವನ ನಿರ್ಮಾಣ ಮಾಡಲು ಶೀಘ್ರ ಕ್ರಮಕೈಗೊಳ್ಳಬೇಕು.
- ಕರ್ನಾಟಕ ರಾಜ್ಯದ ಪ್ರವಾಸೋಧ್ಯಮ ಇಲಾಖೆಯಿಂದ ನಡೆಸುವ ಶೈಕ್ಷಣಿಕ ಉಚಿತ ಪ್ರವಾಸಕ್ಕಾಗಿ ನಮ್ಮ ಗಡಿ ಭಾಗದ ವಿದ್ಯಾರ್ಥಿಗಳನ್ನು ಪರಿಗಣಿಸಬೇಕು.
- ಕರ್ನಾಟಕ ದರ್ಶನ ಪ್ರವಾಸಕ್ಕೆ ಮಹಾರಾಷ್ಟ್ರದ ಸರ್ಕಾರಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳು ಕರ್ನಾಟಕ ಬಸ್ ಸೌಲಭ್ಯ ಪಡೆಯಲು 1 ಕಿ.ಮೀ ಗೆ ರೂ.47 ತೆಗೆದುಕೊಳ್ಳುತ್ತಾರೆ. ಆದರೆ, ಪ್ರಮುಖವಾಗಿ ಈ ಆರು ಗಡಿ ರಾಜ್ಯಗಳ ಗಡಿ ಭಾಗಗಳ ಗೌರವಾನ್ವಿತ ಮುಖ್ಯಮಂತ್ರಿಗಳು ವರ್ಷಕ್ಕೆ ಒಂದು ಬಾರಿಯಾದರೂ ಒಂದು ಸಂಯುಕ್ತ ಸಭೆಯನ್ನು ನಡೆಸಿ ಈ ರಾಜ್ಯಗಳಲ್ಲಿನ ಭಾಷೆ, ಸಂಸ್ಕೃತಿಗೆ ಸಂಬಂಧಿಸಿದಂತೆ ಸಭೆಗಳನ್ನು ನಡೆಸಿ ಸಮಸ್ಯೆಗಳನ್ನು ಇತ್ಯರ್ಥಗೊಳಿಸಬೇಕು.

- ಗಡಿ ಭಾಗದ ಶಾಲೆಗಳಿಗೆ ಶುದ್ಧ ನೀರಿನ ಘಟಕ ಒದಗಿಸಿಕೊಡಬೇಕು.
- ಗಡಿ ಭಾಗದಲ್ಲಿ ಓಡಾಡುವ ಕರ್ನಾಟಕ ರಸ್ತೆ ಸಾರಿಗೆ ಬಸ್ಸುಗಳಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಲಿಕೆಗಾಗಿ ಉಚಿತ ಬಸ್ ಪಾಸ್ ವಿತರಣೆ ಮಾಡಬೇಕು.
- ಕನ್ನಡ ಅಭಿವೃದ್ಧಿಗಾಗಿ ಹೋಬಳಿ ಮಟ್ಟಗಳಲ್ಲಿ ಗ್ರಂಥಾಲಯ ವಾಚನಾಲಯ ಸೌಲಭ್ಯವನ್ನು ಒದಗಿಸಿಕೊಡಬೇಕು.
- ಕನ್ನಡ ಹೋರಾಟಗಾರರಿಗೆ ಸರ್ಕಾರದ ಮುಖಾಂತರ ಮಾಶಾಸನ/ಪಿಂಚಣಿ ಮಂಜೂರು ಮಾಡಿ ಕನ್ನಡ ಬೆಳೆಸಲು ಪ್ರೋತ್ಸಾಹಿಸಬೇಕು.
- ಕನ್ನಡ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ಪಡೆಯಲು ಗಡಿ ಭಾಗದಲ್ಲಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಅವಕಾಶ ಕಲ್ಪಿಸಿ ಕೊಡಬೇಕು.
- ಅನ್ಯ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ ತಿಂಗಳಿಗೆ ಇಂತಿಷ್ಟು ವಿದ್ಯಾರ್ಥಿ ವೇತನ ನಿಗಧಿ ಪಡಿಸಬೇಕು.
- ಕರ್ನಾಟಕದಲ್ಲಿನ ನವೋದಯ/ಮೊರಾರ್ಜಿ/ರಾಣಿ ಚನ್ನಮ್ಮ ಇತರೆ ವಸತಿ ಶಾಲೆಗಳಿಗೆ ಗಡಿನಾಡ ಮಕ್ಕಳಿಗೆ ಪ್ರವೇಶಾತಿಗೆ ಆಧ್ಯತೆ ನೀಡಬೇಕು.
- ಮುಂಬೈ ವಿಶ್ವವಿದ್ಯಾಲಯದಲ್ಲಿ ಸುಮಾರು ವರ್ಷಗಳಿಂದ ಖಾಲಿ ಇರುವ ಕನ್ನಡ ಭಾಷಾ ಪ್ರೊಫೆಸರ್, ಸಹಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ತುಂಬುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಒತ್ತಾಯಿಸಬೇಕು.
- ಮಹಾರಾಷ್ಟ್ರದ ಗಡಿಭಾಗದಲ್ಲಿ 12 ನೇ ಶತಮಾನದ ಶರಣರ ನೆಲೆಗಳು, ಕನ್ನಡದ ಅರಸರು ಕಟ್ಟಿಸಿರುವ ಮಂದಿರಗಳು ಮತ್ತು ಶಾಸನಗಳಿವೆ. ಇವುಗಳನ್ನು ಜೀರ್ಣೋದ್ಧಾರ ಮಾಡಿ, ಸಂರಕ್ಷಿಸಬೇಕು.

**ಪ್ರಕಾಶ ಮತ್ತೀಹಳ್ಳಿ**
ಕಾರ್ಯದರ್ಶಿ
ಕರ್ನಾಟಕ ಗಡಿ ಪ್ರದೇಶ
ಅಭಿವೃದ್ಧಿ ಪ್ರಾಧಿಕಾರ

**ಡಾ.ಸಿ.ಸೋಮಶೇಖರ ಭಾ.ಆ.ಸೇ (ನಿ)**
ಅಧ್ಯಕ್ಷರು
ಕರ್ನಾಟಕ ಗಡಿ ಪ್ರದೇಶ
ಅಭಿವೃದ್ಧಿ ಪ್ರಾಧಿಕಾರ

ಅನುಬಂಧ-ಕ

**ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 28-03-2025 ರಂದು ಪೂರ್ವಾಹ್ನ 11.00 ಗಂಟೆಗೆ ವಿಧಾನಸೌಧದ ಕೊಠಡಿ ಸಂ: 334 ರಲ್ಲಿ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು:**

**ಹಾಜರಿದ್ದ ಅಧಿಕಾರಿಗಳು: ಪಟ್ಟಿ ಲಗತ್ತಿಸಿದೆ**

ಮಾನ್ಯ ಶ್ರೀ ಸೋಮಣ್ಣ ಬೇವಿನಮರದ, ಅಧ್ಯಕ್ಷರು, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರು "ಹೊರರಾಜ್ಯದ ಗಡಿ ಕನ್ನಡಿಗರ ಸಮಸ್ಯೆಗಳ ಬಗ್ಗೆ" ಸವಿಸ್ತಾರವಾಗಿ ಸಭೆಗೆ ವಿಷಯ ಮಂಡನೆ ಮಾಡಿ, ಹೊರರಾಜ್ಯಗಳಲ್ಲಿರುವ 658 ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿಧ್ಯಾರ್ಥಿಗಳು ಇರುವ ಬಗ್ಗೆ ಸರ್ಕಾರದ ಗಮನಕ್ಕೆ ತಂದರು.

ಗಡಿ ಭಾಗದ ವಿಧ್ಯಾರ್ಥಿಗಳು ಮತ್ತು ಹೊರನಾಡ ಕನ್ನಡಿಗರು ದಿನ ನಿತ್ಯ ಅನುಭವಿಸುವ ಶೈಕ್ಷಣಿಕ, ಔದ್ಯೋಗಿಕ ಹಾಗೂ ಮೂಲಭೂತ ಸೌಕರ್ಯಗಳ ಸಮಸ್ಯೆಗಳನ್ನು ವಿವರಿಸುತ್ತಾ ಇವುಗಳ ಪರಿಹಾರದ ಬಗ್ಗೆ ಇಲಾಖಾವಾರು ಪರಿಹಾರ ಕೈಗೊಳ್ಳುವಂತೆ ಕೋರಲಾಯಿತು. ಈಗಾಗಲೇ ಹೊರರಾಜ್ಯದ ಕನ್ನಡ ಶಾಲೆಗಳಿಗೆ ಗಡಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಿಕ್ಷಣ ಇಲಾಖೆ ಸೇರಿ ಕನ್ನಡ ಮಾಧ್ಯಮದ ನಲಿ-ಕಲಿ ಕಲಿಕಾ ಸಾಮಗ್ರಿಗಳನ್ನು ವಿತರಿಸುವುದನ್ನು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮುಂಚೆ ವಿತರಿಸಲು ಶಿಕ್ಷಣ ಇಲಾಖೆಗೆ ಕೋರಲಾಯಿತು.

ಹೊರರಾಜ್ಯದ ಕನ್ನಡ ಮಾಧ್ಯಮ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಮಾಡುವ ಬಗ್ಗೆ, ಮೊರಾರ್ಜಿ ದೇಸಾಯಿ, ರಾಣಿಚನ್ನಮ್ಮ; ಮುಂತಾದ ವಸತಿನಿಲಯಗಳಿಗೆ ಶೇ.5 ರ ಮೀಸಲಾತಿಯಂತೆ ಪ್ರವೇಶಾತಿ ಹಾಗೂ ಶಾಲಾ ಕೊಠಡಿಗಳ/ಗ್ರಂಥಾಲಯ/ಕನ್ನಡ ಭವನ ನಿರ್ಮಾಣ, ಉನ್ನತ ಶಿಕ್ಷಣಗಳಿಗೆ ರಾಜ್ಯದ ವಿದ್ಯಾರ್ಥಿಗಳಂತೆ ಸಮಾನ ಅವಕಾಶ, ಹೊರನಾಡ ಕನ್ನಡಿಗರಿಗೆ ಮೀಸಲಾತಿ ನಿಯಮಗಳ ಪರಿಷ್ಕರಣೆ, ರಾಜ್ಯದ ಶಾಲಾಕಾಲೇಜುಗಳಿಗೆ ತೆರಳುವ ಹೊರನಾಡ ಕನ್ನಡಿಗ ವಿಧ್ಯಾರ್ಥಿಗಳಿಗೆ, ಸರ್ಕಾರಿ ಬಸ್ ಗಳಲ್ಲಿ ರಿಯಾಯಿತಿ ಪಾಸ್ ವ್ಯವಸ್ಥೆ ಮಾಡುವಂತೆ ಸಂಬಂಧಪಟ್ಟ ಎಲ್ಲಾ ಇಲಾಖಾ ಕಾರ್ಯದರ್ಶಿಗಳ ಗಮನಕ್ಕೆ ತರಲಾಯಿತು. ಈ ಬಗ್ಗೆ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳು ಸಾಧಕ-ಬಾಧಕಗಳನ್ನು ಪರಿಶೀಲಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಅವಗಾಹನೆಗೆ ಸಲ್ಲಿಸುವಂತೆ ಸೂಚಿಸಲಾಯಿತು.

ಕೇರಳ ರಾಜ್ಯದವರು ಕಾಸರಗೋಡಿನ ಕನ್ನಡ ಪ್ರದೇಶಗಳ ಹೆಸರುಗಳನ್ನು ಮಲೆಯಾಳೀಕರಣ ಮಾಡುತ್ತಿರುವ ಬಗ್ಗೆ, ಕಾನೂನಾತ್ಮಕ ಅವಕಾಶಗಳನ್ನು ಪರಿಶೀಲಿಸಿ, ವರದಿ ನೀಡಲು, ಸಂಸದೀಯ ವ್ಯವಹಾರಗಳ ಇಲಾಖಾ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ಪ್ರಸ್ತುತ ಕರ್ನಾಟಕ ಸರ್ಕಾರದಿಂದ ಹೊರನಾಡ ಕನ್ನಡಿಗರಿಗೆ ಇರುವ ಸವಲತ್ತುಗಳ ಬಗ್ಗೆ, ಸಾಮಾಜಿಕ ಜಾಲತಾಣ, ಅಂತರ್ಜಾಲ, ಕರಪತ್ರಗಳು ಇತ್ಯಾದಿಗಳ ಮೂಲಕ ವ್ಯಾಪಕ ಪ್ರಚಾರ ಮಾಡುವಂತೆ ಗಡಿ ಪ್ರಾಧಿಕಾರಕ್ಕೆ ಸೂಚಿಸಲಾಯಿತು.

ರಾಜ್ಯದ ಗಡಿ ಜಿಲ್ಲೆಗಳಲ್ಲಿ ನಡೆಯುವ ಕೆ.ಡಿ.ಪಿ ಸಭೆಯಲ್ಲಿ ಗಡಿ ಸಮಸ್ಯೆಗಳ ವಿಷಯಗಳನ್ನು ಚರ್ಚಿಸಲು ಅನುಕೂಲವಾಗುವಂತೆ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಲು ಸೂಕ್ತ ಆದೇಶ ಹೊರಡಿಸಲು ಹಾಗೂ ಗಡಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕೂಡ ಗಡಿ ಸಮಸ್ಯೆಗಳ ಬಗ್ಗೆ ನಿರಂತರವಾಗಿ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ಖಾಯಂ ಸಭಾ ಅಜಂಡಾ ಹೊಂದಿರಲು ಸೂಚಿಸಲಾಯಿತು. ಹೊರರಾಜ್ಯಗಳ ಗಂಭೀರ ಸಮಸ್ಯೆಗಳ ಬಗ್ಗೆ ಹೊರರಾಜ್ಯಗಳ ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಗಳ ಜೊತೆಗೆ ಅವಶ್ಯವಿದ್ದಲ್ಲಿ ಪತ್ರ ವ್ಯವಹಾರ ಮಾಡಿ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಗಡಿ ಪ್ರಾಧಿಕಾರಕ್ಕೆ ಮತ್ತು ಇತರೆ ಇಲಾಖೆಗಳಿಗೆ ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನಿಸಿದಂತೆ, ನೌಕರರ ಮತ್ತು ಅವಲಂಬಿತ ಕುಟುಂಬ ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ- ಸಿಎಎಂ/ 1/ 2025 ದಿನಾಂಕ: 21.02.2025 ವಿವಿಧ ಬ್ಯಾಂಕುಗಳು ಒದಗಿಸುವ "ಸಂಬಳ ಪ್ಯಾಕೇಜ್‌ಗಳ" ಅಡಿಯಲ್ಲಿ ಖಾತೆಗಳನ್ನು ತೆರೆಯುವುದು/ಆಯ್ಕೆ ಮಾಡಿಕೊಳ್ಳುವುದನ್ನು ಎಲ್ಲಾ ಅಧಿಕಾರಿ/ನೌಕರರಿಗೆ (ಸರ್ಕಾರಿ / ಸರ್ಕಾರಿ ಸಂಸ್ಥೆಗಳು, ಇತ್ಯಾದಿ) ಕಡ್ಡಾಯಗೊಳಿಸಿರುವುದನ್ನು ಸಭೆಯಲ್ಲಿ ತಿಳಿಸಲಾಯಿತು.

**(ಕ್ರಮ: ಎಲ್ಲಾ ಇಲಾಖೆಗಳು)**

2024-25ನೇ ಸಾಲಿನಲ್ಲಿ ಒಟ್ಟು ಅನುದಾನ ರೂ. 3,32,407 ಕೋಟಿಗಳಾಗಿದ್ದು (**ಆಯವ್ಯಯ ಅಂದಾಜು(latest estimates) ರೂ**. 3,14,878 + OB ರೂ.17,529 ಕೋಟಿ ಸೇರಿದಂತೆ) ಮಾರ್ಚ್ **24ನೇ** ತಾರೀಖಿನಂತ್ಯಕ್ಕೆ ರೂ. 2,93,525 ಕೋಟಿ ಬಿಡುಗಡೆಯಾಗಿದ್ದು, ರೂ. 2,82,238 ಕೋಟಿಗಳು ವೆಚ್ಚವಾಗಿರುತ್ತದೆ. ಒಟ್ಟು ಅನುದಾನಕ್ಕೆ(LE+OB) ಶೇ. 85 ರಷ್ಟು ಪ್ರಗತಿಯಾಗಿರುತ್ತದೆ. ಕಳೆದ ಸಾಲಿಗಿಂತ, ಅಂಕಿ ಅಂಶಗಳಲ್ಲಿ, ರೂ. 5,995 ಕೋಟಿ ಹೆಚ್ಚಿಗೆ ವೆಚ್ಚವಾಗಿರುವುದನ್ನು ಸಭೆಯಲ್ಲಿ ಗಮನಿಸಲಾಯಿತು.

ಒಟ್ಟಾರೆ ಅನುದಾನಕ್ಕೆ ಶೇ. 75ಕ್ಕಿಂತ ಕಡಿಮೆ ಪ್ರಗತಿ ಸಾಧಿಸಿರುವ ಇಲಾಖೆಗಳಾದ ಯೋಜನೆ, ಮಾಹಿತಿ ತಂತ್ರಜ್ಞಾನ, ವಾರ್ತಾ, ವಸತಿ, ತೋಟಗಾರಿಕೆ, ಪೌರಾಡಳಿತ ನಿರ್ದೇಶನಾಲಯ, ಪರಿಶಿಷ್ಟ ಪಂಗಡಗಳು, ಸಣ್ಣ ನೀರಾವರಿ ಇಲಾಖೆಗಳಿಗೆ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

ವೇತನ ಕಾರ್ಯಕ್ರಮಗಳಲ್ಲಿ, ಹೆಚ್ಚಿನ ಬಾಕಿಯಿರುವ ಇಲಾಖೆಗಳಾದ ಶಾಲಾ ಶಿಕ್ಷಣ, ಉನ್ನತ ಶಿಕ್ಷಣ, ಕಾನೂನು, ಒಳಾಡಳಿತ, ಆರೋಗ್ಯ, ಕಂದಾಯ ಇಲಾಖೆಗಳಿಗೆ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

ವೇತನೇತರ ಕಾರ್ಯಕ್ರಮಗಳಲ್ಲಿ, ಹೆಚ್ಚಿನ ಬಾಕಿಯಿರುವ (ಬಿಡುಗಡೆ + OB - ವೆಚ್ಚ) ಇಲಾಖೆಗಳಾದ ಯೋಜನೆ, ಗ್ರಾಮೀಣಾಭಿವೃದ್ಧಿ, ಪೌರಾಡಳಿತ ನಿರ್ದೇಶನಾಲಯ, ಜಲಸಂಪನ್ಮೂಲ, ವಸತಿ, ಆರೋಗ್ಯ ಇಲಾಖೆಗಳಿಗೆ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

ಸರಕು ಮತ್ತು ಸೇವೆಗಳ ಖರೀದಿ (Procurement of Goods & Services) ಯಡಿ ಒದಗಿಸಲಾಗಿರುವ ಅನುದಾನಕ್ಕೆ ಸಂಬಂಧಿಸಿದಂತೆ ಪ್ರತಿ ತಿಂಗಳ ಇಲಾಖಾ ಎಂಪಿಕ್ ಸಭೆಗಳಲ್ಲಿ ಕಡ್ಡಾಯವಾಗಿ ಪರಿಶೀಲನೆ ಮಾಡುವಂತೆ ಸೂಚಿಸಲಾಯಿತು.

(ಕ್ರಮ: ಎಲ್ಲಾ ಇಲಾಖೆಗಳು)

ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಲ್ಲಿ 2024-25 ನೇ ಸಾಲಿನಲ್ಲಿ ಮಾರ್ಚ್ 24**ನೇ** ತಾರೀಖಿನಂತ್ಯಕ್ಕೆ ಕೇಂದ್ರದ ಅನುದಾನ ರೂ. **23,067** ಕೋಟಿಗಳಲ್ಲಿ ರೂ. **17,560** ಕೋಟಿಗಳು ಕೇಂದ್ರದಿಂದ ಬಿಡುಗಡೆಯಾಗಿದ್ದು **(ಶೇ.76).** ರೂ. **42,045** ಕೋಟಿ ವೆಚ್ಚವಾಗಿರುತ್ತದೆ. ಒಟ್ಟಾರೆ ಲಭ್ಯಅನುದಾನಕ್ಕೆ **ಶೇ.85** ರಷ್ಟು ಪ್ರಗತಿಯಾಗಿರುವುದನ್ನು ಗಮನಿಸಲಾಯಿತು. ಕೇಂದ್ರದಿಂದ ಕಡಿಮೆ ಬಿಡುಗಡೆಯಾಗಿರುವ ಇಲಾಖೆಗಳು ತಮ್ಮ ಕಾರ್ಯಕ್ರಮಗಳಿಗೆ ಹಿಂಬಾಲಿಕ ಕ್ರಮವನ್ನು ಅನುಸರಿಸಿ ಹೆಚ್ಚಿನ ಅನುದಾನವನ್ನು ಪಡೆಯಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

ಪರಿಶಿಷ್ಟ ಜಾತಿ ಉಪಯೋಜನೆ (SCSP) ಯಡಿಯಲ್ಲಿ ಅನುದಾನ **ರೂ. 28,700.96** ಕೋಟಿಗಳಾಗಿದ್ದು, ಮಾರ್ಚ್ 24ನೇ ತಾರೀಖಿನಂತ್ಯಕ್ಕೆ **ರೂ 25,566** ಕೋಟಿ ಬಿಡುಗಡೆಯಾಗಿದ್ದು **ರೂ. 24,952** ಕೋಟಿಗಳು ವೆಚ್ಚವಾಗಿರುತ್ತದೆ. ಶೇ. 80 ರಷ್ಟು (OB ಒಳಗೊಂಡಂತೆ) ಒಟ್ಟು ಅನುದಾನಕ್ಕೆ ವೆಚ್ಚವಾಗಿರುತ್ತದೆ. ಗಿರಿಜನ ಉಪಯೋಜನೆ (TSP) ಯಡಿಯಲ್ಲಿ ಅನುದಾನ ರೂ. 11,162.85 ಕೋಟಿಗಳಾಗಿದ್ದು, ಮಾರ್ಚ್ 24ನೇ ತಾರೀಖಿನಂತ್ಯಕ್ಕೆ **ರೂ 9,636** ಬಿಡುಗಡೆಯಾಗಿದ್ದು ರೂ. 8,884 ಕೋಟಿಗಳು ವೆಚ್ಚವಾಗಿರುತ್ತದೆ. ಶೇ. 74 ರಷ್ಟು (OB ಒಳಗೊಂಡಂತೆ) ಒಟ್ಟು ಅನುದಾನಕ್ಕೆ ವೆಚ್ಚವಾಗಿರುವುದನ್ನು ಗಮನಿಸಲಾಯಿತು. ಒಟ್ಟಾರೆ ಅನುದಾನಕ್ಕೆ ಶೇ. 70ಕ್ಕಿಂತ ಕಡಿಮೆ ಪ್ರಗತಿ ಸಾಧಿಸಿರುವ ಇಲಾಖೆಗಳಾದ ಯೋಜನೆ, ವಾರ್ತಾ, ಮಾಹಿತಿ ತಂತ್ರಜ್ಞಾನ, ವಸತಿ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪರಿಶಿಷ್ಟ ಪಂಗಡಗಳು, ಆರೋಗ್ಯ ಇಲಾಖೆಗಳಿಗೆ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

ಬಾಹ್ಯಾನುಧಾನಿತ ಕಾರ್ಯಕ್ರಮಗಳಡಿ (EAP) 2024-25ನೇ ಸಾಲಿನಲ್ಲಿ ಮಾರ್ಚ್ 24ನೇ ತಾರೀಖಿನಂತ್ಯಕ್ಕೆ ಒಟ್ಟು ಅನುದಾನಕ್ಕೆ ಶೇ. 92 ರಷ್ಟು ಪ್ರಗತಿ ಸಾಧಿಸಲಾಗಿದ್ದು ಜಲಸಂಪನ್ಮೂಲ ಇಲಾಖೆಯಡಿ ಅಣೆಕಟ್ಟು ಪುನರ್ವಸತಿ ಮತ್ತು ಅಭಿವೃದ್ಧಿ ಯೋಜನೆ ಹಾಗೂ ಜಲಾನಯನ ಇಲಾಖೆಯಡಿ ವಿಶ್ವ ಬ್ಯಾಂಕ್ ನೆರವಿನ

ರಿವಾರ್ಡ್ ಯೋಜನೆಯಡಿ ಕಡಿಮೆ ಪ್ರಗತಿಯಾಗಿರುವುದನ್ನು ಗಮನಿಸಿ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

2024-25ನೇ ಸಾಲಿನಲ್ಲಿ ನಬಾರ್ಡ್ ಕಾರ್ಯಕ್ರಮಗಳಡಿ ಮಾರ್ಚ್ 24ನೇ ತಾರೀಖಿನಂತ್ಯಕ್ಕೆ ರೂ. 2846.81 ಕೋಟಿ ವೆಚ್ಚವಾಗಿದ್ದು, ಇಲಾಖೆಗಳಿಗೆ RIDF ನಡಿ ಒದಗಿಸಲಾಗಿರುವ ಅನುದಾನವನ್ನು ಕೂಡಲೇ ಸಂಪೂರ್ಣವಾಗಿ ವೆಚ್ಚ ಮಾಡಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

2025-26ನೇ ಸಾಲಿನ ಆಯವ್ಯಯ ಘೋಷಣೆಗಳಿಗೆ ಸಂಬಂಧಿಸಿದಂತೆ ಹೊಸ ಹಾಗೂ ಮುಂದುವರೆದ ಮಾರ್ಪಾಡಿತ ಘೋಷಣೆಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಸಕಮಿತಿಗಾಗಿ ಆರ್ಥಿಕ ಮತ್ತು ಯೋಜನಾ ಇಲಾಖೆಗಳಿಗೆ ಏಪ್ರಿಲ್ 2025ರ ಮಾಹೆಯ ಅಂತ್ಯದೊಳಗೆ ಸಲ್ಲಿಸಿ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸಲು ಸೂಚಿಸಲಾಯಿತು.

**(ಕ್ರಮ: ಸಂಬಂಧಪಟ್ಟ ಇಲಾಖೆಗಳು)**

**ಸಂಖ್ಯೆ: ಪಿಡಿಎಸ್ 5 ಐಎಂಎಂ 2025**

**(ಡಾ|| ಶಾಲಿನಿ ರಜನೀಶ್)**
**ಸರ್ಕಾರದ ಮುಖ್ಯ ಕಾರ್ಯದರ್ಶಿ**



59

ಅನುಬಂಧ-7

ಕಾರ್ಯದರ್ಶಿ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ. ಕಟ್ಟಡ,
3ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560 009

SECRETARY
Karnataka Border Area Development Authority
Federation House, FKCCI Building,
3rd Floor, K.G. Road, Bengaluru - 560 009

ಹಸಿರಾಯಿತು ಕರ್ನಾಟಕ Telephone & Fax: 080-22352044 ಉಸಿರಾಗಲಿ ಕನ್ನಡ
E-mail: secretarygadi@karnataka.gov.in, kbada6666@gmail.com, Website: https://kbada.karnataka.gov.in

ಕ್ರ.ಸಂ:ಕಗಪ್ರಅಪ್ರಾ/56/ಆ/2022-23 ದಿನಾಂಕ:14-05-2025

ಇವರಿಗೆ,
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**
ಸಮಾಜ ಕಲ್ಯಾಣ ಇಲಾಖೆ,
233, ಎರಡನೇ ಮಹಡಿ, ವಿಕಾಸ ಸೌಧ,
ಡಾ|| ಬಿ.ಆರ್ ಅಂಬೇಡ್ಕರ್ ವೀದಿ,
ಬೆಂಗಳೂರು. – 560001.

ಮಾನ್ಯರೇ,

ವಿಷಯ: ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ:28.03.2025 ರಂದು ನಡೆದ ಸಭೆಯ ನಡವಳಿಯ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ.

ಉಲ್ಲೇಖ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ ದಿನಾಂಕ:28.03.2025 (ಪ್ರತಿ ಲಗತ್ತಿಸಿದೆ)

*******

ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ದಿನಾಂಕ:28-03-2025 ರ ಸಭೆಯಲ್ಲಿ <u>**"ಹೊರರಾಜ್ಯದ ಕನ್ನಡಿಗರ ಶೈಕ್ಷಣಿಕ, ಔದ್ಯೋಗಿಕ ಸೌಲಭ್ಯಗಳು ಹಾಗೂ ಮೀಸಲಾತಿ"**</u> ಕುರಿತಾಗಿ ಸಭೆ ನಡೆಸಿದ್ದು, ಸಭಾ ನಡವಳಿಯ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರಲು ಸೂಚಿಸಿರುವಂತೆ ಇವುಗಳನ್ನು ತಮ್ಮ ಆದ್ಯ ಗಮನಕ್ಕೆ ತರಲಾಗಿದೆ.

ರಾಜ್ಯದ ಗಡಿ ಭಾಗಕ್ಕೆ ಹೊಂದಿಕೊಂಡಿರುವ 06 ಹೊರ ರಾಜ್ಯಗಳಲ್ಲಿನ ಕನ್ನಡ ಭಾಷಿಕರ ಶೈಕ್ಷಣಿಕ, ಸಾಂಸ್ಕೃತಿಕ, ಔದ್ಯೋಗಿಕ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ್ದು, ತಮ್ಮ ಇಲಾಖೆಯಿಂದ ಕ್ರಮಕೈಗೊಳ್ಳಬೇಕಾದ ವಿಷಯಗಳು ಕೆಳಕಂಡಂತಿದೆ.

- ಮಹಾರಾಷ್ಟ್ರ/ಕೇರಳ/ಆಂದ್ರಪ್ರದೇಶ/ತೆಲಂಗಾಣ/ ಗೋವಾ/ತಮಿಳುನಾಡು ಹಾಗೂ ದೇಶದ ಯಾವುದೇ ರಾಜ್ಯಗಳಲ್ಲಿ 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮ ಶಿಕ್ಷಣ ಪಡೆಯುವಂತಹ ಮಕ್ಕಳಿಗೆ ಕರ್ನಾಟಕದಲ್ಲಿನ ಸಮಾಜ ಕಲ್ಯಾಣ/ನವೋದಯ/ ಮೊರಾರ್ಜಿ/ರಾಣಿ ಚನ್ನಮ್ಮ ಇತರ ಶಾಲೆಗಳಲ್ಲಿ/ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಪಿ.ಯು.ಸಿ ಮತ್ತು ಸಮಾನಾಂತರ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಸೇರ್ಪಡೆಯ ಜೊತೆಗೆ ವಸತಿನಿಲಯಗಳಲ್ಲಿ ಪ್ರವೇಶಕ್ಕೆ ಅನುಮತಿ ನೀಡಬೇಕಾಗಿದೆ ಮತ್ತು ಶೇ.5 ರಷ್ಟು ವಸತಿ ನಿಲಯಗಳಿಗೆ ಮೀಸಲಾತಿ ನೀಡಬೇಕೆಂಬ ಬೇಡಿಕೆಗೆ ಸ್ಪಂದಿಸಬೇಕಾಗಿದೆ.
- ಹೊರರಾಜ್ಯದ ಕನ್ನಡ ಭಾಷಿಕ ಮಕ್ಕಳಿಗೆ ಪ್ರವೇಶ ಪಡೆಯಲು ಕರ್ನಾಟಕ ಸರ್ಕಾರ ತಯಾರಿಸಿರುವ ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಕೆಲವು ನಿರ್ದಿಷ್ಟ ಅಂಶಗಳು (COLUMNS) ಇಲ್ಲದೇ ಇರುವ ಕಾರಣ ಪೋರ್ಟಲ್ ಸಮಸ್ಯೆಯಿಂದ ಇಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನಿರಾಕರಿಸುತ್ತಿದ್ದು, ಈ ಬಗ್ಗೆ ಕ್ರಮವಹಿಸಬೇಕಾಗಿರುತ್ತದೆ.

ಮೇಲ್ಕಂಡ ವಿಷಯಗಳ ಬಗ್ಗೆ ಆದ್ಯತೆ ಮೇಲೆ ಪರಿಹರಿಸುವ ಜೊತೆಗೆ, ಮಾನ್ಯ ಮುಖ್ಯಕಾರ್ಯದರ್ಶಿಗಳ ಸಭೆಯಲ್ಲಿ ತೀರ್ಮಾನಿಸಿರುವಂತೆ 19 ಗಡಿ ಜಿಲ್ಲೆಗಳಿಗೆ (ಗಡಿ ಜಿಲ್ಲೆಯ ಪಟ್ಟಿ ಲಗತ್ತಿಸಿದೆ) ತಮ್ಮ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಗಡಿ ಭಾಗದ ಸಮಗ್ರ ಅಭಿವೃದ್ಧಿಗೆ ಮತ್ತು ಹೊರನಾಡಿನ ಕನ್ನಡಿಗರ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಮಟ್ಟದಲ್ಲಿ ಒಬ್ಬ ಹಿರಿಯ ಅಧಿಕಾರಿಯನ್ನು ಸಮನ್ವಯ ಅಧಿಕಾರಿಯಾಗಿ ನೇಮಕಮಾಡಿ ಆದೇಶ ಹೊರಡಿಸಲು ಕೋರಿದೆ. ಈ ಬಗ್ಗೆ, ತೆಗೆದುಕೊಂಡ ಕ್ರಮದ ಬಗ್ಗೆ ಪ್ರಾಧಿಕಾರಕ್ಕೆ ತುರ್ತಾಗಿ ಮಾಹಿತಿ ನೀಡಲು ಕೋರಲಾಗಿದೆ.

ಅಧ್ಯಕ್ಷರಿಂದ ಅನುಮೋದಿತ

ತಮ್ಮ ವಿಶ್ವಾಸಿ,

**ಕಾರ್ಯದರ್ಶಿ**

ಕಾರ್ಯದರ್ಶಿ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ. ಕಟ್ಟಡ,
3ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560 009

SECRETARY
Karnataka Border Area Development Authority
Federation House, FKCCI Building,
3rd Floor, K.G. Road, Bengaluru - 560 009

ಹೆಸರಾಯಿತು ಕರ್ನಾಟಕ Telephone & Fax: 080-22352044 ಉಸಿರಾಗಲಿ ಕನ್ನಡ
E-mail: secretarygadi@karnataka.gov.in, kbada6666@gmail.com, Website: https://kbada.karnataka.gov.in

ಕ್ರ.ಸಂ:ಕಗಪ್ರಅಪ್ರಾ/56/ಆ/2022-23 ದಿನಾಂಕ:14-05-2025

ಇವರಿಗೆ,

**ಸರ್ಕಾರದ ಕಾರ್ಯದರ್ಶಿಗಳು,**
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
**ಕೊಠಡಿ ಸಂಖ್ಯೆ: 212, 2ನೇ ಮಹಡಿ, ವಿಕಾಸಸೌಧ,**
ಡಾ|| ಬಿ.ಆರ್ ಅಂಬೇಡ್ಕರ್ ವೀದಿ,
ಬೆಂಗಳೂರು. – 560001.

ಮಾನ್ಯರೇ,

ವಿಷಯ: ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ:28.03.2025 ರಂದು ನಡೆದ ಸಭೆಯ ನಡವಳಿಯ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ.

ಉಲ್ಲೇಖ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ ದಿನಾಂಕ:28.03.2025 (ಪ್ರತಿ ಲಗತ್ತಿಸಿದೆ)

*******

ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ದಿನಾಂಕ:28-03-2025 ರ ಸಭೆಯಲ್ಲಿ **"ಹೊರರಾಜ್ಯದ ಕನ್ನಡಿಗರ ಶೈಕ್ಷಣಿಕ, ಔದ್ಯೋಗಿಕ ಸೌಲಭ್ಯಗಳು ಹಾಗೂ ಮೀಸಲಾತಿ"** ಕುರಿತಾಗಿ ಸಭೆ ನಡೆಸಿದ್ದು, ಸಭಾ ನಡವಳಿಯ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರಲು ಸೂಚಿಸಿರುವಂತೆ ಇವುಗಳನ್ನು ತಮ್ಮ ಆದ್ಯ ಗಮನಕ್ಕೆ ತರಲಾಗಿದೆ.

ರಾಜ್ಯದ ಗಡಿ ಭಾಗಕ್ಕೆ ಹೊಂದಿಕೊಂಡಿರುವ 06 ಹೊರ ರಾಜ್ಯಗಳಲ್ಲಿನ ಕನ್ನಡ ಭಾಷಿಕರ ಶೈಕ್ಷಣಿಕ, ಸಾಂಸ್ಕೃತಿಕ, ಔದ್ಯೋಗಿಕ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ್ದು, ತಮ್ಮ ಇಲಾಖೆಯಿಂದ ಕ್ರಮಕೈಗೊಳ್ಳಬೇಕಾದ ವಿಷಯಗಳು ಕೆಳಕಂಡಂತಿದೆ.

- ಮಹಾರಾಷ್ಟ್ರ/ಕೇರಳ/ಆಂದ್ರಪ್ರದೇಶ/ತೆಲಂಗಾಣ/ ಗೋವಾ/ತಮಿಳುನಾಡು ಹಾಗೂ ದೇಶದ ಯಾವುದೇ ರಾಜ್ಯಗಳಲ್ಲಿ 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮ ಶಿಕ್ಷಣ ಪಡೆಯುವಂತಹ ಮಕ್ಕಳಿಗೆ ಕರ್ನಾಟಕದಲ್ಲಿನ ಸಮಾಜ ಕಲ್ಯಾಣ/ನವೋದಯ/ ಮೊರಾರ್ಜಿ/ರಾಣಿ ಚನ್ನಮ್ಮ ಇತರೆ ಶಾಲೆಗಳಲ್ಲಿ/ಸರ್ಕಾರಿ ಹಾಸ್ಟೆಲ್‌ಗಳಲ್ಲಿ, ಪಿ.ಯು.ಸಿ ಮತ್ತು ಸಮಾನಾಂತರ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಸೇರ್ಪಡೆಯ ಜೊತೆಗೆ ವಸತಿನಿಲಯಗಳಲ್ಲಿ ಪ್ರವೇಶಕ್ಕೆ ಅನುಮತಿ ನೀಡಬೇಕಾಗಿದೆ ಮತ್ತು ಶೇ.5 ರಷ್ಟು ವಸತಿ ನಿಲಯಗಳಿಗೆ ಮೀಸಲಾತಿ ನೀಡಬೇಕೆಂಬ ಬೇಡಿಕೆಗೆ ಸ್ಪಂದಿಸಬೇಕಾಗಿದೆ.
- ಹೊರರಾಜ್ಯದ ಕನ್ನಡ ಭಾಷಿಕ ಮಕ್ಕಳಿಗೆ ಪ್ರವೇಶ ಪಡೆಯಲು ಕರ್ನಾಟಕ ಸರ್ಕಾರ ತಯಾರಿಸಿರುವ ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಕೆಲವು ನಿರ್ದಿಷ್ಟ ಅಂಶಗಳು (COLUMNS) ಇಲ್ಲದೇ ಇರುವ ಕಾರಣ ಪೋರ್ಟಲ್ ಸಮಸ್ಯೆಯಿಂದ ಇಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನಿರಾಕರಿಸುತ್ತಿದ್ದು, ಈ ಬಗ್ಗೆ ಕ್ರಮವಹಿಸಬೇಕಾಗಿರುತ್ತದೆ.

ಮೇಲ್ಕಂಡ ವಿಷಯಗಳ ಬಗ್ಗೆ ಆದ್ಯತೆ ಮೇಲೆ ಪರಿಹರಿಸುವ ಜೊತೆಗೆ, ಮಾನ್ಯ ಮುಖ್ಯಕಾರ್ಯದರ್ಶಿಗಳ ಸಭೆಯಲ್ಲಿ ತೀರ್ಮಾನಿಸಿರುವಂತೆ 19 ಗಡಿ ಜಿಲ್ಲೆಗಳಿಗೆ (ಗಡಿ ಜಿಲ್ಲೆಯ ಪಟ್ಟಿ ಲಗತ್ತಿಸಿದೆ) ತಮ್ಮ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಗಡಿ ಭಾಗದ ಸಮಗ್ರ ಅಭಿವೃದ್ಧಿಗೆ ಮತ್ತು ಹೊರನಾಡಿನ ಕನ್ನಡಿಗರ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಮಟ್ಟದಲ್ಲಿ ಒಬ್ಬ ಹಿರಿಯ ಅಧಿಕಾರಿಯನ್ನು ಸಮನ್ವಯ ಅಧಿಕಾರಿಯಾಗಿ ನೇಮಕಮಾಡಿ ಆದೇಶ ಹೊರಡಿಸಲು ಕೋರಿದೆ. ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಪ್ರಾಧಿಕಾರಕ್ಕೆ ತುರ್ತಾಗಿ ಮಾಹಿತಿ ನೀಡಲು ಕೋರಲಾಗಿದೆ.

ಅಧ್ಯಕ್ಷರಿಂದ ಅನುಮೋದಿತ

ತಮ್ಮ ವಿಶ್ವಾಸಿ,

ಕಾರ್ಯದರ್ಶಿ

ಕಾರ್ಯದರ್ಶಿ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ. ಕಟ್ಟಡ,
3ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು-560 009

SECRETARY
Karnataka Border Area Development Authority
Federation House, FKCCI Building,
3rd Floor, K.G. Road, Bengaluru - 560 009

ಹಸಿರಾಯಿತು ಕರ್ನಾಟಕ Telephone & Fax: 080-22352044 ಉಸಿರಾಗಲಿ ಕನ್ನಡ
E-mail: secretarygadi@karnataka.gov.in, kbada6666@gmail.com, Website: https://kbada.karnataka.gov.in

ಕ್ರ.ಸಂ:ಕಗಪ್ರಅಪ್ರಾ/56/ಅ/2022-23 ದಿನಾಂಕ:14-05-2025.

ಇವರಿಗೆ,
**ಸರ್ಕಾರದ ಕಾರ್ಯದರ್ಶಿಗಳು,**
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
**ಕೊಠಡಿ ಸಂಖ್ಯೆ: 215, 2ನೇ ಮಹಡಿ, ವಿಕಾಸಸೌಧ,**
ಡಾ|| ಬಿ.ಆರ್ ಅಂಬೇಡ್ಕರ್ ವೀದಿ,
ಬೆಂಗಳೂರು. – 560001.

ಮಾನ್ಯರೇ,

ವಿಷಯ: ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ:28.03.2025 ರಂದು ನಡೆದ ಸಭೆಯ ನಡವಳಿಯ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ.

ಉಲ್ಲೇಖ: ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ ದಿನಾಂಕ:28.03.2025 (ಪ್ರತಿ ಲಗತ್ತಿಸಿದೆ)

*******

ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ದಿನಾಂಕ:28-03-2025 ರ ಸಭೆಯಲ್ಲಿ **"ಹೊರರಾಜ್ಯದ ಕನ್ನಡಿಗರ ಶೈಕ್ಷಣಿಕ, ಔದ್ಯೋಗಿಕ ಸೌಲಭ್ಯಗಳು ಹಾಗೂ ಮೀಸಲಾತಿ"** ಕುರಿತಾಗಿ ಸಭೆ ನಡೆಸಿದ್ದು, ಸಭಾ ನಡವಳಿಯ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರಲು ಸೂಚಿಸಿರುವಂತೆ ಇವುಗಳನ್ನು ತಮ್ಮ ಆಧ್ಯ ಗಮನಕ್ಕೆ ತರಲಾಗಿದೆ.

ರಾಜ್ಯದ ಗಡಿ ಭಾಗಕ್ಕೆ ಹೊಂದಿಕೊಂಡಿರುವ 06 ಹೊರ ರಾಜ್ಯಗಳಲ್ಲಿನ ಕನ್ನಡ ಭಾಷಿಕರ ಶೈಕ್ಷಣಿಕ, ಸಾಂಸ್ಕೃತಿಕ, ಔದ್ಯೋಗಿಕ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ್ದು, ತಮ್ಮ ಇಲಾಖೆಯಿಂದ ಕ್ರಮಕೈಗೊಳ್ಳಬೇಕಾದ ವಿಷಯಗಳು ಕೆಳಕಂಡಂತಿದೆ.

- ಮಹಾರಾಷ್ಟ್ರ/ಕೇರಳ/ಆಂಧ್ರಪ್ರದೇಶ/ತೆಲಂಗಾಣ/ ಗೋವಾ/ತಮಿಳುನಾಡು ಹಾಗೂ ದೇಶದ ಯಾವುದೇ ರಾಜ್ಯಗಳಲ್ಲಿ 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮ ಶಿಕ್ಷಣ ಪಡೆಯುವಂತಹ ಮಕ್ಕಳಿಗೆ ಕರ್ನಾಟಕದಲ್ಲಿನ ಸಮಾಜ ಕಲ್ಯಾಣ/ನವೋದಯ/ ಮೊರಾರ್ಜಿ/ರಾಣಿ ಚನ್ನಮ್ಮ ಇತರ ಶಾಲೆಗಳಲ್ಲಿ/ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಪಿ.ಯು.ಸಿ ಮತ್ತು ಸಮಾನಾಂತರ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಸೇರ್ಪಡೆಯ ಜೊತೆಗೆ ವಸತಿನಿಲಯಗಳಲ್ಲಿ ಪ್ರವೇಶಕ್ಕೆ ಅನುಮತಿ ನೀಡಬೇಕಾಗಿದೆ ಮತ್ತು ಶೇ.5 ರಷ್ಟು ವಸತಿ ನಿಲಯಗಳಿಗೆ ಮೀಸಲಾತಿ ನೀಡಬೇಕೆಂಬ ಬೇಡಿಕೆಗೆ ಸ್ಪಂದಿಸಬೇಕಾಗಿದೆ.
- ಹೊರರಾಜ್ಯದ ಕನ್ನಡ ಭಾಷಿಕ ಮಕ್ಕಳಿಗೆ ಪ್ರವೇಶ ಪಡೆಯಲು ಕರ್ನಾಟಕ ಸರ್ಕಾರ ತಯಾರಿಸಿರುವ ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಕೆಲವು ನಿರ್ದಿಷ್ಟ ಅಂಶಗಳು (COLUMNS) ಇಲ್ಲದೇ ಇರುವ ಕಾರಣ ಪೋರ್ಟಲ್ ಸಮಸ್ಯೆಯಿಂದ ಇಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನಿರಾಕರಿಸುತ್ತಿದ್ದು, ಈ ಬಗ್ಗೆ ಕ್ರಮವಹಿಸಬೇಕಾಗಿರುತ್ತದೆ.

ಮೇಲ್ಕಂಡ ವಿಷಯಗಳ ಬಗ್ಗೆ ಆದ್ಯತೆ ಮೇಲೆ ಪರಿಹರಿಸುವ ಜೊತೆಗೆ, ಮಾನ್ಯ ಮುಖ್ಯಕಾರ್ಯದರ್ಶಿಗಳ ಸಭೆಯಲ್ಲಿ ತೀರ್ಮಾನಿಸಿರುವಂತೆ 19 ಗಡಿ ಜಿಲ್ಲೆಗಳಿಗೆ (ಗಡಿ ಜಿಲ್ಲೆಯ ಪಟ್ಟಿ ಲಗತ್ತಿಸಿದೆ) ತಮ್ಮ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಗಡಿ ಭಾಗದ ಸಮಗ್ರ ಅಭಿವೃದ್ಧಿಗೆ ಮತ್ತು ಹೊರನಾಡಿನ ಕನ್ನಡಿಗರ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಮಟ್ಟದಲ್ಲಿ ಒಬ್ಬ ಹಿರಿಯ ಅಧಿಕಾರಿಯನ್ನು ಸಮನ್ವಯ ಅಧಿಕಾರಿಯಾಗಿ ನೇಮಕಮಾಡಿ ಆದೇಶ ಹೊರಡಿಸಲು ಕೋರಿದೆ. ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಪ್ರಾಧಿಕಾರಕ್ಕೆ ತುರ್ತಾಗಿ ಮಾಹಿತಿ ನೀಡಲು ಕೋರಲಾಗಿದೆ.

ಅಧ್ಯಕ್ಷರಿಂದ ಅನುಮೋದಿತ

ತಮ್ಮ ವಿಶ್ವಾಸಿ,
(signature)
**ಕಾರ್ಯದರ್ಶಿ**

ವಿಷಯ:-ಕರ್ನಾಟಕ ವಿಧಾನ ಪರಿಷತ್ ಸದ್ಯಸರಾದ ಶ್ರೀ.ಶರವಣ ಟಿ.ಎ(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:859(994)ಕ್ಕೆ ಉತ್ತರ ಒದಗಿಸುವ ಬಗ್ಗೆ.

ಪಿಡಿಎಸ್ 40 ಕೆಬಿಎಡಿ 2025

ಕರ್ನಾಟಕ ವಿಧಾನ ವಿಧಾನ ಪರಿಷತ್ ಸದ್ಯಸರಾದ ಶ್ರೀ.ಶರವಣ ಟಿ.ಎ(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:859(994)ಕ್ಕೆ ಉತ್ತರವು ಪ್ರಾಧಿಕಾರದಿಂದ ಮಾಹಿತಿಯನ್ನು ಸ್ವೀಕರಿಸಲಾಗಿದ್ದು, ಸದರಿಯವರು ಸಲ್ಲಿಸಿರುವ ಮಾಹಿತಿಯಂತೆ ಉತ್ತರವನ್ನು ಸಿದ್ದಪಡಿಸಿ ಮಾನ್ಯ ಯೋಜನಾ ಸಚಿವರ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

1) ಉಪ ನಿರ್ದೇಶಕರು)

ಕಂಡಿಕೆ-1ನ್ನು ತಮ್ಮ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

2) ನಿರ್ದೇಶಕರು)

ಕರ್ನಾಟಕ ವಿಧಾನ ಪರಿಷತ್ ಸದ್ಯಸರಾದ ಶ್ರೀ.ಶರವಣ ಟಿ.ಎ(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:859(994)ಕ್ಕೆ ಉತ್ತರವನ್ನು ಸಿದ್ದಪಡಿಸಲಾಗಿದ್ದು, ಮಾನ್ಯ ಯೋಜನಾ ಸಚಿವರ ಅವಗಾಹನೆ ಮತ್ತು ಅನುಮೋದನೆಗೆ ಮಂಡಿಸಿದೆ.

(ನಿರ್ದೇಶಕರು)

4) ಸರ್ಕಾರದ ಕಾರ್ಯದರ್ಶಿರವರು)
ಯೋಜನಾ ಇಲಾಖೆ.

5) ಮಾನ್ಯ ಯೋಜನಾ ಸಚಿವರು)

42